ಪ್ರಬುದ್ಧ ಕರ್ಣಾಟಕ

ಸಂಪುಟ ೩೫—ಸಂಚಿಕೆ ೨

೧೩೬

ವಿಜಯ ಸಂವತ್ಸರ

ಆಷಾಢ ಸಂಚಿಕೆ

•

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೫೩

BVP- 2368
20/9/18

11/317



ಕನ್ನಡ ಸಂಸ್ಕೃತಿ ಸಾಮ್ರಾಜ್ಯದ ಆಧುನಿಕ ಅಧ್ವರ್ಯು

ಶ್ರೀ. ಕೆಂಗಲ್ ಹನುಮಂತಯ್ಯನವರು

ಪ್ರಬುದ್ಧ ಕರ್ಣಾಟಕ

ವಿಜಯ ಸಂವತ್ಸರ | ೧೩೬ | ಆಷಾಢ ಸಂಚಿಕೆ

ನವಿಲುಕಲ್ಲಿನಲ್ಲಿ ಮತ್ತೊಮ್ಮೆ !

ನಾ ಧನ್ಯ ನಾ ಧನ್ಯ ನಾ ಧನ್ಯನಿಂದು
ಉಷಾರವಿಯ ದರುಶನಕೆ ಇಲ್ಲಿಗೈತಂದು !

ಮಾತೆ ಮೈದೋರಿಹಳು : ಕೈಮುಗಿದು ನಿಂದು
ಕಣ್ತುಂಬಿ ನೋಡು ; ಮಾತಾಡದಿರು, ಬಂಧು.
ಆತ್ಮದಾನಂದದಲಿ ಮುಳುಮುಳುಗಿ ಮಿಂದು
ನಾ ಧನ್ಯ ನಾ ಧನ್ಯ ನಾ ಧನ್ಯನಿಂದು !

ತಾಯಿ ಹರಸಿದಳೆನ್ನ ; ನಲ್ಲೆ ವರಿಸಿದಳೆನ್ನ ;
ಗುರುವು ಆಶೀರ್ವದಿಸಿ ಕೃಪೆಯೊಳೆನ್ನ
ಪುರಸದನದಲಿ ಬೆಂದು ಕುದಿವೆದೆಯನೆಳತಂದು
ಕ್ಷೀರಾಬ್ಧಿಗದ್ದಿದನೊ ಅಮೃತಸಿಂಧು ! —ನಾ ಧನ್ಯ . . .

ಹಿಂಜಿದರಳೆಯ ಹಿಂಡೊ ? ಐರಾವತದ ದಂಡೊ ?
ಮಂಜೊ ? ಇಂಗಡಲೊ ? ಸಾಕ್ಷಾತ್ಕಾರವೋ ?
ಮಲೆಯ ತಲೆಯಿಾ ಬಂಡೆಯಲ್ಲೀನ ನಾ ಕಂಡೆ ?
ಷಟ್ಚಕ್ರದಗ್ರದ ಸಹಸ್ರಾರವೋ ? —ನಾ ಧನ್ಯ . . .

ಮಣ್ಣೆಲ್ಲ ಕಣ್ಣಾಗಿ, ಮೃತ್ತೆಲ್ಲ ಚಿತ್ತಾಗಿ,
ಜಗವೆಲ್ಲ ತಾಯ್ ತಳೆದ ತನುವಾದುದೋ ?
ಕವಿಯೆನ್ನ ಸವಿಗಾಗಿ ದಿವಿಜವೃಂದವೆ ನೆರೆದು
ಆನಂದರಸವಿಲ್ಲಿ ಮಡುವಾದುದೋ ? —ನಾ ಧನ್ಯ . . .

ಮಂಜು ತುಂಬಿದ ಕಣಿವೆಯಿಾ ಮಂಜು ಚಿತ್ರದಲಿ
ಕಡಲಿನಿಂದಲ್ಲಲ್ಲಿ ದೀವಿಗಳವೋಲ್
ಕಾಡು ತುಂಬಿದ ಮಲೆಯು ಸಾಲ್‌ನೆತ್ತಿ ತಲೆಯೆತ್ತಿ
ತೋರುತಿರೆ ಚಿನ್ಮಯದಿ ತೇಲ್ವಂತೆವೋಲ್, —ನಾ ಧನ್ಯ . . .

ನನಗಾಗಿ ಸಮೆದಿಹಳು, ಸಂದೇಹವೆನಗಿಲ್ಲ,
ಪ್ರಕೃತಿಯಾಗಿಹ ಪರಾಲೋಕನಾಥೆ.
ಅಲಭ್ಯವೀ ಸಮಯಕ್ಕಪೂರ್ವದೀ ದೃಶ್ಯ :
ಜಗಕೆ ತಾಯಾದರೂ ನನಗುಮಲ್ತೆ ! —ನಾ ಧನ್ಯ . . .

ಬಹುದಿನದ ಪ್ರಾರ್ಥನೆಗೆ ಬಹುದಿವ್ಯ ಫಲವಾಯ್ತು ;
ಮನಕೆ ನೆಮ್ಮದಿಯಾಯ್ತು ; ಧೈರ್ಯವಾಯ್ತು.
ದಿವ್ಯದರುಶನದಿಂದೆ ನವ್ಯಚೇತನವಾಯ್ತು ;
ಭವ್ಯಾನುಭವಕಮೃತಕಲಶವಾಯ್ತು ! —ನಾ ಧನ್ಯ . . .

ಕುವೆಂಪು

ವಿಹಿರೆಂಹರ್

೩

ಅಥವಾ

ಶ್ರೀ ರಾಮಾಯಣದರ್ಶನದಲ್ಲಿ ಸಾಮಾನ್ಯತಾ ಶ್ರೀ

"'ಶ್ರೀ ಸಾಮಾನ್ಯ'ವೆ ಭಗವನ್ ಮಾನ್ಯಂ;
'ಶ್ರೀ ಸಾಮಾನ್ಯ'ನೆ ಭಗವದ್ ಧನ್ಯಂ!
ಸಾಮಾನ್ಯವೆ ಭಗವಂತನ ರೀತಿ;
ಸಾಮಾನ್ಯನೆ ದಿಟ ಭಗವತ್‌ಪ್ರೀತಿ!

* * * * *

ಅಖ್ಯಾತಿಯೆ ಸಾಮಾನ್ಯರ ಶ್ರೀಮನ್ ಮಾರ್ಗಂ."

—'ಶ್ರೀ ಸಾಮಾನ್ಯರ ದೀಕ್ಷಾ ಗೀತೆ'ಯಿಂದ.

೧

ಗತಕಾಲದ ಇತಿಹಾಸದ ಕಡೆಗೆ ಕ್ಷಣಕಾಲ ಸ್ಮೃತಿನೇತ್ರವನ್ನು ಹೊರಳಿಸಿದರೆ ಅವತಾರಪುರುಷರ, ಪ್ರವಾದಿಗಳ, ತತ್ತ್ವಜ್ಞಾನಿಗಳ, ಧರ್ಮಶಾಸ್ತ್ರ ನಿರ್ಮಾತೃಗಳ, ಚಕ್ರವರ್ತಿಗಳ, ಅತಿರಥಮಹಾರಥರ, ಇನ್ನು ಎಷ್ಟೆಷ್ಟೊ ಮಹಾತ್ಮರ ಮೆರೆವಣಿಗೆ ನಮ್ಮ ಕಣ್ಮುಂದೆ ಹಾದುಹೋಗುತ್ತದೆ. ಅವರನ್ನೂ ಅವರ ಮಹಿಮಾಮಯ ಜೀವನವನ್ನೂ ನೆನೆಸಿಕೊಂಡಾಗ ನಮ್ಮ ಪ್ರಾಣಪಕ್ಷಿ ಬಡಕಲಾದರೆ ರೆಕ್ಕೆ ಮುದುಡಿ ತತ್ತರಿಸಿ ಬೀಳುತ್ತದೆ; ಅದು ಶಕ್ತಿಯುತವಾದುದಾದರೆ ಅವರ ಔನ್ನತ್ಯಕ್ಕೆ ಏರುವ ಸಾಧನೆಯಲ್ಲಿ ಪುನೀತವಾಗುತ್ತದೆ. ಇತಿಹಾಸದ ತೇಲುನೋಟಕ್ಕೆ ಜಾಜ್ಜ್ವಲ್ಯಮಾನರಾದ ವ್ಯಕ್ತಿಗಳು ಬೀಳುತ್ತಾರೆಯೆ ಹೊರತು, ಎಲೆಯಮರೆಯ ಕಾಯಿಯಂತೆ ಶುದ್ಧವಾದ ಬಾಳನ್ನು ಬಾಳಿ ಲೋಕಕಲ್ಯಾಣಕ್ಕಾಗಿ ಮೌನತಪಸ್ಸನ್ನು ಆಚರಿಸುತ್ತಿರುವ ಮಹಾತ್ಮರು ಬೀಳುವುದಿಲ್ಲ. ಒಬ್ಬ ತನ್ನ ಸಾಧನೆಯಿಂದ ಸಿದ್ಧಿಯಿಂದ ಲೋಕವನ್ನು ಆಕರ್ಷಿಸಿ, ಸುಪ್ತಚೇತನವನ್ನು ಬಡಿದೆಬ್ಬಿಸಿ, ಬಿರುಗಾಳಿಯಂತೆ ತಿರ್ರನೆ ತಿರುಗಿ ಸಿಡಿಲಿನಂತೆ ಆರ್ಭಟಿಸಿ, ಭೂಕಂಪದಂತೆ ನಡುಗಿಸಿ ಅನೇಕ ಸಾಧಕರನ್ನು ಉದ್ಧರಿಸಿ ಮುಕ್ತಾತ್ಮರನ್ನಾಗಿ ಮಾಡಬಹುದು; ಮತ್ತೊಬ್ಬ ಮಂದಾನಿಲನಂತೆ, ತನ್ನ ಮೌನತಪಸ್ಸಿನಿಂದ ಲೋಕದ ಅರಿವಿಲ್ಲದೆಯೆ ಲೋಕವನ್ನು ಉದ್ಧರಿಸಬಹುದು. ಒಬ್ಬ 'ಅಸಾಮಾನ್ಯ'ನಾದರೆ ಮತ್ತೊಬ್ಬ 'ಸಾಮಾನ್ಯ'; ಒಬ್ಬ ನಿರ್ಝರಿಣಿಯಾದರೆ ಮತ್ತೊಬ್ಬ ಗುಪ್ತ

ಗಾಮಿನಿ. ಆದರೆ ಇಬ್ಬರ ಲಕ್ಷ್ಯವೂ ಒಂದೆ. ಖಂಡದೃಷ್ಟಿಗೆ ಅವರಲ್ಲಿ ತಾರತಮ್ಯಭಾವ ಉದಿಸಿದರೂ ಪೂರ್ಣದೃಷ್ಟಿಗೆ ಇಬ್ಬರೂ ಒಂದೆಯೆ. ಭಗವದ್ದೃಷ್ಟಿಗೆ ಹಿರಿಯ ಕಿರಿಯ ಎಂಬ ಭೇದಭಾವನೆಯೆ ಇಲ್ಲ. ಸೈನ್ಯದಲ್ಲಿ ಮಹಾಯೋಧನ ಪಾತ್ರ ಎಷ್ಟು ಮುಖ್ಯವೊ ಸಾಮಾನ್ಯಯೋಧನ ಪಾತ್ರವೂ ಅಷ್ಟೇ ಮುಖ್ಯ. ಭಗವತ್ಸಂಕಲ್ಪಸಿದ್ಧಿಗೆ ಅಸಾಮಾನ್ಯನ ಜೀವನ ಹೇಗೆ ನಿಮಿತ್ತಸಾಧನವಾಗುತ್ತದೆಯೊ ಹಾಗೆಯೆ ಸಾಮಾನ್ಯನ ಜೀವನವೂ ನಿಮಿತ್ತಸಾಧನವಾಗುತ್ತದೆ. ಭಗವಂತನಿಗೆ ಅಸಾಮಾನ್ಯತೆಗಿಂತ ಸಾಮಾನ್ಯತೆಯಲ್ಲಿಯೆ ಹೆಚ್ಚು ಒಲವರ. 'ಎನಗಿಂತ ಕಿರಿಯನಿಲ್ಲ'ವೆಂಬ ಮಹಾತ್ಮರ ವಾಣಿಯೂ ಈ ತತ್ತ್ವವನ್ನೆ ಸಾರುತ್ತಿದೆ.

ಈ ತತ್ತ್ವ ಶ್ರೀ ರಾಮಾಯಣದರ್ಶನದಲ್ಲಿ ಮೊದಲಿಂದ ಕೊನೆಯತನಕ ಪ್ರತಿಪಾದಿತವಾಗಿದೆ. ಶ್ರೀ ರಾಮಾಯಣದರ್ಶನ ಕತೆಗೆ ಕತೆ, ಕಾವ್ಯಕ್ಕೆ ಕಾವ್ಯ, ದರ್ಶನಕ್ಕೆ ದರ್ಶನ. ಶ್ರೀರಾಮ ಸೀತಾ ಆಂಜನೇಯ ರಾವಣ ಮಂಡೋದರಿ ಶಬರಿ ಮೊದಲಾದವರು ಕವಿ ಕಂಡ ದರ್ಶನದಿಂದ ಮೂಡಿದ ಪ್ರತಿಮೆಗಳು, ಕವಿಯ ಭಾವಾನುಭವಗಳು ಆಕಾರತಾಳಿದ ಮೂರ್ತಿಗಳು. ಒಬ್ಬೊಬ್ಬನೂ ಬರಿಯ ವ್ಯಕ್ತಿಯಲ್ಲ, ಶಕ್ತಿ. ಒಬ್ಬೊಬ್ಬನೂ ಸತ್ಯಧರ್ಮ ಅಹಿಂಸೆ ಭ್ರಾತೃಪ್ರೇಮ ಪತಿವ್ರತಾಶೀಲ ಸ್ನೇಹ ಔದಾರ್ಯ ಸಾಹಸ ಮುಂತಾದ ಹಿರಿಯ ತತ್ತ್ವಗಳಿಗೆ ಪ್ರತಿಮೆಗಳಾಗಿದ್ದಾರೆ. ಕವಿಯ ಬಹುಮುಖಪ್ರತಿಭೆ ಮತ್ತು ಪಾರದರ್ಶಿತ್ವ ಆ ಹಿರಿಯ ವ್ಯಕ್ತಿಗಳಲ್ಲಿ ಎಂತೊ ವಹ್ನಿರಂಹರಂತಹ 'ಸಾಮಾನ್ಯ'ರಲ್ಲಿಯೂ ಭಗವತ್ ಶ್ರೀಯನ್ನು ದರ್ಶಿಸುತ್ತದೆ.

೨

ಶ್ರೀರಾಮಸತಿಯ ಅನ್ವೇಷಣೆಗಾಗಿ ಸತ್ಯವಾಕ್ಯನಾದ ಸುಗ್ರೀವನ ಡಿಂಡಿಮಾಜ್ಞೆಯ ಮೇರೆಗೆ ಮಾಲ್ಯವತ್‌ಪರ್ವತದ ಪ್ರಸ್ರವಣಶಿಖರದಲ್ಲಿ ಒಡ್ಡುಗೂಡಿದ ಸಾಗರ ಸ್ಪರ್ಧಿವಾನರ ಸೈನ್ಯವನ್ನು ಲಕ್ಷ್ಮಣಸಮೇತನಾದ ಶ್ರೀರಾಮನು ನೋಡಲು ಬಂದಾಗ ವಹ್ನಿರಂಹರು ನಮ್ಮ ಕಣ್ಣಿಗೆ ಬೀಳುತ್ತಾರೆ, ಶ್ರೀರಾಮನ 'ಕಣ್ಣಿ'ಗಲ್ಲ. ಸೀತಾವಿಯೋಗಕಾತರನಾದ ಶ್ರೀರಾಮನಿಗೆ ಆ ಅನೀಕಿನಿಯನ್ನು ವಿವರವಿವರವಾಗಿ ನೋಡಲು ಸಮಯವಾದರು ಇದೆಯೆ? ಆದರೂ ಬೆಟ್ಟದಲ್ಲಿ ಕಾಡಿನಲ್ಲಿ ಗಿರಿತಟದಲ್ಲಿ ನದಿತಟದಲ್ಲಿ ಕಣಿವೆಯಲ್ಲಿ ಕೋಡಿನಲ್ಲಿ ಬೀಡುಬಿಟ್ಟಿದ್ದ ಪಡೆಗಳನ್ನು ನೋಡಲು 'ಪಗಲ್ಳೈದುಮಿರುಳ್ಳೈದು' ಹಿಡಿಯಿತಂತೆ! ಸಮದರ್ಶಿಯೂ ಪಾರದರ್ಶಿಯೂ ಆದ ಕವಿಪ್ರತಿಭೆ ಶತಬಲಿ ಸುಷೇಣ ಜಾಂಬವಂತ ಮೊದಲಾದ ವೀರಾದಿವೀರರನ್ನು ಶ್ರೀರಾಮಚಂದ್ರನಿಗೆ ಪರಿಚಯಮಾಡಿಕೊಡುವ ಮುನ್ನವೆ ಶ್ರೀರಾಮಸೇವಾಕಾತರ

ರಾದ ವಹ್ನಿರಂಹರನ್ನು ಪರಿಚಯಮಾಡಿಕೊಡುತ್ತದೆ. ದಶಕೋಟಿ ವಾನರಚಮೂ ನಾಯಕನೂ ಸುಗ್ರೀವಸುಪ್ರಿಯನೂ ಆದ ದಧಿಮುಖನ ದಳದಲ್ಲಿ ವಹ್ನಿ ನಾಮಕಂ,

"\. . . . ಸಾಮಾನ್ಯ
ಸೈನಿಕಂ, ಪುಲಿದೊವಲಿನಂಗಿಯಿಂ ಗುಲಗುಂಜಿ
ಹಾರದಿಂ ಕಣ್ಣು ಕಣ್ಣಿನ ಹೀಲಿಮುಡಿಯಿಂದೆ,
ದಿಗ್ಗಜಸ್ಮರಣೆಯಂ ತರ್ಪ ಬೃಹದಾಕೃತಿಯ
ಧೀರತನುವಿಂದೆ ಮೆರೆವೊಂ . . . .

ತನ್ನ ಬಳಿಯಿದ್ದ ಕುಳ್ಳೊಡಲ ಕೆಳೆಯ ರಂಹನಿಗೆ ಶ್ರೀರಾಮನ ಬರವನ್ನು ತಿಳಿಸುತ್ತಾನೆ. ರಂಹ ಕುಳ್ಳ. ಶ್ರೀರಾಮನನ್ನು ನೋಡುವ ಕಾತರತೆಯಿಂದ ತನ್ನ ಮಿತ್ರ ವಹ್ನಿಯ ಭುಜಕ್ಕೆ ಆತುಕೊಂಡು ಕಾಲತುದಿವೆರಳ ಮೇಲೆ ನಿಲ್ಲುತ್ತಾನೆ. ಆದರೂ ಶ್ರೀರಾಮನ ಆಕೃತಿ ಅವನ ಕಣ್ಣಿಗೆ ಬೀಳುವುದಿಲ್ಲ. ಭಗ್ನಮನೋರಥನಾದ ಅವನು ಅಧಿಕತರ ಕಾತರತೆಯಿಂದ ತನ್ನ ಗಾತ್ರಕ್ಕೆ ತಾನೆ 'ಕಿನಿಸಿಯುಂ ಪೇಸಿಯುಂ ಕುಪ್ಪಳಿಸಿ ನೆಗೆದಡಂ ಬಿಳಿಯ ಬಂಡೆಯ ನೆತ್ತಿಗೇರಿ' ಹೃದಯಕ್ಕೆ ತೃಪ್ತಿಯನ್ನು ಕಣ್ಣಿಗೆ ಸಾರ್ಥಕತೆಯನ್ನು ತಂದುಕೊಳ್ಳುತ್ತಾನೆ. "ಕಾಡಿಡಿದು ಪಳುಮುಚ್ಚಿದರಮನೆಯ ಸಿರಿಯಂತೆ" ಆ 'ಸಾಮಾನ್ಯ' ಸೈನಿಕರಿಗೆ ಶ್ರೀರಾಮ ಕಾಣುತ್ತಾನೆ. ಅವನನ್ನು ನೋಡಿದ ಕೂಡಲೆ ಅವರು ಭಾವಾವೇಗದಿಂದ ರೋಮಾಂಚಗೊಳ್ಳುತ್ತಾರೆ. ಶ್ರೀರಾಮ ಔತ್ತರೇಯ, ದೂರದವನು, ಅವನಿಗಾಗಿ ತಮ್ಮ ಬಾಳ್ದಲೆಯನ್ನು ಅರ್ಪಿಸುವುದೇತಕ್ಕೆ ಎಂಬ ಅಶ್ರದ್ಧೆ ಅವರಲ್ಲಿ ಮೂಡಲಿಲ್ಲ. ಅವರು ಸೈನ್ಯದಲ್ಲಿ ಸಾಮಾನ್ಯರಾದರೂ ಶ್ರದ್ಧೆಯಲ್ಲಿ ಯಾರಿಗೂ ಕಡಮೆಯಲ್ಲ. ಆ ಶ್ರದ್ಧೆಯಿಲ್ಲದಿದ್ದರೆ

"ಸಾರ್ಥಕಂ ನಾಂ ಬಂದುದೀತಂಗೆ
ನಮ್ಮ ಬಾಳಂ ಬೀಳ್ವುದೊಂದೈಸೆ ಸಯ್ಪುಜ್ಜುಗಮ್!
. . . .
ಪೂರ್ವಜನ್ಮದ ಪುಣ್ಯಮೈಸೆ ನಾಮಿನ್ನರಂ
ಬೆರಸಿ ರಕ್ಕಸರೊಡನೆ ಕಾದುವೆಮ್! ಧನ್ಯರಾಮ್!

ಎಂಬ ಮಾತುಗಳು ಅವರ ಬಾಯಿಂದ ಹೊರಬರುತ್ತಿದ್ದುವೆ?

೩

ವಹ್ನಿರಂಹರು ಶ್ರೀರಾಮಚಂದ್ರಮೂರ್ತಿಯನ್ನು ಕಂಡು ತೃಪ್ತಿಗೊಂಡರು. ಆದರೆ ಈ ಅಜ್ಞಾತಸಾಮಾನ್ಯರ ಅಸಾಮಾನ್ಯಶ್ರದ್ಧೆ ಶ್ರೀರಾಮನಿಗೆ ಅರಿವಾದುದು ಕಡಲದಡದಲ್ಲಿ ಸೈನ್ಯ ಬೀಡುಬಿಟ್ಟಿದ್ದಾಗ. ಈ ಸಾಮಾನ್ಯತಾ ಅಸಾಮಾ

ನ್ಯತೆಗಳ ಪವಿತ್ರಸಮಾಗಮಕ್ಕೆ ಕವಿ ಸೃಷ್ಟಿಸಿರುವ ಸಂದರ್ಭ ಎಂಥದು! ಆಗ ತಾನೆ ಸಂಜೆಹರಿದು ಕತ್ತಲು ಮುತ್ತುತ್ತಿದೆ. ಸಾಗರ ಸೈನ್ಯಸಾಗರಗಳೆರಡೂ ಮೌನವನ್ನಾಲಂಗಿಸಿವೆ. ಗಿರಿಧರಿತ್ರಿ ಮುಸಿಮುದ್ದೆಯಾಗಿದೆ. ಲಂಕಾದ್ವೀಪದ ಕಡೆಗೆ ಅಟ್ಟಿದ ದೃಷ್ಟಿಯುಳ್ಳವನಾಗಿ, ಅಪಾರ ಪಾರಾವಾರವನ್ನು ಈಕ್ಷಿಸುತ್ತ ಚಿಂತಾಬ್ಧಿಯಲ್ಲಿ ಮುಳುಗಿದ್ದ ಶ್ರೀರಾಮ ಅಗ್ನಿಪುತ್ರನೀಲನನ್ನು ಏಕಾಂತಸಂಭಾಷಣೆಗೆ ಕರೆಯುತ್ತಾನೆ. ನೂರು ಯೋಜನ ವಿಸ್ತಾರದ ಸಾಗರವನ್ನು ದಾಟುವ ಬಗೆ ಹೇಗೆಂದು ಅವನನ್ನು ಪ್ರಶ್ನಿಸುತ್ತಾನೆ. ಸಹಜಮೌನಿಯಾದ ನೀಲ ಉಚಿತ ಉತ್ತರವನ್ನು ನೀಡುತ್ತಾನೆ. ಶರಧಿತರಣಕಾತರತೆಗಿಂತ ಸೀತಾಸಮಾಗಮ ಕಾತರತೆಗಿಂತ ರಾಮನಿಗೆ ಕಪಿಸೈನ್ಯಕ್ಷೇಮಕಾತರತೆ ಅಧಿಕವಾಗಿದೆ. ತನ್ನದೊಂದು ಸುಖಕ್ಕಾಗಿ ಬಹುಜನರ ಬಾಳನ್ನು ಬೇಳ್ವಿಮಾಡುವುದು ಸರಿಯೆಯೆಂದು ಶಂಕಿಸುತ್ತಾನೆ:

". . . . . ಬಹು ಜನರ
ಸತಿಸುತರ ಸಂಸಾರ ಸುಖವನೇತಕೆ ನನ್ನ
ಮೇಣೆನ್ನ ಸತಿಯ ಮುಂದಣ ಅನಿಶ್ಚಿತ ಸುಖಕೆ
ಬೇಳ್ವುದೆಂದೆದೆ ಚುಚ್ಚುತಿಹುದೆನಗೆ, ಅಗ್ನಿಭವ."

ಇದಕ್ಕೆ ಪ್ರತಿಯಾಗಿ ಪ್ರಾಜ್ಞನಾದ ನೀಲನ ಮಾತು ಬಾಣದಂತೆ ಹೊರಬರುತ್ತದೆ:

"ಸ್ವಾರ್ಥಮಲ್ತೀ ಸಾಹಸಂ. ಪುರುಷಾರ್ಥಮೊಂದು
ಗಂತವ್ಯಮಾ ತ್ಯಾಗಯಜ್ಞಕ್ಕೆ. ನೀನುಮಾ
ದೇವಿಯುಂ ಪ್ರತಿಮೋಪಮರ್ ಮಾತ್ರರೈ, ಪ್ರಾಜ್ಞ"

ಕಪಿವೀರರ ಸಾಹಸೇಚ್ಛೆ ಸ್ವಾರ್ಥಮೂಲವಾದುದಲ್ಲ. ಭಕ್ತನಿಲ್ಲದ ಗುಡಿಯಂತೆ ಕ್ರಿಯಾತ್ಮಕವಲ್ಲದ ಲೋಕಕಲ್ಯಾಣಕರವಲ್ಲದ ಸಾಹಸ ವ್ಯರ್ಥವಾಗುತ್ತದೆ. ಜಗತ್ಕಲ್ಯಾಣಕ್ಕಾಗಿ ಎಸಗಿದ ಸಾಹಸದಿಂದ ಪುರುಷಾರ್ಥಗಳು ಲಭಿಸುತ್ತವೆ. ಆ ಸಾಹಸಕ್ಕೆ ರಾಮಸೀತೆಯರು ಪ್ರತಿಮೆಗಳು. ಇದು ಮಹಾತ್ಮರಾದ ನೀಲಾಂಜನೇಯರ ಮತವಷ್ಟೇ ಅಲ್ಲ, ಸಾಮಾನ್ಯರಾದ ವಹ್ನಿರಂಹರ ಮತವೂ ಅಹುದು.

ಶ್ರೀರಾಮನೀಲರ ಸಂಭಾಷಣೆ ಹೀಗೆ ಹರಿಯುತ್ತಿರುವಾಗ ವಹ್ನಿರಂಹರ ಸುಳಿವು ಶ್ರೀರಾಮನ ಕಣ್ಣಿಗೆ ಬೀಳುತ್ತದೆ. ರಾಮನ ಆಣತಿಯಂತೆ ನೀಲ ಅವರನ್ನು ಸನಿಹಕ್ಕೆ ಕರೆಯುತ್ತಾನೆ. ಬಂದವರು ಶ್ರೀರಾಮನೀಲರಿಗೆ ನಮಸ್ಕರಿಸುತ್ತಾರೆ. ಸ್ನೇಹಶೀಲನಾದ ರಾಮ ಅವರ ವೃತ್ತಾಂತವನ್ನು ತಿಳಿಯುವ ಸಲುವಾಗಿ ಪ್ರಶ್ನೆಹಾಕುತ್ತಾನೆ. ವಹ್ನಿ ಉತ್ತರಕೊಡುತ್ತಾನೆ. "ನೀಮಾವ ಯುದ್ಧದೊಳ್ ಸುರಿತವರ್?" ಎಂದುದಕ್ಕೆ ವಹ್ನಿ

". . . . . . ವಜ್ರಮುಷ್ಟಿಯ ಮಲ್ಲಯುದ್ಧದಿ
ಪೆಸರ್ವೆತ್ತ ಕಲಿಯೀತನೆನ್ನ ಮಿತ್ರನ್. ಕಾಡಾನೆಯನ್
ಕೋಡುಡಿದು, ನೆತ್ತಿಯೆ ಪಿಸುಳ್ವಂತೆ, ನಾವೆಲ್ಲ
ನೋಡೆ, ಮೋದಿದನೊರ್ಮೆ, ನಾಂ ಬಂದ ಬಟ್ಟೆಯೊಳ್
ಮೊನ್ನೆ !"

ದೀರ್ಘದೇಹಿಯೂ, ಅಸಮಸಾಹಸಿಯೂ ಆದ ವಹ್ನಿ ಮೊದಲು ತನ್ನ ಸಾಹಸಪರಂಪರೆಯನ್ನು ವರ್ಣಿಸಲಿಲ್ಲ. ಸ್ವಗುಣಕಥನ ನಿರಾಸಕ್ತಿಯಲ್ಲಿ ಅವನ ವಿನಯ, ಮಿತ್ರನ ಗುಣಕಥನದಲ್ಲಿ ಅವನ ಔದಾರ್ಯ ಎದ್ದು ಕಾಣುತ್ತವೆ. ಪೃಥುಲ ಕುಬ್ಜ ರಂಹನೇ ಹೀಗಿರಬೇಕಾದರೆ ವಹ್ನಿಯ ಸಾಹಸವೆಂಥದಿರಬೇಕು. ಶ್ರೀರಾಮನೆ ಆ ವಿಷಯವನ್ನು ಪ್ರಸ್ತಾಪಿಸುತ್ತಾನೆ. ರಂಹನ ಗುಣಕಥನವನ್ನು ಎಡೆತಡೆಯಿಲ್ಲದೆ ಮಾಡಿದ ವಹ್ನಿಯ ನಾಲಗೆಯ ವೇಗ ಕುಗ್ಗಿ ವಿರಮಿಸುತ್ತದೆ. ಅಷ್ಟರಲ್ಲಿ ರಂಹನ ರೂಕ್ಷ ಜಿಹ್ವೆ ಉತ್ತರ ಕೊಡುತ್ತದೆ:

". . . . . ಗಗನಗಮನದೊಳ್ ನಿರುಪಮನ್
ವೈರಿಗಜ ಸಿಂಹನೀ ವಹ್ನಿ ದೇವಂ ! ಮಹಾ
ಮಾಯಾವಿ, ಮೇಣ್, ಕಾಮರೂಪಿ ! ಬಂಡೆಯ ನೆಗಹಿ
ಕವಣೆಕಲ್ ಬೀರಿದನೆನಲ್, ಬಲಿದ ಕೋಂಟೆಗಳ್
ಬಿರಿವುವೀತಂಗೆ ! ಬಿಲ್ ಬಿಜ್ಜೆಯೀತಂಗೊಂದು
ಮಕ್ಕಳಾಟಂ ! . . . ."

ವಹ್ನಿ ಅವನನ್ನು ಮುಂದೆ ಮಾತಾಡಗೊಡದೆ "ರಾಜೇಂದ್ರ, ಮನ್ನಿಸೀ ಮಿತ್ರನ ತ್ಯುತ್ಸಾಹ ಜಲ್ಪಮಂ" ಎನ್ನುತ್ತಾನೆ. ರಂಹ ಮಾಡಿದ ಸಾಹಸವರ್ಣನೆಗೆ ಸಾಕ್ಷಾತ್ ಪ್ರತಿಮೆಯಾಗಿ ವಹ್ನಿಯೆ ಮುಂದೆ ನಿಂತಿರುವಾಗ ರಾಮನಿಗೆ ಸಂದೇಹ ಮೂಡುವುದೇ? "ನಿನ್ನ ನೋಡಿದರಾತನೊರೆದನತ್ಯಲ್ಪಮಂ, ವಹ್ನಿ!" ಎಂದು ಹೇಳುತ್ತಾನೆ. ಸಹಜ ವಿನಯಶೀಲನಾದ ವಹ್ನಿ ತಟಕ್ಕನೆ "ದಧಿಮುಖೇಂದ್ರನ ದಳದಿ ನಾನೊರ್ವನ ತ್ಯಲ್ಪನೆಯೆ ದಿಟಂ, ದೇವ" ಎಂದು ನುಡಿಯುತ್ತಾನೆ.

ವಹ್ನಿಯ ಈ ವಿನಯಶೀಲ ಶ್ರೀರಾಮನ ಕಾತರತೆಯನ್ನು ಮತ್ತಷ್ಟು ಹೆಚ್ಚಿಸುತ್ತದೆ. ತನ್ನೊಬ್ಬನ ಸುಖಕ್ಕಾಗಿ ಇಂಥ ಸೈನಿಕರ ಮತ್ತು ಅವರ ಮಡದಿಮಕ್ಕಳ ಸುಖವನ್ನು ಬಲಿಗೊಡುವುದು ತರವೆಯೆಂದು ಚಿಂತಿಸುತ್ತಾನೆ. "ನಿನಗೆ ಸಹಧರ್ಮಿಣಿಯ ಸುಖಸಂಗಮಿರ್ಪುದೇನಯ್ ?" ಎಂದು ಅವನನ್ನು ಪ್ರಶ್ನಿಸುತ್ತಾನೆ. ಆ ಪ್ರಶ್ನೆಯಲ್ಲಿ ಪರೀಕ್ಷಣ ಮನೋಭಾವದ ಅಭಾವವೇನೂ ಇಲ್ಲ. ವಾನರ ಸಿಂಹಾಸನದಲ್ಲಿ ಶ್ರೀರಾಮನಿಂದ ಸುಪ್ರತಿಷ್ಠಿತನಾದ ಸುಗ್ರೀವ ಶ್ರೀರಾಮನ ಯುದ್ಧೋದ್ಯಮ

ದಲ್ಲಿ ನೆರವಾಗುವುದೇನೊ ಸಹಜವೆ. ಆದರೆ ವಹ್ನಿರಂಹಾದಿ ಸೈನಿಕರೊ? ತಮ್ಮ ಒಡೆಯನಿಗಾಗಿ ಕೊನೆಯುಸಿರಿರುವತನಕ ಹೋರಾಡುವುದು ಸರಿ. ಈಗಲಾದರೊ ಹಿಂದೆಂದೂ ಪರಿಚಯವಿರದ ವ್ಯಕ್ತಿಗಾಗಿ ಪ್ರಾಣವನ್ನು ಅರ್ಪಿಸಬೇಕಾಗಿದೆ.

ಅಂದಿನಿಂದ ಇಂದಿನತನಕ ಯುದ್ಧದ ಬಗೆಯೆ ಇಂಥದಾಗಿದೆ. ಪ್ರಥಮಮಹಾಯುದ್ಧವೊ, ದ್ವಿತೀಯ ಮಹಾಯುದ್ಧವೊ, ಕೊರಿಯ ಕದನವೊ, ಟ್ರೋಜನರ ಸಂಗ್ರಾಮವೊ, ಕುರುಕ್ಷೇತ್ರಸಂಗರವೊ; ಯಾವುದಾದರೇನು?—ಎಲ್ಲದರ ಹಿಂದುಗಡೆ ಯಾವುದೊ ಒಬ್ಬ ವ್ಯಕ್ತಿಯ ಅಥವಾ ಕೆಲವು ವ್ಯಕ್ತಿಗಳ ಕೈವಾಡವಿದ್ದೇ ಇರುತ್ತದೆ; ಅವರ ಆಶೆ ಆಕಾಂಕ್ಷೆ, ಅವರ ಅಧಿಕಾರಲಾಲಸೆ, ಸ್ಥಾನಮಾನದ ಪಿಪಾಸೆ, ಅಹಂಕಾರ ಮೂಲವಾದ ಇನ್ನೆಷ್ಟೊ ಭ್ರಾಂತಿಗಳು ಗುಪ್ತವಾಗಿ ಕೆಲಸಮಾಡುತ್ತಿರುತ್ತವೆ. ರಾಮರಾವಣರ ಯುದ್ಧವನ್ನು ಕೊರಿಯ ಕದನಕ್ಕೆ ಸಮನಾಗೆಣಿಸಿ ಕೇವಲ ಲೌಕಿಕವ್ಯವಹಾರದ ಮಟ್ಟದಿಂದ ಪರ್ಯಾಲೋಚಿಸಿದರೆ ರಾಮಾಯಣದ ಹಿರಿಯ ವ್ಯಕ್ತಿಗಳೂ ಮಹಾಪರಾಧಿಗಳಾಗುತ್ತಾರೆ. ಇಲ್ಲಿ ಬರುವ ಪ್ರತಿಯೊಂದು ಘಟನೆ, ಪ್ರತಿಯೊಂದು ಕ್ರಿಯೆ, ಪ್ರತಿಯೊಬ್ಬ ವ್ಯಕ್ತಿಯ ನಡೆನುಡಿಗಳು ಈಶ್ವರೇಚ್ಛಾಸೂತ್ರನಿಬದ್ಧವಾದುವು ಎಂಬುದನ್ನು ಗಮನಿಸಬೇಕು. ರಾಮರಾವಣರ ಯುದ್ಧ ಸೃಷ್ಟಿವಿಕಾಸಕ್ರಮದಲ್ಲಿ ಅನಿವಾರ್ಯವಾಗಿ ಸಂಭವಿಸಬೇಕಾದ ಘರ್ಷಣೆಗೆ ಪ್ರತಿಮಾರೂಪದಂತಿದೆ. ಕೊರಿಯಾ ಕದನದಿಂದ ದ್ವೇಷಾಸೂಯೆಗಳು ಮಾಯವಾಗುವುದರ ಬದಲು ಉಲ್ಬಣವಾಗುತ್ತವೆಂಬುದು ಐತಿಹಾಸಿಕ ಸತ್ಯಸಂಗತಿಯಾಗಿದೆ. ಆದರೆ ರಾಮರಾವಣರ ಯುದ್ಧದಲ್ಲಿ ಕೊನೆಗೆ ಕಾಮದ ದ್ವೇಷದ ಮಾತ್ಸರ್ಯದ ಅಹಂಕಾರದ ಕಿಲುಬು ಸಂಪೂರ್ಣವಾಗಿ ನಶಿಸಿ, ಆ ಕಾಮವೆ ಆ ದ್ವೇಷವೆ ಆ ಮಾತ್ಸರ್ಯವೆ ಸ್ವರ್ಗೀಯ ಪ್ರೇಮವಾಗಿ, ಆನಂದವಾಗಿ ಪರಿಣಮಿಸುವುದನ್ನು ಕಾಣುತ್ತೇವೆ. ಭೂಮದ ಸಂಪರ್ಕಮಹಿಮೆಯಿಂದ ಅಲ್ಪತ್ವ ತಾನಾಗಿಯೆ ಅಳಿದುಹೋಗುತ್ತದೆ. ಇಡೀ ವಾನರ ಸೈನ್ಯಕ್ಕೆ ಪ್ರತಿನಿಧಿಸ್ವರೂಪರಂತಿರುವ ವಹ್ನಿರಂಹರು ಶ್ರೀರಾಮನ ಸಾನ್ನಿಧ್ಯಮಹಿಮೆಯಿಂದ ಆತ್ಮಸಂಸ್ಕೃತರಾಗಿದ್ದಾರೆ, ಸಾಧನಾನಿಷ್ಠರಾಗಿದ್ದಾರೆ. ಆದುದರಿಂದಲೆ ತಾವು ಕೈಗೊಂಡಿರುವ ಸಾಹಸೋದ್ಯಮ ಆತ್ಮಕಲ್ಯಾಣಕಾರಿಯೆಂದು ದೃಢವಾಗಿ ನಂಬಿಕೊಂಡಿದ್ದಾರೆ. ಒಮ್ಮೊಮ್ಮೆ ಅವರ ಮಾತುಗಳಲ್ಲಿ ಎದೆಗುದಿ ಗೋಚರವಾಗುತ್ತದೆ, ನಿಜ. ಆ ಎದೆಗುದಿಗೆ ಮಿತ್ರವಾತ್ಸಲ್ಯ ಬಂಧುಪ್ರೇಮ ಕಾರಣವೆ ಹೊರತು ಅಶ್ರದ್ಧೆಯಲ್ಲ, ಅವಿಶ್ವಾಸವಲ್ಲ. ಶ್ರೀರಾಮ "ನಿನಗೆ ಸಹಧರ್ಮಿಣಿ ಇರುವಳೆ" ಎಂದು ಕೇಳಿದಾಗ ವಹ್ನಿ "ಇರ್ದುದೆನ್ನೊರೊಳಗೆ" ಎನ್ನುತ್ತಾನೆ. ಈ ಮಾತಿನಲ್ಲಿ ಅವನ ಎದೆನೋವಿನ ಮೊರೆತ ಕೇಳಿಸಬಹುದು. ಆದರೆ ಪತ್ನೀಪುತ್ರ

ವತ್ಸಲರಾದ ಜನರಾಗಲೀ, ಪತ್ನೀವಿರಹಾನಲದಗ್ಧನಾದ ಶ್ರೀರಾಮಚಂದ್ರನಾಗಲೀ ಅವನ ವಿಷಯದಲ್ಲಿ ಅನುಕಂಪೆಯನ್ನು ತೋರದಿರಲಾರರು. ಶ್ರೀರಾಮ ನಗುತ್ತ ವಹ್ನಿಯನ್ನು ಕುರಿತು

"‥ . . . . ಇರ್ದುದೇನ್ ?
ಅಯ್ಯೊ ಇರ್ಪುದನುಳಿದು ಬಂದು ಸಂಕಟಕೇಕೆ
ಸಿಲ್ಕಿದಯ್ ? ನಿನ್ನವೊಲೆ ನಿನ್ನಾಕೆಯುಂ ದುಃಖಿ!"

ಎಂದನು. ಮತ್ತೆ ಸುಯ್ದು ಕೇಳಿದನು "ನನ್ನ ಕತದಿಂದಾದುದಲ್ತೆ ನಿಮಗೆ ಬನ್ನಮ್ ವಹ್ನಿ?"

ರಾಮನ ದುಃಖವಹ್ನಿಗೆ ಸಿಕ್ಕಿ ತತ್ತರಿಸಿದ ರಣವ್ರತ ವಹ್ನಿಗೆ ತನ್ನ ದೌರ್ಬಲ್ಯ ಅರ್ಥವಾಗುತ್ತದೆ. ಹೃದಯಕುಹರದಲ್ಲಿ ಅವಿತಿದ್ದ ಮೋಹವನ್ನು ಭಸ್ಮಮಾಡುತ್ತಾನೆ. ಕೈಮುಗಿದು ಮೊಳಕಾಲೂರಿ ಬೇಡಿಕೊಳ್ಳುತ್ತಾನೆ. ರಾಮ ಮತ್ತೆ ಕೇಳುತ್ತಾನೆ, "ಮಕ್ಕಳಿಹರೇ ನಿನಗೆ?"

"ಇರ್ಪನೊರ್ವನ್, ದೇವ"

"ಚಿಕ್ಕವನೆ?"

"ಅಲ್ಲದಿರೆ ನನ್ನ ಪಕ್ಕದೊಳಿರನೆ ನಿನ್ನ ಸೇವೆಯ ದೇವಕಾರ್ಯಕ್ಕೆ?"

"ಅವರ್ಗಾರ್ ರಕ್ಷಕರ್?"

"ನಾನೆ!"

ಹೃದಯಕಂಪನಕಾರಿಯಾದ ಈ ಸಂಭಾಷಣೆಯಲ್ಲಿ ವಹ್ನಿಯ ಪರಿವರ್ತಿತ ಮನೋಧರ್ಮವೂ, ಶ್ರೀರಾಮನ ಸಂಕಟವೂ ಸ್ಪಷ್ಟವಾಗಿ ವ್ಯಕ್ತಿಗೊಂಡಿವೆ. ಅವು ಅನುಭವೈಕ ವೇದ್ಯ. ವಹ್ನಿ "ನಾನೆ" ಎಂದು ಹೇಳುವುದೂ, ರಾಮ "ನೀನೆ" ಎಂದು ಮತ್ತೆ ಮತ್ತೆ ನೆನೆಯುವುದೂ ಭಾವಗರ್ಭಿತವಾಗಿದೆ. ಪುತ್ರವ್ಯಾಮೋಹದಿಂದ ಮರಣಹೊಂದಿದ ದಶರಥನ ಮಗ ಶ್ರೀರಾಮ ವಹ್ನಿಯ ಕಣ್ಣುಗಳನ್ನೆ ಕರುಣೆಯಿಂದ ನೋಡಿ "ಮರಣದೊಳ್ ರಣಮಿಹುದು ವಹ್ನಿ; ಹಣೆಬರೆಹಮೊರೆಯುವುದಿರ್ಕೆ ಸಾರುತಿದೆ ಕೈಬರೆಹಮುಂ" ಎಂದು ಹೇಳುತ್ತಾನೆ. ಆ ಮಾತಿಗೆ ವಹ್ನಿ ನಕ್ಕು ಅಳುಕಿನಿತಿಲ್ಲದೆಯೆ ತನ್ನ ಹೃದಯವನ್ನು ಬಿಚ್ಚಿ ಹೇಳುತ್ತಾನೆ: "ನಾವು ಯಾವ ಧರ್ಮಕ್ಕಾಗಿ ಪ್ರಾಣಾರ್ಪಣೆ ಮಾಡಲು ಸಿದ್ಧರಾಗಿದ್ದೇವೆಯೊ ಆ ಧರ್ಮವೆ ಈ ಲೋಕವನ್ನು ರಕ್ಷಿಸುತ್ತದೆ; ನನ್ನ ಸತಿಸುತರು ಈ ಲೋಕದಿಂದ ಹೊರತಲ್ಲ. ಒಂದು ಪಕ್ಷ ಸತ್ತರೂ ಬದುಕಿಗಿಂತ ಸಾವೆ ಮೇಲು. ದಶಕಂಠ ಕದ್ದೊಯ್ದಿರುವುದು ಒಬ್ಬನ ಸತಿಯನ್ನಲ್ಲ, **ಸತಿತನ**ವನ್ನು. ಈ ಸತಿತನವನ್ನು ರಕ್ಷಿಸಲಾರದ ಪುರುಷನ

ಬಾಳು ವ್ಯರ್ಥ." (ಲಂಕಾ ಸಂಪುಟಂ—ಸಂಚಿಕೆ ೬—ಸಾಲು ೨೭೬ ರಿಂದ ೨೮೭). ಜೀವನದ ಧರ್ಮಸೂಕ್ಷ್ಮತೆ ಮತ್ತು ರಾಮರಾವಣರ ಯುದ್ಧದ ತತ್ವಾರ್ಥ ಈ ಮಾತಿನಲ್ಲಿ ಅಡಕವಾಗಿವೆ. ವಹ್ನಿ ಮಾತನ್ನು ಮುಂದುವರಿಸಿ "ರಘುವರ, ಸುರಕ್ಷಿತರ್ ನನ್ನವರ್ ನಿನ್ನ ಈ ಕೇಳ್ದ ಕುಶಲಪ್ರಶ್ನ ಕೃಪೆಯಿಂದಮುಂ!" ಎಂದು ಹೇಳುತ್ತಾನೆ. ಭಗವಂತ ಕೇಳುವ ಪ್ರಶ್ನೆಯೆ ಭಕ್ತರಿಗೆ ವರವಾಗಿ ಪರಿಣಮಿಸುತ್ತದೆಯಲ್ಲವೆ?

ದಿನ ಬೆಳಗಾದರೆ ಸಕಲ ಜನರ ನಾಲಗೆಯಲ್ಲಿ ತಾಂಡವವಾಡುತ್ತಿರುವ, ಅರ್ಥವರಿಯದೆ ಬಳಸುತ್ತಿರುವ 'ಸಂಸ್ಕೃತಿ' ಪದದ ನಿಜವಾದ ಅರ್ಥ ವಹ್ನಿಯ ಮಾತುಗಳಲ್ಲಿ ಅಡಕವಾಗಿದೆ. ಶ್ರೀರಾಮನೆ ಅವನನ್ನು ಮೆಚ್ಚಿಕೊಂಡು ಗೌರವದಿಂದ ಹೇಳಿರುವ ಮಾತುಗಳು ಅವನ ಹಿರಿಮೆಗೆ ಸಾಕ್ಷಿಯಾಗಿವೆ:

"ನಿಮ್ಮ ಸಂಸ್ಕೃತಿ ಮಿಗಿಲ್ ನಿಮ್ಮ ನಾಗರಿಕತೆಗೆ
ಪಿರಿದು, ಸೇನಾನಿ!" . . . . , . .

೪

ಅಂದು ಶ್ರೀರಾಮರಾವಣರ ಯುದ್ಧದ ಕೊನೆಯ ಹಂತ. ರಾವಣನ ಮೂಲಬಲವೆಲ್ಲ ರಾವಣರೂಪಿಯಾಗಿ ವಾನರಧ್ವಜಿನಿಯನ್ನು ತೊತ್ತಳ ತುಳಿಯುತ್ತಿತ್ತು. ದಧಿಮುಖನ ವೀರದಳ ರಾವಣನ ಮೂಲಬಲಕಿದಿರಾಗಿ ಯುದ್ಧಮಾಡಿ ಬಹುಮಂದಿ ಕಡಿದಡವಿಯಂತೆ ಕೆಡೆದಿತ್ತು. ವಹ್ನಿರಂಹರೂ ಅಸಾಮಾನ್ಯ ತೇಜದಿಂದ ಕಾದಿದರು:

". . . . . . . ನುರ್ಗಿ ಬಂದಶ್ವಮಂ ಹೊಡೆ ಬಿರಿಯೆ
ಬಡಿದು ಕೊಂದರು. ಹಸ್ತಿ ಮೇಲ್ವಾಯೆ ಗುಂಡಿಟ್ಟು
ಜರ್ಜರದರದರ ಮಂಡೆಯಂ. ರಥಂ ಮುಂಬರಿಯೆ
ಮುರಿದರು ರಥಾಂಗಮಂ ಬಲ್ಗದಾ ಮುಷ್ಟಿಯಿಂ."

ಶ್ರೀರಾಮನ ಸೈನ್ಯದ ಯೋಧರೆಲ್ಲ ತಮ್ಮ ಹರಣದ ಹಂಗನ್ನು ಮರೆತು ಹೋರಾಡಿದರೂ ಅವರ ಕಯ್ಯೆ ಇಳಿಮುಖವಾಗುತ್ತಿತ್ತು. ಪ್ರಳಯಕಾಲದ ಮೃತ್ಯು ನರ್ತನವೆಂಬಂತೆ ದೈತ್ಯಸೈನ್ಯ ಶ್ರೀರಾಮನ ಸೈನ್ಯದಮೇಲೆ ಶತಾಧಿಕ ಬಲ್ಮೆಯಿಂದ ಬಿದ್ದಿತು. ವಿಶ್ವಕರ್ಮನ ಸುತ ನಳನ ರಕ್ಷಣೆಯ ಸೈನ್ಯವೆಲ್ಲ ಓಟಕೀಳಲಾರಂಭಿಸಿತು. ಪ್ರಾಣಮಿತ್ರಕ್ಷೇಮಕಾತರನಾದ ವಹ್ನಿ ಮುಂದೆ ಮುಂದೆ ನುಗ್ಗುತ್ತಿದ್ದ ರಂಹನನ್ನು ಕೂಗಿ ಕರೆಯುತ್ತಿದ್ದನು. "ಜಗುಳ್ವಚಲಮಂ ಹಿನ್ನೂಂಕಲೆಳಸುವ ವನವರಾಹನೋಲಂತೆ", ರಾವಣನ ಸೈನ್ಯದ ಬಿರುಬಿಗೆ ಎದೆಗೊಟ್ಟು, ಅಳವು ಕುಸಿಯುತ್ತಿದ್ದರೂ

ಹಿಮ್ಮೆಟ್ಟದೆ ರಂಹ ಹೋರಾಡುತ್ತಿದ್ದನು. ಅತಿರಥ ಮಹಾರಥರು ಧೈರ್ಯಗುಂದಿ ಪಲಾಯನಮಾಡುವಾಗ ರಂಹನ ಸಾಮರ್ಥ್ಯಸಾಹಸ ಎಷ್ಟು ಹೊತ್ತು ತಾನೆ ಅಪ್ರತಿಹತವಾಗಿ ಮೆರೆದಾವು ? ಕೊನೆಗೆ ಗಾಯವಡೆದು ಭೂತಲಶಾಯಿಯಾದನು. ಮೆಲ್ಲಮೆಲ್ಲನೆ ಹಿಂಜರಿಯುತ್ತಿದ್ದ ವಹ್ನಿ ಮುನ್ನುಗ್ಗಿ ಬಂದು ರಂಹನನ್ನು ಕೌಂಕುಳಲ್ಲಿ ಇರುಕಿಕೊಂಡು ಓಡಿಹೋಗುವಾಗ ಆಂಜನೇಯನ ದೃಷ್ಟಿ ಅವರಿಬ್ಬರ ಕಡೆ ಹರಿಯಿತು. ಮರಣೋನ್ಮುಖನಾಗಿದ್ದ ರಂಹನ ಚಿತ್ತ ಪಲ್ಲವಿಸಿ ಅರಿವು ಮರುಕೊಳಿಸಿ ಹಿಂದೆ ಕಡಲೆಡೆಯಲ್ಲಿ ಶ್ರೀರಾಮಚಂದ್ರನೊಡನೆ ನಡೆಸಿದ ಸಂಭಾಷಣೆ ನೆನಪಿಗೆ ಬರುವುದು. ಹರಣದ ಹಂಗನ್ನು ತೊರೆದು, ಮಡದಿಮಕ್ಕಳ ಚಿಂತೆಯನ್ನು ಬಿಸುಟು ತನ್ನ ಕರ್ತವ್ಯವನ್ನು ನೆನೆಯುವನು. ದೇಹ ಅಶಾಶ್ವತವಾದದ್ದು, ಅದು ಸತ್ಕಾರ್ಯಕ್ಕೆ ನೈವೇದ್ಯವಾದಾಗ ಮಾತ್ರ ಸಾರ್ಥಕತೆ ಪಡೆಯುತ್ತದೆಂಬ ಋತಸತ್ಯ ಅವನ ಬಗೆಗಣ್ಣಿಗೆ ಮಿಂಚುವುದು. ಆಗ ವಹ್ನಿಯನ್ನು ಕುರಿತು

" ಇಂದೊ ನಾಳೆಯೊ ಸಾವೆನಾಂ. ಓಡಿ ಬರ್ದುಕುವುದೆ ?
ಸುಡಲಿ ಆ ಬಾಳ್ಕೆಯಂ. ಬಿಸುಡು, ಬಿಸುಡೆನ್ನೊಡಲ
ಭಾರಮಂ. ತಾರದಿರ್ ಸ್ವಾಮಿಕಾರ್ಯಕೆ ವಿಘ್ನಮಂ.
ಕೊಳೆತೊಡೇಂ ನನ್ನೊಡಲ್ ? ರಾಮಕಾರ್ಯಂ ಗೆಲ್ಗೆ !
ಅಂದು ನಾಮಿರ್ವರುಂ ಕಡಲ ತೀರದೊಳವನ
ಕಂಡು ಸಂಭಾಷಿಸಿದೆವದೆ ನಮಗೆ ಸಾರ್ಥಕಂ
ಈ ಜನ್ಮಸಫಲತೆಗೆ ! ತೊರೆ ಈ ಕಳೇಬರದ
ಭಾರಮಂ. ಕೈದುಗೊಳ್ ! ತಿರುಗು ! ತಿವಿ ! ಕೂಗಿ ಕರೆ
ಓಡುವವರಂ . . . . . ."

ಎಂದು ಹೇಳಿ ತನ್ನ ಕರ್ತವ್ಯಪರಿಪಾಲನೆಯ ಅವಸರದಲ್ಲಿ ವಹ್ನಿಯ ಮತ್ತು ಅವನ ಮೂಲಕ ಇಡೀ ಸೈನ್ಯದ ಕರ್ತವ್ಯಪ್ರಜ್ಞೆಯನ್ನು ಪ್ರಚೋದಿಸುತ್ತಾನೆ. "ಇದೊ ನನ್ನದುಂಗುರಂ, ನೀಂ ಬರ್ದುಕಿ ಪಿಂತಿರುಗಿದರೆ . . ." ಎಂದು ತನ್ನ ಕೊನೆಯ ಬಯಕೆಯನ್ನು ವಹ್ನಿಗೆ ಬಿನ್ನವಿಸಿಕೊಳ್ಳುತ್ತಾನೆ. ಗೆಳೆಯನ ದೇಹವನ್ನು ಕಾಪಾಡುವುದಕ್ಕಿಂತ ಗೆಳೆಯನ ಆಶೆಯನ್ನೂ ಅವನ ತ್ಯಾಗೋದ್ದೇಶವನ್ನೂ ನೆರವೇರಿಸುವುದು ಗೆಳೆಯನ ಪರಮಕರ್ತವ್ಯ. ಆ ಕರ್ತವ್ಯಚ್ಯುತಿಯೆ ಆತ್ಮಚ್ಯುತಿ ; ಕರ್ತವ್ಯಸ್ಮರಣೆಯೆ ಆತ್ಮಸಂರಕ್ಷಣೆ. ಈ ಸತ್ಯರಹಸ್ಯವನ್ನರಿತ ವಹ್ನಿ ರಂಹನ ದೇಹವನ್ನು ನೆಲಕ್ಕಿಳುಹಿ, ಪುನಃಪ್ರಚೋದಿತಪ್ರತಿಜ್ಞಾಬದ್ಧನಾಗಿ ಸಾಹಸೋದ್ಯುಕ್ತನಾಗುತ್ತಾನೆ. ಅಷ್ಟರಲ್ಲಿ ಶ್ರೀರಾಮನ ಸಂಕಲ್ಪದಂತೆ ರಾಮಮಯವಾದ ಕಪಿಧ್ವಜಿನಿ ಮತ್ತೆ ಒಟ್ಟು

ಗೂಡಿ ರಾವಣಮಯುವಾದ ರಾಕ್ಷಸಾನೀಕಿನಿಯ ಮೇಲೆ ಬೀಳುತ್ತದೆ. ಸಂಗ್ರಾಮ ಘೋರತಮವಾಗುತ್ತದೆ. ಕೊಟ್ಟಕೊನೆಗೆ ಸಂಪೂರ್ಣ ಪರಿವರ್ತಿತ ಮನಸ್ಸಿನ ರಾವಣ ದೇವಿಮಂಡೋದರಿಗೆ ರಾಮಭಿಕ್ಷೆಯ ಆಶ್ವಾಸನವಿತ್ತು, ರಾಮನನ್ನು ಹಿಡಿದು ತರಲು ತಾನೆ ರಣರಂಗವನ್ನು ಪ್ರವೇಶಿಸುತ್ತಾನೆ. ಮಹೇಂದ್ರಾರಿ ರಾವಣ ತಾನೇ ಯುದ್ಧಕ್ಕಿಳಿದನೆಂದರೆ ಮುಂದಿನ ಪ್ರಲಯಪರಿಸ್ಥಿತಿ 'ಕಲ್ಪನಾನುಭವ ಸಾಧ್ಯವೇ ವಿನಾ ಅನ್ಯಥಾ ಸಾಧ್ಯವಿಲ್ಲ! ಕೊನೆಗೆ ಕ್ರುದ್ಧನಾದ ರಾವಣ ಶೂಲವನ್ನು ರಾಮನ ವಕ್ಷಕ್ಕೆ ಎಸೆದಾಗ ಶ್ರೀರಾಮಚಂದ್ರ ಬ್ರಹ್ಮಾಸ್ತ್ರವನ್ನೇ ತೊಟ್ಟು ರಾವಣನಿಂದ ರಾವಣತ್ವದ ಕಳಂಕವನ್ನು ನೀಗಬೇಕಾಯಿತು.

ರಾವಣನ ರಾವಣತ್ವ ಸಂಪೂರ್ಣವಾಗಿ ವಿನಾಶಗೊಂಡು ರಾಮತ್ವ ಅವತರಿಸಿದ ಮೇಲೆ ಅವನ ಐಹಿಕ ಸಾಧನೆ ಕೊನೆಮುಟ್ಟುತ್ತದೆ. ಅಲ್ಪಸ್ವಲ್ಪವಾದರೂ ಕಾಮದ ದರ್ಪದ ಅಹಂಕಾರದ ಕಿಲುಬು ಅಂಟಿಗೊಂಡಿದ್ದ ಆ ದೇಹದ ಇಕ್ಕಟ್ಟಿನಲ್ಲಿ ಆತ್ಮ ಪಕ್ಷಿರಾಜ ಇರುವುದಾದರೂ ಎಂತು? ಅದು ರೆಕ್ಕೆಗೆದರಿ ಊರ್ಧ್ವಮುಖಿಯಾಗಿ ವಿಹದ್ವಿಹಾರಿಯಾಗುತ್ತದೆ. ರಾವಣತ್ವ-ರಾಮತ್ವ ಈ ಎರಡು ಆಂತರಿಕ ಶಕ್ತಿಗಳ ತಿಕ್ಕಾಟ ನಿಂತು, ರಾಮತ್ವ ವಿಜಯಿಯಾದಾಗ ಬಾಹ್ಯಶಕ್ತಿಗಳ ಹೋರಾಟ ಪರಿಸಮಾಪ್ತಿಗೊಳ್ಳುತ್ತದೆ. ಕ್ಷಮಾಪುತ್ರೀವಲ್ಲಭನೂ ಸರ್ವಭೂತಹಿತರತನೂ ಆದ ಶ್ರೀರಾಮಚಂದ್ರನು ರಾವಣತ್ವದಿಂದ ವಿಮುಕ್ತವಾದ ರಾವಣನ ದೇಹಕ್ಕೆ ರಾಜಗೌರವಸಹಿತ ಅಪರಸಂಸ್ಕಾರವನ್ನೆಸಗುವಂತೆ ವಿಭೀಷಣನಿಗೆ ತಿಳಿಸಿ, ರಣದಲ್ಲಿ ಮಡಿದವರಿಗೆ ಅವರವರ ಯೋಗ್ಯತೆಗೆ ತಗುವಂತೆ ಅಂತ್ಯಕರ್ಮಗಳನ್ನು ನೆರವೇರಿಸಬೇಕೆಂದು ಸಾರಿಸಿ, ತಾನೂ 'ಲೌಕಿಕಕೃತಜ್ಞತಾಸಂಕೇತಮಾಗಿ' ಮಡಿದ ವೀರರ ಆತ್ಮಕಲ್ಯಾಣಾರ್ಥವಾಗಿ ಪ್ರಾರ್ಥಿಸುವುದಾಗಿ ತಿಳಿಸಿ, ತಾನೊಬ್ಬನೆ ಸಮುದ್ರಾಭಿಮುಖಿಯಾಗಿ ತೆರಳುವನು, ಬೇರೊಂದು 'ಸಾಕಾರ ಮನುಷ್ಯತಾ ಪಯೋಧಿ'ಯಂತೆ.

೫

ಆ ದಿನ ಸಾಯಂಕಾಲದ ತನಕ ಅವನು ಯಾವುದೊ ಒಂದೆಡೆ ಮಾತ್ರ ಅರಸಿದವರಿಗೆ ಸಿಗಲಿಲ್ಲ. ಆದರೂ ಅಲ್ಲಲ್ಲಿ ಹೆಣದೆಡೆ ಚಿತೆಯಡೆ ಚಿಂತಾಕುಲರಾಗಿ ತಳಮಳಿಸುತ್ತಿದ್ದ ಜನರನ್ನು ಅವನು ಸಂತೈಸುತ್ತಿದ್ದುದಾಗಿ ಎಲ್ಲರೂ ಹೇಳಿಕೊಳ್ಳುತ್ತಿದ್ದರು. 'ರಾಮನಂತರ್ಯಾಮಿ ರಾಮನಖಿಲವ್ಯಾಪಿ ರಾಮಮಯಮೀ ವಿಶ್ವಂ' ಎಂಬ ತತ್ತ್ವವನ್ನು ಪ್ರತಿಯೊಬ್ಬರೂ ತಮ್ಮ ತಮ್ಮ ಪ್ರತಿಭಾರೂಪವಾದ ಪ್ರತಿಮೆಯಿಂದ ಅರಿತುಕೊಳ್ಳುತ್ತಿದ್ದರು. ಆ ಸಮಯದಲ್ಲಿ ಆತ್ಮಮಿತ್ರ ರಂಹನ ಅಪರಕ್ರಿಯೆಗಳನ್ನೆಸಗಿ,

ಕಡಲಿನಲ್ಲಿ ಮಿಂದು ಶಿಬಿರಾಭಿಮುಖಿಯಾಗಿ ಬರುತ್ತಿದ್ದ ವಹ್ನಿ ಸಾಗರದ ಕಡೆಯಿಂದ ಬರುತ್ತಿದ್ದ ಸೀತಾನಾಥನನ್ನು ಸಂಧಿಸಿದನು. ವಾನರಭಟ ರಾವಣಾರಾತಿಗೆ ಕೈಮುಗಿದನು. ರಾಮ ಅವನ ಗುರುತುಹಿಡಿದು ರಂಹನನ್ನು ವಿಚಾರಿಸಿದನು. ಮಿತ್ರ ಮರಣದಿಂದ ದುಃಖದಗ್ಧನಾದ ವಹ್ನಿಯ ರೂಕ್ಷಜಿಹ್ವೆ "ಇದೆ ತಾನೆ ಬೂದಿಮಾಡಿ ಮಿಂದು ಬಂದೆ" ಎಂದು ಉತ್ತರಕೊಟ್ಟಿತು. ಸತೀವಿರಹಸಂತಾಪಚಿತ್ತನಾದ ಶ್ರೀರಾಮ ವಹ್ನಿಯ ದುಃಖವನ್ನು ಗ್ರಹಿಸಿ, ಹೃದಯದಲ್ಲಿಯೆ ಮರುಗಿ, "ಬೂದಿ ಮಾಡಿದುದು ಕಾಯವನ್ನೆ" ಎಂದನು. ಚಟುಲಮತಿಯೂ ಇಂಗಿತಜ್ಞನೂ ಆದ ವಹ್ನಿ ಶ್ರೀರಾಮನ ಮಾತಿನ ಧ್ವನಿಯನ್ನು ಅರ್ಥಮಾಡಿಕೊಂಡು "ಅಪ್ಪುದಪ್ಪುದು, ಒಡೆಯ ಬಲ್ಲೆನಾತ್ಮವನಮೃತಮೆಂದು. ಬಾಯ್ ತಪ್ಪಿದೆನ್" ಎಂದು ಉಸುರಿದನು. ದುಃಖೋದ್ವೇಗಸಮಯದಲ್ಲಿ ತನ್ನನ್ನು ತಾನು ಮರೆತು, ತನ್ನ ಮುಂದೆ ನಿಂತಿರುವವನು ಶ್ರೀರಾಮಚಂದ್ರನೆಂಬುದರ ಪರಿವೆಯಿಲ್ಲದೆ ವಿವೇಕಶೂನ್ಯನಾಗಿ ವರ್ತಿಸಿದುದಕ್ಕೆ ತಾನೆ ಪಶ್ಚಾತ್ತಾಪಪಟ್ಟನು. ಅವನ ಆ ಮಾತುಗಳಲ್ಲಿ ಪಶ್ಚಾತ್ತಾಪವೂ ಕ್ಷಮಾಯಾಚನೆಯೂ ಅಭಿವ್ಯಕ್ತವಾಗುತ್ತವೆ. ಗುಣಗ್ರಾಹಿಯೂ ಕಾರುಣ್ಯಮೂರ್ತಿಯೂ ಆದ ಶ್ರೀರಾಮ ಪ್ರತ್ಯುತ್ತರವಾಗಿ "ಲೋಕರೂಢಿಯನೊರೆದೆಯೈ, ತಪ್ಪದರೊಳೇನ್? ಅಲ್ಲದಾತ್ಮವನಮೃತಮೆಂದು ಕೇಳ್ದವರೆನಿತೊ, ಕಂಡರಲ್ಪಂ" ಎಂದೊರೆದು ಅವನನ್ನು ಸಂತೈಸಿದನು. ಸತ್ಯವಾಕ್ಯನಾದ ಶ್ರೀರಾಮನ ಈ ಮಾತಿನಲ್ಲಿ ವಿಶ್ವಸತ್ಯವೇ ಅಡಗಿದೆ. ವೇದವೇದಾಂತ ಷಡ್ದರ್ಶನಗಳನ್ನು ಉಗುರಿನ ಮೊನೆಯಲ್ಲುಳ್ಳ, ವಾದವಿವಾದಗಳಲ್ಲಿ ಅಜೇಯರಾದ ಪಂಡಿತರೆಷ್ಟೋ ಮಂದಿ ಇದ್ದಾರೆ. ಆದರೆ ಆ ತತ್ತ್ವವನ್ನು ಅನುಷ್ಠಾನದಲ್ಲಿ ತರುವ, ಬದುಕಿನಲ್ಲಿ ಕಾಣುವ ಮಂದಿ ಕಡಮೆ. ಈ ದೃಷ್ಟಿಯಿಂದ ಸಾಮಾನ್ಯತಾಶ್ರೀಗೆ ಪ್ರತಿಮಾರೂಪದಂತಿರುವ ವಹ್ನಿ ಅಸಾಮಾನ್ಯಪಂಡಿತರಿಗಿಂತ ಎಷ್ಟೋ ಪಾಲು ಮೇಲು! "ನನ್ನರಿವುಮದಕಿಂ ಮಿಗಿಲ್ ಮುಂಬರಿದುದಿಲ್ಲ. ನಂಬಿದೆನೆನ್ನ ಗುರುವೊರೆದುದಂ, ತಾಂ ಕಂಡ ನನ್ನಿಯಂ" ಎಂದು ವಿನಯವಿನಮ್ರನಾಗಿ ಹೇಳುತ್ತಾನೆ.

ವಹ್ನಿಯ ಈ ಮಾತಿನಲ್ಲಿ ಗುರುಶಿಷ್ಯಸಂಬಂಧದ ಪರಮತತ್ತ್ವವೆ ಧ್ವನಿತವಾಗುತ್ತದೆ. ಸಾಧಕನಾದವನಿಗೆ ಗುರುವಿನ ನೆರವು ಅತ್ಯಗತ್ಯ. ಯಾವುದೊ ವ್ಯಕ್ತಿ ಅಥವಾ ಶಕ್ತಿ ಅಥವಾ ತತ್ತ್ವವನ್ನು ಗುರುವೆಂದು ಸ್ವೀಕರಿಸಿದ ಮೇಲೆ ಶಿಷ್ಯ ಅದರಲ್ಲಿ ಅಚಲವಾದ ಭಕ್ತಿವಿಶ್ವಾಸಗಳನ್ನಿಡಬೇಕು, ಅದರಲ್ಲಿ ಸರ್ವಲೋಕಗುರುವನ್ನೆ ಕಾಣಬೇಕು. ಆಗ ಅವನಿಗೆ ನಿಜವಾದ ವಿದ್ಯೆ ಲಭಿಸುತ್ತದೆ. ಸರ್ವಲೋಕ ಗುರುವಾದ ಶ್ರೀರಾಮಚಂದ್ರನೆ ವಹ್ನಿಗೆ ಹೇಳುತ್ತಾನೆ:

"ಆ ಶ್ರದ್ಧೆ ದಲ್ ವಿದ್ಯೆ!
ಸಾಲ್ಗುಮದೆ ದಾಂಟಲ್ಕವಿದ್ಯೆಯಂ. ಆದೊಡಂ
ಕೇಳ್ ವಹ್ನಿ, ಕಾಣಲ್ಕುಮಪ್ಪುದಮೃತತ್ವಮಂ"

"ಶ್ರದ್ಧಾವಾನ್ ಲಭತೇ ಜ್ಞಾನಂ." ಅವರವರ ಶ್ರದ್ಧೆಗೆ ತಕ್ಕಂತೆ ಸಿದ್ಧಿ ಲಭಿಸುತ್ತದೆ. "ಅವರವರಿಗವರವರೊಳ್ಪು." ವಾನರ ಸೈನ್ಯದ ಭಟರಿಗೂ ಅಷ್ಟೆ. ಅವರು ಎಷ್ಟು ಜನ್ಮಗಳಿಂದ ಶ್ರೀರಾಮನ ಬರವಿಗಾಗಿ ಮೊರೆಯಿಟ್ಟು ಕಾದು ಕೊಂಡಿದ್ದರೋ? ವಹ್ನಿಯ ಮಾತುಗಳಲ್ಲಿ ಈ ತತ್ತ್ವಾರ್ಥ ಸ್ಫುರಿಸುತ್ತದೆ:

". . . . . . ನಿನ್ನೊಡನೆ,
ನಿನ್ನಿದಿರ್ ನಿಂದು, ಸಂವಾದಿಸುವ ಸಯ್ಪದೇಂ
ಸಾಮಾನ್ಯಮಲ್ತು; ಬಹುಜನ್ಮಗಳ್ ದುಡಿದೊಂದು
ಪುಣ್ಯಫಲಮ್ಮೆಸೆ!"

ಶ್ರೀರಾಮನ ಅವತಾರ ದಶರಥನಿಗಾಗಿ ಮಾತ್ರವಲ್ಲ, ಕೌಸಲ್ಯೆಗಾಗಿ ಮಾತ್ರವಲ್ಲ ಅಯೋಧ್ಯಾನಗರದ ಜನರಿಗಾಗಿ ಮಾತ್ರವಲ್ಲ. ಇವರ ಅಭೀಪ್ಸೆ ಮಾತ್ರವೇ ಅಲ್ಲ ಆ ಶಕ್ತಿಯನ್ನು ಭೂಮಿಗೆ ಎಳೆತಂದುದು; ವಾನರರ ಮೊರೆ, ಜೊತೆಗೆ ರಾವಣನ ಅಂತರಾತ್ಮದ ಆರ್ತನಾದ. ಕರು ಇದ್ದೆಡೆಗೆ ಹಸು ತಾನಾಗಿಯೆ ಅರಸಿಕೊಂಡು ಹೋಗಿ ಕೆಚ್ಚಲೂಡುವಂತೆ ಭಕ್ತರ ಸನ್ನಿಧಿಗೆ ಆರಾಧ್ಯದೇವತೆಯೆ ಹೊರಟಿತು. ತಾರೆ ವಾಲಿ ಸುಗ್ರೀವ ಸೀತೆಯರೊಂದು ನಿಮಿತ್ತಮಾತ್ರ. ಆ ವಾನರಭಟರನ್ನು ರಾಮಕಾರ್ಯಕ್ಕೆಳೆತಂದುದು ಸುಗ್ರೀವನ ಡಿಂಡಿಮಾಜ್ಞೆ ಮಾತ್ರವೆ ಅಲ್ಲ, ಅವರ ಅಂತಃಸ್ಫೂರ್ತಿ. ಹೆಂಡತಿಮಕ್ಕಳನ್ನೆಲ್ಲ ತ್ಯಜಿಸಿ ಮರಣಕ್ಕೆ ಸಿದ್ಧರಾಗಿ ಬರುತ್ತಾರೆ.

ಅವರ ದೃಷ್ಟಿಯಲ್ಲಿ ಮರಣ ಸೋಲಲ್ಲ; ಜಯ—ಆತ್ಮವಿಜಯ. "ಧನ್ಯರ್, ದಿಟಂ, ಪ್ರಭೂ, ಈ ಮಹಾಸಮರಯಜ್ಞಕಸುತೆತ್ತವರ್" ಎಂಬ ವಹ್ನಿಯ ಮಾತಿನಲ್ಲಿ, ರಂಹನ ಚರಮಸಂದೇಶದಲ್ಲಿ ಮಾನವಜೀವನದ ಪರಮಾರ್ಥ ಅಭಿವ್ಯಕ್ತಗೊಂಡಿದೆ. ಜೀವನದಲ್ಲಿ ಇಂಥ ಮಹದ್ಘಟನೆಗಳು ಆಗಾಗ್ಗೆ ಒದಗುತ್ತಿರುತ್ತವೆ. ಎಷ್ಟೋ ಪ್ರಕಾರಗಳ ಮೂಲಕ ನಿಮಿತ್ತಗಳ ಮೂಲಕ ನಿತ್ಯವೂ ಮಹಾಶಕ್ತಿಗಳನ್ನು ಮಹಾತತ್ತ್ವಗಳನ್ನು ಎದುರುಗೊಳ್ಳುತ್ತಿರುತ್ತೇವೆ. ಅವುಗಳನ್ನು ಗುರುತಿಸಿ ಅರಿಯುವುದೂ ಒಂದು ಪುಣ್ಯವೆ; ಅವುಗಳಲ್ಲಿ ಭಾಗಿಯಾಗಿ ಪ್ರಾಣಾರ್ಪಣೆಮಾಡುವುದಂತೂ ಪರಮಪುಣ್ಯ.

ವಹ್ನಿಗೆ ಈ ತತ್ತ್ವದರ್ಶನ ಬಹುಮಟ್ಟಿಗೆ ಲಭಿಸಿದೆ. ಆದರೂ ಅವನದು 'ಮರ್ತ್ಯಪ್ರಜ್ಞೆ.' "ದುಃಖಮೆ, ವಹ್ನಿ, ಮಿತ್ರಮರಣಂ ನಿನಗೆ?" ಎಂದು ರಾಮ

ಪ್ರಶ್ನಿಸಿದಾಗ "ಬರ್ದುಕಿರ್ದೊಡಾತನುಂ ಸುಖಮಿರ್ಕ್ಕುಡಿಸುತಿರ್ದುದೆಂಬೆನ್, ಮಹಾ ಪ್ರಭೂ" ಎಂದು ಮಿತ್ರಸ್ನೇಹ ನುಡಿಸುತ್ತದೆ. "ಪೇಳ್ ಅವಂ ಬರ್ದುಕಿ ಬರ್ಪುದು ನಿನಗೆ ಸಮ್ಮತಮೆ?" ಎಂದು ರಾಮ ಮತ್ತೆ ಕೇಳಿದಾಗ ವಹ್ನಿ ಎಚ್ಚರಗೊಂಡು ಬೆದರುತ್ತಾನೆ. ತಾನು ಯಾರ ಮುಂದೆ ನಿಂತಿರುವುದೆಂಬುದನ್ನು ನೆನೆಯುತ್ತಾನೆ. ಯಾರ ಭಯಕ್ಕೆ ಸಾಗರ ತನ್ನ ಸ್ಥಾಣುಮರ್ಯಾದೆಯನ್ನು ತ್ಯಜಿಸಿತೊ ಆ ಶಕ್ತಿಯೆ ತನ್ನ ಮುಂದೆ ನಿಂತಿದೆಯೆಂದು ಮನವರಿಕೆಯಾಯಿತು. ಕಾಡುಮರಗಳ ಕೆಳಗೆ ನೆನೆದಂತೆ ಕಲ್ಪವೃಕ್ಷದ ಕೆಳಗೆ ಬಯಕೆಯನ್ನು ನೆನೆದರೆ, ಬಯಕೆಯೆ ವರವಾಗಿ ನನಸಾಗಿ ಪರಿಣಮಿಸುತ್ತದೆಂಬ ಅರಿವು ಗೋಚರಿಸಿತು. ಅವನು ಮರ್ತ್ಯಪ್ರಜ್ಞ ನಾದರೂ ಪ್ರಾಜ್ಞ. ಅಲ್ಪಜ್ಞನಾಗಿದ್ದರೆ ಮೃತಮಿತ್ರನನ್ನು ಸುಲಭವಾಗಿ ಪಡೆಯುವ ಹೆಕ್ಕಳಿಕೆಯಿಂದ, ತಾನಾಗಿಯೆ ಒದಗಿದ ಅವಕಾಶವನ್ನು ಕಳೆದುಕೊಳ್ಳಲಾಗದ ಹುಮ್ಮಸ್ಸಿನಿಂದ ಒಡನೆಯೆ 'ಆಗಲಿ, ಒಡೆಯ' ಎನ್ನುತ್ತಿದ್ದನು. ಬೂದಿಯಿಂದ ರಂಹನನ್ನೆಬ್ಬಿಸುವ ಮತ್ತು ಪಡೆಯುವ ಆಶೆ ಅಪಾಯಕಾರಿಯಾದುದೆಂದೂ, ಋತನಿಯಮೋಲ್ಲಂಘನೆ ಶ್ರೇಯಸ್ಕರವಲ್ಲವೆಂದೂ ಬಗೆಯುವನು. ಆದುದರಿಂದಲೆ ಅವನು ಕೂಡಲೆ "ಮಾಣ್, ಮಾಣ್, ಮಹಾಪುರುಷ, ಮಾಣ್! ನೀನ್ ಕರೆಯೆ ಬರದಿರನ್" ಎಂದು ಅಂಗಲಾಚಿ ಬೇಡಿಕೊಳ್ಳುತ್ತಾನೆ. ಋತಪ್ರಜ್ಞನೂ ಋತಾಧಿಕಾರಿಯೂ ಆದ ಶ್ರೀರಾಮನಿಗೆ ವಹ್ನಿಯ 'ಅನ್ವಯಾನನ್ವಯ'ಗಳ ಸಂಬಂಧದ ಮಾನಸಿಕ ಘರ್ಷಣೆ ಅರ್ಥವಾಯಿತು.

> "ಅನನ್ವಯಕ್ಕಳ್ಕುತಿದೆ ನಿನ್ನ ಮರ್ತ್ಯಪ್ರಜ್ಞೆ.
> ನಿನಗವಂ ಮಗನಾಗಿ ಪುಟ್ಟುವೊಡೆ ಬೆದರ್ವೆಯೇಂ?"

ಎಂದು ಅವನಿಗೆ ಸಮಾಧಾನ ಹೇಳಿ ಅವನ ಮರ್ತ್ಯ ಸಾಮಾನ್ಯವಾದ ಸಂಶಯವನ್ನು ನೀಗುತ್ತಾನೆ. ಶ್ರೀರಾಮನ ಮಾತಿನಲ್ಲಿ ಇಂದ್ರಿಯಾತೀತವಾದ ಅಲೌಕಿಕ ಸತ್ಯ ಮಾತ್ರವೇ ಅಲ್ಲ, ವೈಜ್ಞಾನಿಕವಾದ ಲೌಕಿಕಸತ್ಯವೂ ಇದೆ. ಧ್ಯಾನಮೂಲವೂ ತಪೋಮೂಲವೂ ಆದ ಬಯಕೆ ನನಸಾಗುವುದರಲ್ಲಿ ಸಂದೇಹವೇ ಇಲ್ಲ. ವಿಕಾಸಾತ್ಮಕವಾದ ಪ್ರಗತಿಸಮಸ್ತಕ್ಕೆ ಸಂಕಲ್ಪವೇ ಮೂಲ. ಬಯಕೆ ಇಚ್ಛೆಯಾಗಿ, ಇಚ್ಛೆ ಸಂಕಲ್ಪವಾಗಿ, ಸಂಕಲ್ಪ ಕ್ರಿಯೆಯಾಗಿ ಪರಿಣಮಿಸುತ್ತದೆ. ಋತಚಿದಿಚ್ಛೆಗೆ ವಿರುದ್ಧವಲ್ಲದ ಸಂಕಲ್ಪ ಅಚ್ಯುತವಾಗುತ್ತದೆ, ಅಪ್ರತಿಹತವಾಗುತ್ತದೆ. ವಹ್ನಿಯ ಸ್ನೇಹಮೂಲವಾದ ಸಂಕಲ್ಪ ಪ್ರಕೃತಿನಿಯಮಕ್ಕೆ ವಿರುದ್ಧವಾದುದಲ್ಲ; ಜೊತೆಗೆ ಅದು ಪವಿತ್ರತಮವಾದ ಸಂಕಲ್ಪ. ಆ ಪಾವಿತ್ರ್ಯಕ್ಕೆ ಶ್ರೀರಾಮನೇ ಸಾಕ್ಷಿ. ನಿಜವಾದ ಸ್ನೇಹ ಬಯಸುವ ಕಾಣಿಕೆ ಮತ್ತೇನಿದ್ದೀತು?

ಅಷ್ಟುಹೊತ್ತಿಗೆ ಸೂರ್ಯ ಮುಳುಗಿ, ಕೆಂಪು ಮಾಸಿ, ಮಬ್ಬು ಕವಿದು, ಕಪ್ಪೇರುತ್ತಿತ್ತು. ಇಬ್ಬರೂ ಶಿಬಿರದ ಕಡೆಗೆ ನಡೆದರು.

೬

ಅಹಂಕಾರವಶವಾದ ಮರ್ತ್ಯಪ್ರಜ್ಞೆಗೆ, ಖಂಡದೃಷ್ಟಿಗೆ ಅಸಾಮಾನ್ಯವಾದುದು, ಅದ್ಭುತವಾದುದು, ಆಡಂಬರಾತ್ಮಕವಾದುದು ಮಾತ್ರ ಸನ್ಮಾನ್ಯವಾಗುತ್ತದೆ, ಉಳಿದುದೆಲ್ಲ ಅವಮಾನ್ಯವಾಗುತ್ತದೆ. ನಿರಹಂಕಾರಮೂಲವಾದ ಕವಿಪ್ರತಿಭೆಯ ಪೂರ್ಣದೃಷ್ಟಿಗೆ ಅತಿಸಾಮಾನ್ಯವಾದುದೂ ಅನದ್ಭುತವಾದುದೂ ಅತ್ಯಂತ ಸರಳವಾದುದೂ 'ಅಸಾಮಾನ್ಯ'ದಂತೆಯೆ ಸನ್ಮಾನ್ಯವಾಗುತ್ತದೆ, ಉಪಾಸನಾಯೋಗ್ಯವಾಗುತ್ತದೆ; ಅದರ ಮುಂದೆ ಕೀಳುಮೇಲೆಂಬ ಭಾವನೆಯೆ ಸುಳಿಯದು. ಈ ವಹ್ನಿರಂಹರ ಜೀವನದಲ್ಲಿ ಈ ದರ್ಶನ ಪ್ರತಿಮಾವಿಧಾನದಿಂದ ವ್ಯಕ್ತಗೊಂಡಿದೆ.

"ಅಖ್ಯಾತಿಯೆ ಸಾಮಾನ್ಯರ ಶ್ರೀಮನ್ ಮಾರ್ಗಂ"

—ದೇ. ಜ. ಗೌ.

ಯಾತ್ರೆ

ಯಾತ್ರೆ ಬಹುವಿಧ . . . ಇವುಗಳಲ್ಲಿ ಕೆಲವಂ ಬಲ್ಲವರಿಂದ ಕಲಿತಿದೇನೆ, ಕೆಲವಂ ಕಂಡು ತಿಳಿದಿದೇನೆ, ಕೆಲವಂ ಓದಿಯೂ ಮತ್ತೆ ಕೆಲವಂ ಸ್ವಾನುಭಾವದಿಂದಲೂ ಅರಿತಿದೇನೆ; ಇನ್ನೂ ಹಲವು ನನ್ನ ಜ್ಞಾನರಾಶಿಯಿಂದ ದೂರವಾಗಿವೆ. ಎಲ್ಲಕ್ಕೂ ದೊಡ್ಡದು, ಎಲ್ಲವನ್ನೂ ಒಳಕೊಂಡಿರುವುದು ಜೀವನಯಾತ್ರೆ. ಕ್ರಿಶ್ಚಿಯನ್ ಮತದ ಪ್ರಕಾರ ಜನ್ಮಾಂತರಗಳಿಲ್ಲ. ನಾವೆಲ್ಲ ದೇವರಲ್ಲಿ ಅಡಕವಾಗಿದ್ದವರು ಭೂಮಿಗೆ ಬಂದು, ಕೆಲಕಾಲವಿದ್ದು, ಪುನಃ ದೇವರಲ್ಲೆ ಹೋಗಿ ಒಂದಾಗುತ್ತೇವೆ. ಈ ರೀತಿಯಲ್ಲಿ ಹುಟ್ಟಿದ ಮನುಷ್ಯನು ತಿಳಿದಾಗಲಿ ತಿಳಿಯದೇ ಆಗಲಿ ದೇವರ ಸಾನ್ನಿಧ್ಯಕ್ಕೇ ಪ್ರಯಾಣ ಬೆಳಸುವನು. ಅದಕ್ಕೇ ವರ್ಡ್ಸ್‌ವರ್ತ್ ಕವಿ ಹೇಳುವುದು :

> "Trailing clouds of glory do we come
> From God, who is our home"

ಇದು ಅವನು ಮನಗಂಡ ಸತ್ಯವಾದ್ದರಿಂದ ಅವನು ಹೇಳುವುದು: ಮಕ್ಕಳ ಮುಗ್ಧಲ್ಲಿರುತ್ತೆ ದೇವಲೋಕ ಎಂದು. ಮಕ್ಕಳು ದೇವರ ಸಮಾನ ಎಂದು ನಾವು ಹೇಳುವಾಗಲೂ ಸುಮಾರು ಇದೇ ಅಭಿಪ್ರಾಯವಿರಬಹುದು. ಆದರೆ ಈ ಮಹಾ ಯಾತ್ರೆ ವಿಚಾರ ಹೇಳಲು ನಾನು ಸಮರ್ಥನೂ ಅಲ್ಲ; ಆ ಮನಸ್ಸೂ ನನಗಿಲ್ಲ.

ಯಾತ್ರೆ ಎನ್ನುವ ಪದವನ್ನು ವ್ಯಂಗ್ಯವಾಗಿಯೂ ಉಪಯೋಗಿಸುವುದುಂಟು. ದೇಹ ಪತನವಾಗಿ ಜೀವ ಈ ಲೋಕವನ್ನು ಬಿಟ್ಟಾಗ, ಲಘುವಾಗಿ ಮಾತನಾಡುವ ಸ್ವಭಾವದವರು ಸತ್ತವರನ್ನುದ್ದೇಶಿಸಿ "ಯಾತ್ರೆ ಹೊರಟರು" ಎಂದು ಹೇಳುವುದುಂಟು. ಇದು ಬಹುವಿಧ; ಕಾರಣಗಳೂ ಬಹುಬಗೆ, ಆದರೆ ನನ್ನಲ್ಲಿ ವ್ಯಂಗ್ಯಾಂಶ ಎಳ್ಳಷ್ಟೂ ಇಲ್ಲ. ಜೀವ, ಜೀವನಗಳ ಆಸೆಯೇ ಇನ್ನೂ ಬಲಿಷ್ಠವಾಗಿರುವ ನಾನು ಸಾವಿನವಿಚಾರ ಕಡೆ ಯಾತ್ರೆವಿಚಾರ ಹೇಳಬಯಸುವುದಿಲ್ಲ.

ಈ ನಮ್ಮ ಜೀವನ, ಯಾತ್ರೆಗಳ ಒಂದು ಸಮೂಹವೆಂದರೆ ಸುಳ್ಳಾಗದು. ಯಾತ್ರೆ—ಎನ್ನುವ ಪದ ಕಿವಿಮೇಲೆ ಬಿದ್ದಕೂಡಲೆ ಸಾಮಾನ್ಯವಾಗಿ ಒಂದು ಪವಿತ್ರ ವಾತಾವರಣ ನಿರ್ಮಿತವಾಗುತ್ತೆ. ಕಾಶಿಗೋ ರಾಮೇಶ್ವರಕ್ಕೋ, ತಿರುಪತಿಗೋ ಶ್ರೀಶೈಲಕ್ಕೋ, ಗಯೆಗೋ ಪ್ರಯಾಗಕ್ಕೋ, ಪೂರಿಗೋ ದ್ವಾರಕೆಗೋ, ಹರಿದ್ವಾರಕ್ಕೋ ಹೃಷೀಕೇಶಕ್ಕೋ, ಬದರಿಗೋ ಕೇದಾರಕ್ಕೋ ಹಲಕೆಲವರು (ಪಾಪಗಳನ್ನು ಕಳೆದು ಪುಣ್ಯಾತ್ಮರಾಗಿ ಬರಲು) ಹೊರಟಿದ್ದಾರೆ ಎನ್ನುವ ಭಾವನೆ ಮೂಡುತ್ತೆ.

ಇದು ಸಹ ಮಹತ್ತರವಾದದ್ದೇ—ಅಲ್ಪವಾದ ನನಗೆ (ಈ ಸ್ಥಳಗಳನ್ನು ಒಂದಾವರ್ತಿ, ಕೆಲವನ್ನು ಎರಡುಮೂರು ಸಲ ನೋಡಿದ್ದರೂ ಸಹ) ಇದು ಕಷ್ಟದ ಕೆಲಸ. ಗಂಗಾ ಮಾತೆಯ ಮಹತ್ತನ್ನು ನಾಲ್ಕಾರು ಮಾತುಗಳಲ್ಲಿ ಹೇಳಿ ಮುಗಿಸುವುದು ಹೇಗೆ? ವಿಶ್ವೇಶ್ವರನ ವರ ನಮ್ಮ ಹೃದಯಗಳನ್ನು ವಿಶ್ವದಷ್ಟೂ ವಿಶಾಲಮಾಡಿ, ನಾವೂ ಅವನಂತೆಯೇ ಎಲ್ಲ ಮಾನವರನ್ನೂ ಜಾತಿ, ಮತ, ಕುಲ, ಕರ್ಮಭೇದವಿಲ್ಲದೆ ಆದರದಿಂದ ಬರಮಾಡಿಕೊಳ್ಳುವುದು ಎಂದು ತಿಳಿಸಲು; ಹೃದಯ ವಿಶಾಲವಾಗುವುದೇ ಯಾತ್ರೆಯ ಫಲ; ಯಾತ್ರೆ ಹೋಗಿ ವಿಶ್ವೇಶ್ವರನ ಸೇವೆಮಾಡಿದವರು ಸರ್ವಸಮತಾಭಾವದಿಂದ ಜೀವನವನ್ನು ನಡೆಸಬೇಕು ಎಂದು ಹೇಳಹೊರಡುವ ಮೊದಲು ನಾನು ಹೆಚ್ಚು ಶಕ್ತಿ, ಧೈರ್ಯಗಳನ್ನು ಗಳಿಸಬೇಕು. ನಿತ್ಯಜೀವನದ ಜೀವಾಳ ಇಷ್ಟೆ, ಏನಿದ್ದರೂ ಆಗುತ್ತೆ, ಏನಿಲ್ಲದಿದ್ದರೂ ಆಗುತ್ತೆ ಎನ್ನುವ ಸತ್ಯವನ್ನು ಮನಗಾಣಲು ಬದರೀಯಾತ್ರೆ ಬಹು ಆವಶ್ಯಕ—ಬಸ್ಸು ಬದರಿಯನ್ನು ಮುಟ್ಟುವ ಮೊದಲು ಈ ಯಾತ್ರೆ ಮಾಡಿದರೆ ಮಾತ್ರ ಈ ತಿಳಿವು ಬರುತ್ತೆ ಎಂದು ಹೇಳಲು ಈಗ ಸಮಯವಲ್ಲ.

ಸರ್ ಸಿ. ಆರ್. ರೆಡ್ಡಿಯವರು ಕಾಲೇಜಿನಲ್ಲಿ ಇಂಗ್ಲಿಷ್ ಪಾಠವನ್ನು ಮಾಡುವ ಕಾಲದಲ್ಲಿ (ಸುಮಾರು ನಲವತ್ತು ವರ್ಷಗಳಿಗೂ ಹಿಂದೆ) ವಿದ್ಯಾರ್ಥಿಗಳನ್ನುದ್ದೇಶಿಸಿ "Make a Pilgrimage to the Library" ಎಂದು ಬಹು ಗಂಭೀರವಾದ ಧ್ವನಿಯಲ್ಲಿ ಉಪದೇಶಮಾಡುತ್ತಿದ್ದರಂತೆ! (ಇದನ್ನು ನಮ್ಮ ಹಿರಿಯರಿಂದ ಕೇಳಿದೇನೆ), ಈ ಯಾತ್ರೆ ಮಾಡಿದವರೆಲ್ಲ ವಿದ್ಯಾವಂತರಾಗಿ ಚೆನ್ನಾಗಿ ಬಾಳಿದ್ದಾರೆ. ಈ ಯಾತ್ರೆ ವಿಚಾರ ಮಾತನಾಡಲು ಉತ್ಸಾಹವೇ ಇಲ್ಲ. ವಿದ್ಯಾರ್ಥಿಗಳ ಮಧ್ಯದಲ್ಲಿ ಕಾಲು ಶತಮಾನಕ್ಕೂ ಮೀರಿ ಕೆಲಸಮಾಡಿರುವ ನನಗೆ ಪುಸ್ತಕ ಭಂಡಾರಕ್ಕೆ ಹೋಗಿ ಸರಸ್ವತಿಯನ್ನು ಒಲಿಸಿಕೊಳ್ಳಿ ಎಂದು ಹೇಳಲು ನಾಲಗೆ ಬರುವುದಿಲ್ಲ. ಈಗಿನ ವಿದ್ಯಾರ್ಥಿಗಳಿಗೆ ಸರಸ್ವತೀ ದರ್ಶನ ಬೇರೆ ವಿಧದಲ್ಲಿ ಆಗುತ್ತಿದೆ. ರೆಡ್ಡಿಯವರು ಆ ಉಪದೇಶವನ್ನು ಮಾಡುತ್ತಿದ್ದ ಕಾಲೇಜಿನ ಮುಂಭಾಗದಲ್ಲಿ ಕರೀಸರಸ್ವತಿಯ ಪ್ರತಿಷ್ಠೆ ಆಗಿದೆ; ಇಷ್ಟು ಸುಲಭವಾಗಿ ಸರಸ್ವತಿ ದರ್ಶನ ದೊರೆಯುವಾಗ ಪುಸ್ತಕಭಂಡಾರಕ್ಕೆ ಹೋಗುವವರು ಯಾರು? ಅಲ್ಲದೆ ನಮ್ಮ ಆರಾಧ್ಯದೇವತೆಯಾದ ಸರಸ್ವತಿಗೂ ಈ ಆಧುನಿಕ ಕೃಷ್ಣ ಸರಸ್ವತಿಗೂ ಬಹು ವ್ಯತ್ಯಾಸ: "ಯಾ ಕುಂದೇಂದು ತುಷಾರ ಹಾರ ಧವಳಾ, ಯಾ ಶುಭ್ರ ವಸ್ತ್ರಾನ್ವಿತಾ" ಎಂದು ಆರಂಭವಾಗುತ್ತೆ ನಮ್ಮ ದೇವತೆಯ ಧ್ಯಾನ. ಬಿಳೀಸರಸ್ವತಿಯನ್ನು ಪೂಜಿಸಿ ಅವಳ ವರವನ್ನು ಪಡೆದ ನಾನು ಹೇಳುವ ಮಾತು ಕರೀಸರಸ್ವತಿಯ ಆರಾಧಕರಿಗೆ ಹೇಗೆ ಹಿಡಿದೀತು? ಇಷ್ಟರಮೇಲೆ ಇದು ಸ್ವತಂತ್ರ ಯುಗ.

ಇಲ್ಲಿಯ ವರೆಗೇ ನಿಮಗೆ ಬೇಸರವಾಗಿರಬಹುದು. ನಾನು ಹೇಳಬೇಕೆಂದಿರುವುದು ಇನ್ನು ಬೇರೆ ಯಾತ್ರೆಗಳನ್ನು ಕುರಿತು, . . . ಅವು ಲಘುವೆಂದರೆ ಲಘು ; ಭಾವಿಸಿದಂತೆ ಆಗುತ್ತೆ ; ಮಹತ್ವದ್ದು ಎಂದರೂ ಒಪ್ಪುತ್ತೆ. 'ಕಾಶೀಯಾತ್ರೆ' ಎರಡು ಮೂರು ಬಗೆಯಲ್ಲಿ ನನ್ನ ಅನುಭವಕ್ಕೆ ಬಂದಿದೆ. ಇನ್ನೂ ವಿದ್ಯಾಭ್ಯಾಸ ಮುಗಿಯದೆ ಇರುವವರು, ಚಿಕ್ಕ ವಯಸ್ಸಿನ ಹುಡುಗರು ಶ್ರದ್ಧೆಯಿಂದ ಕಾಶೀಯಾತ್ರೆಯನ್ನಾಗಲಿ, ಅದಕ್ಕೆ ಸಮವಾದ ಯಾವ ಯಾತ್ರೆಯನ್ನಾಗಲಿ ಖಂಡಿತ ಮಾಡಬಾರದು. ಇದನ್ನು ಮಾಡಿದರೆ—ಬೇಡಬೇಡವೆಂದರೂ, ಅದರ ಫಲವಾಗಿ ಮದುವೆ ಆಗಿಯೇ ಆಗುತ್ತೆ. ಇದು ನನ್ನ ಅನುಭವಕ್ಕೆ ಎರಡು ರೀತಿಯಲ್ಲಿ ಬಂದಿದೆ. ನಾನು ನನ್ನ ಸ್ನೇಹಿತರಿಬ್ಬರು S.S.L.C. ಪರೀಕ್ಷೆಗೆ ಹೋಗಿದ್ದೆವು. ಪರೀಕ್ಷೆಯಾದಕೂಡಲೆ ಒಂದು ಒಪ್ಪಂದಕ್ಕೆ ಬಂದೆವು : ಬಿ.ಎ. ಪರೀಕ್ಷೆಯಾಗುವ ವರೆಗೂ ಮದುವೆಯಾಗಬಾರದು. ಹೀಗೆ ಒಪ್ಪಂದವಾದ ಮಾರನೆ ದಿನವೋ ಮೂರನೇ ದಿನವೋ ಹಲವು ಬಗೆಯ ಸೌಕರ್ಯಗಳು ಒದಗಿಬಂದುದರಿಂದ (ಇದು ಮೂವತ್ತಮೂರು ವರ್ಷಗಳ ಹಿಂದಿನ ಮಾತು ; ಬಸ್ಸುಗಳು ಇನ್ನೂ ಬಂದಿರಲಿಲ್ಲ) ಮೇಲುಕೋಟೆಗೆ ಮೂರು ದಿನ ಮೊದಲೇ ಹೋಗಿ ಬಹು ಶ್ರದ್ಧೆಯಿಂದ ಚೆಲುವರಾಯಸ್ವಾಮಿ ಸೇವೆಮಾಡಿ ವೈರಮುಡಿ ಉತ್ಸವ ನೋಡಿ, ಹೊಟ್ಟೆ ಹಿಡಿಸುವಷ್ಟು ಪುಳಿಹೋರೆ ತಿಂದು ಮೈಸೂರಿಗೆ ವಾಪಸ್ಸು ಬಂದೆವು. ಆಗ ರಜದ ಕಾಲ, ಮಾಡಲು ಬೇರೆ ಕೆಲಸವಿಲ್ಲ, ನಂಜನಗೂಡಿನ ಜಾತ್ರೆಗೆ ಹೋದೆವು (ಜಾತ್ರೆ, ಯಾತ್ರೆ ಎರಡೂ ಒಂದೇ ಪದದ ಎರಡು ರೂಪವೊ !) ಅಲ್ಲಿಂದ, ಬಹು ಹರ್ಷಚಿತ್ತರಾಗಿ ಬಂದೆವು ಮೈಸೂರಿಗೆ. ಈ ಹರ್ಷಕ್ಕೆ ಕಾರಣ ನಂಜನಗೂಡಿನ ಸಮಾರಾಧನೆಯಲ್ಲ, ಶಾಲ್ಯಾನ್ನವಲ್ಲ, ಮೊಸರನ್ನವಲ್ಲ (ವಿಷ್ಣುವಿಗೆ ಪುಳಿಹೋರೆ ಇಷ್ಟವಾದರೆ ನಂಜುಂಡೇಶ್ವರನಿಗೆ ಮೊಸರನ್ನ ಇಷ್ಟ). ಈ ಹರ್ಷಕ್ಕೆ ಕಾರಣ ಹುಮ್ಮಸ್ಸು : ತಿರುಮಕೂಡಲಿಗೆ ಹೋಗಿ ಅಗಸ್ತ್ಯೇಶ್ವರನ ರಥವನ್ನೆಳೆದು, ಬ್ರಹ್ಮಾಶ್ವತ್ಥಕ್ಕೆ ಪ್ರದಕ್ಷಿಣೆ ಮಾಡಿ, ತ್ರಿವೇಣಿಯಲ್ಲಿ ಮಿಂದು ಗುಂಜಿ ನರಸಿಂಹಸ್ವಾಮಿಯ ದರ್ಶನ ಮಾಡಬೇಕು ಎನ್ನುವ ಬಲವಾದ ಹಂಬಲ. ಈ ಮೂರು ಕ್ಷೇತ್ರಗಳಿಗೂ ಬಹು ನಿಕಟಸಂಬಂಧವುಂಟು. ಮೇಲುಕೋಟೆಯಲ್ಲಿ ಆರಂಭವಾದ ಯಾತ್ರೆ ತಿರುಮಕೂಡಲಿನ ತೀರ್ಥಸ್ನಾನದಲ್ಲಿ ಮುಕ್ತಾಯ ಆಗಬೇಕು. ಹೀಗೆ ಮಾಡಿದ ಮಾನವನಿಗೆ ದೊರಕುವ ಪುಣ್ಯ, ಸಾವಿರ ಮೈಲಿ ಆಚೆ ಇರುವ ಕಾಶಿಗೆ ಹೋಗಿ ಯಾತ್ರೆ ಮಾಡಿ ಬರುವ ಮಾನವನ ಪುಣ್ಯಕ್ಕಿಂತ ಒಂದು ಗುಲಗಂಜಿಯಷ್ಟು ಹೆಚ್ಚು ಎಂದು ಸತ್ಯ ಅಗ್ರಹಕ್ಕೆ ಹೆಸರಾದ ಶ್ರೀ ನರಸಿಂಹಸ್ವಾಮಿಯೇ ಲೋಕಕ್ಕೆ ಪ್ರಚಾರಮಾಡಿ ಗುಂಜಾ ನರಸಿಂಹಸ್ವಾಮಿ ಎಂದು ಪ್ರಖ್ಯಾತನಾಗಿದ್ದಾನೆ.

ತಿರುಮಕೂಡಲಿಗೆ ಹೋಗುವ ಆಸೆ ಬಲವಾಯಿತು. ದೀರ್ಘಾಲೋಚನೆಗೆ ಅವಕಾಶವಿಲ್ಲ. ಮೈಸೂರಿಗೆ ಬಂದ ಮಾರನೆ ದಿನವೇ ತಿರುಮಕೂಡಲಿಗೆ ಹೊರಡ ಬೇಕು. ತಿರುಮಕೂಡಲ ಪ್ರಯಾಣ ಸ್ವಲ್ಪ ಕಷ್ಟತರ. ಮೇಲುಕೋಟೆಯ ದಾರಿ ಯನ್ನು ಅರ್ಧ ರೈಲಿನಲ್ಲಿ, ಉಳಿದುದನ್ನು—ಏಜಂಟರ ಮೆತ್ತನೆಯ ಎತ್ತಿನ ಗಾಡಿಯಲ್ಲಿ ಸಾಗಿಸಿದೆವು. ನಂಜನಗೂಡಿಗೆ ರೈಲೇ ಇತ್ತು. ತಿರುಮಕೂಡಲಿಗೆ ನಡದೇ ಹೋಗ ಬೇಕು ಅಥವಾ ರಾತ್ರಿ ಎಲ್ಲಾ ನಿದ್ದೆಗೆಟ್ಟು—ಕೇವಲ ಹದಿನೇಳು ಮೈಲಿಯನ್ನು— ಜೋಡದ ಬೀಡಿ ವಾಸನೆ ಕುಡಿಯುತ್ತಾ, ನಿದ್ರಾವಸ್ಥೆಯಲ್ಲೇ ಗಾಡಿಯನ್ನು ಎಳೆಯುವ ಎತ್ತಿನ ಗಾಡಿಯಲ್ಲಿ ಹೋಗಬೇಕು. ಯುವಕರಾದ ಸಾಹಸಿಗಳಿಗೆ ಇದು ತರವಲ್ಲ. ಕಾಲುನಡಗೆಯಲ್ಲಿಯೇ ಯಾತ್ರೆಯನ್ನು ಪೂರ್ತಿಮಾಡಬೇಕೆಂದು ನಿಶ್ಚಯಿಸಿದೆವು . . . ಆದರೆ ನಮ್ಮ ದುರದೃಷ್ಟಕ್ಕೆ . . . ಹಿರಿಯರು ತಡೆದರು; . . . ಯಾತ್ರೆ ಪೂರೈಸ ಲಿಲ್ಲ. ಆದರೇನು? ಒಂದು ತಿಂಗಳ ಒಳಗಿನಲ್ಲಿಯೇ ನಾವು ಮೂವರಿಗೂ ಮದುವೆ ಆಗಿಯೇಹೋಯಿತು. ಮೇಲುಕೋಟೆ ಮತ್ತು ನಂಜನಗೂಡು ಎರಡು ಯಾತ್ರೆಯ ಫಲವೇ ಕಾಶೀಯಾತ್ರೆಯ ಫಲವನ್ನು ಕೊಡುತ್ತೆ ಎಂದು ಮನಸ್ಸಿಗೆ ಸ್ಪಷ್ಟ ವಾಯಿತು. ಹಾಗೂ ಒಂದು ಸಂಶಯ ಇನ್ನೂ ನಿವೃತ್ತಿ ಆಗಿಲ್ಲ. ತಿರುಮಕೂಡ ಲಿಗೂ ಹೋಗಿದ್ದರೆ, ಕಾಶೀಯಾತ್ರೆಗಿಂತ ಹೆಚ್ಚಿನ ಫಲವನ್ನು ಗಳಿಸಿದ್ದರೆ—ಆ ಚಿಕ್ಕ ವಯಸ್ಸಿನಲ್ಲಿ ಮದುವೆ ಆಗುತ್ತಿರಲಿಲ್ಲವೇನೊ?

ಈ ದಕ್ಷಿಣ ಕಾಶೀಯಾತ್ರೆ ವಿವಾಹಾತ್ಪೂರ್ವ. ವಿವಾಹ ಸಮಯದಲ್ಲಿ ನಡೆದದ್ದು ಬೂಟಾ ಕಾಶೀಯಾತ್ರೆ; ಖೋಟಾ ಕಾಶೀಯಾತ್ರೆ; ಇದು ನಡೆಯು ವುದಕ್ಕೆ ಕಾರಣ ಶಾಸ್ತ್ರಗಳಲ್ಲ; ಜನರ ಆಟದ ಆಸೆ, ನೋಟದ ಆಸೆ. ಶಾಸ್ತ್ರದಲ್ಲಿ ಹೇಳುವಂತೆ ನಮ್ಮ ವಿದ್ಯಾಭ್ಯಾಸ ಮುಗಿದಿರಲಿಲ್ಲ; ವಿದ್ಯಾಭ್ಯಾಸದ ಪೂರ್ಣಫಲ ದೊರೆಯಲು ದೇಶಾಟನ ಮಾಡಬೇಕು; ಯಾತ್ರಾಕಾಲದಲ್ಲಿ ಪುಸ್ತಕಪಾಠ ಪ್ರತ್ಯಕ್ಷ ಅನುಭವದಿಂದ ಮನದಟ್ಟಾಗುತ್ತೆ . . . Education is incomplete without travel . . . ಎಂದು ಹೇಳುವರು. ಹೀಗೆ ವಿದ್ಯಾಭ್ಯಾಸ ಮುಗಿದ ವಿದ್ಯಾರ್ಥಿ, ವಿದ್ಯಾರ್ಜನೆಯ ಶ್ರಮದಿಂದ ಕೃಶನಾಗಿ ಯಾವ ಅನುಕೂಲಗಳೂ ಇಲ್ಲದೆ ಕಾಶೀ ಯಾತ್ರೆ ಹೊರಡುವನು. ವಿದ್ಯಾಪರಿಪೂರ್ಣನಾದ ಈ ಮಾನವನನ್ನು ಕನ್ಯಾಪಿತೃ ನಿಲ್ಲಿಸಿ, ಹೆಣ್ಣುಕೊಟ್ಟು, ಸಂಸಾರಿಯನ್ನಾಗಿ ಮಾಡಿ, ಗೃಹಸ್ಥನನ್ನಾಗಿ ಮಾಡು ವನು. ಶಾಸ್ತ್ರದಲ್ಲಿ ವರ್ಣಿತನಾಗಿರುವ ಈ ವಿದ್ವಾಂಸನೆಲ್ಲಿ? S.S.L.C. ಪರೀಕ್ಷೆಗೆ ಕೂತಿದ್ದ ನಾವೆಲ್ಲಿ? ನಮ್ಮ ದೇಹ ಕೃಶವಾಗಿರಲಿಲ್ಲ. ನಮಗೆ ಕಾಶಿಗೆ ಹೋಗುವ ಆಸೆಯೂ ಇರಲಿಲ್ಲ. ಹುಡುಗರಿಗೆ ವೇಷಹಾಕಿ ಆಟವನ್ನು ನೋಡುವ ಆಸೆ ಹಿರಿಯ

ರಿಗೆ. ಈ ಆಟದ ನೋಟವನ್ನು ನೋಡುವ ಆಸೆ ಬಂಧುಮಿತ್ರರಿಗೆ. ನನ್ನ ಕಾಶೀ ಯಾತ್ರೆಯಂತೂ ಶಾಸ್ತ್ರಕ್ಕೆ ಬಹು ವಿರುದ್ಧವಾದುದು . . . ವಯಸ್ಸಿನಲ್ಲಿ ವಿದ್ಯೆಯಲ್ಲಿ ತೀರ ಚಿಕ್ಕವನು; ನನ್ನ ಮೈಮೇಲೆ ಚಿನ್ನದ ಜವಾಹಿರಿಯ ಹೊರೆ, ಸಾಲದ್ದಕ್ಕೆ ರಾಜಮರ್ಯಾದೆ, ಭಲ್ಯದವರು, ಕಹಳೆ, ಕೊಂಬು, ಮರ್ಯಾದೆಯ ಮೇನಾ. ಶಾಸ್ತ್ರವಿರುದ್ಧವಾದ ಕಾಶೀಯಾತ್ರೆ ಏಕೆ ಮಾಡಬೇಕೋ ನಾನರಿಯೆ.

ಉತ್ತರಕಾಶಿಗೆ ಮೊದಲು ಹೋದುದು ಯಾತ್ರಾರ್ಥಿಯಾಗಲ್ಲ. ವಿದ್ಯಾರ್ಥಿಗಳಿಬ್ಬರನ್ನು ಚರ್ಚಾಕೂಟದಲ್ಲಿ ಭಾಗವಹಿಸಲು ಕಾಶಿಗೆ ಒಂದು ಹೊತ್ತಿನ ದೂರದಲ್ಲಿದ್ದ ನಗರವೊಂದಕ್ಕೆ ಕರೆದುಕೊಂಡು ಹೋದೆ. ವಿದ್ಯಾರ್ಥಿಗಳಿಗೂ ನನಗೂ ಕಾಶಿಯ ಹಂಬಲ ಹತ್ತಿದ್ದು ಹೆಚ್ಚಲ್ಲ. ರಾತ್ರಿ ರೈಲುಹತ್ತಿ ಬೆಳಿಗ್ಗೆ ಕಾಶಿಯಲ್ಲಿಳಿದೆವು. ವಿದ್ಯಾರ್ಥಿಗಳಿಬ್ಬರೂ ಈಶ್ವರನ ಭಕ್ತರು, ಬಹು ಶ್ರದ್ಧೆಯಿಂದ ಗಂಗಾಸ್ನಾನವನ್ನು ವಿಶ್ವೇಶ್ವರ ದರ್ಶನವನ್ನು, ತ್ರಿವೇಣಿ ಸ್ನಾನವನ್ನು ಮಾಡಿದರು. ಅಂತೂ ಕಾಶೀಯಾತ್ರೆ ಮಾಡಿದರು—ಅದರ ಫಲ ಅವರನ್ನು ಬಿಡಲಿಲ್ಲ. ಅದೇ ಬೇಸಿಗೆ ರಜದಲ್ಲಿ ಮದುವೆ ಆಗಿಯೇ ಆಯಿತು. ಅವರ ವಿದ್ಯಾಭ್ಯಾಸ ಪೂರ್ಣವಾದುದು ಆಮೇಲೆಯೆ. ನನ್ನ ಬಂಧುಗಳಲ್ಲೊಬ್ಬರಿಗೆ ಇದೆಲ್ಲ ಗೊತ್ತು. ಈಗ ಎರಡು ವರ್ಷಗಳ ಹಿಂದೆ ವಿದ್ಯಾಪೂರ್ಣನಾಗಿ (ಎರಡು ಡಿಗ್ರಿಗಳನ್ನು ಪಡೆದು) ಕಾರ್ಯಾರ್ಥಿಯಾಗಿ ಡೆಲ್ಲಿಗೆ ಹೋದ, ಅಲ್ಲಿಂದ ಹರಿದ್ವಾರ ಹೃಷೀಕೇಶಗಳಿಗೂ ಹೋಗಿಬಂದ. ಎಷ್ಟೇ ಹೇಳಿದರೂ—ಅವನಿಗೆ ಬೇಗ ಮದುವೆಯಾಗಲು ಇಷ್ಟವಿರಲಿಲ್ಲ—ಕಾಶಿಗೆ ಹೋಗಲಿಲ್ಲ, ದಕ್ಷಿಣಕಾಶೀ ಯಾತ್ರೆಯನ್ನೂ ಮಾಡಿಲ್ಲ—ಕೆಲಸವಾಗಿ ಒಂದೂವರೆ ವರ್ಷವೇ ಆಯಿತು; ಇನ್ನೂ ಮದುವೆಯೇ ಆಗಿಲ್ಲ. ಕಾಶೀಯಾತ್ರೆ ಇಲ್ಲದೆ ಅದರ ಫಲ ಹೇಗೆ ಬಂದೀತು?

ಗಂಡಿಗೆ ಮದುವೆಯಾಗಲಿಲ್ಲ ಎಂದು ಗೋಳಿಡುವವರ ಸಂಖ್ಯೆ ಹೆಚ್ಚಿಲ್ಲ. ಹೆಣ್ಣಿಗೆ ಮದುವೆಮಾಡಬೇಕೆನ್ನುವ ಕುತೂಹಲ ಇನ್ನೂ ಹಲವರಿಗೆ ಉಂಟು. ಆದರೆ ಪ್ರಯತ್ನದಲ್ಲಿ ಜಯ ದೊರೆಯುವುದೇ ಅಪೂರ್ವ. ವಿಫಲರಾದ ಮಾನವರು, ಈಶ್ವರನ ಕೃಪೆ ಬಂದಾಗ ಮದುವೆ ಆಗಲಿ ಎಂದು ಕೈಕಟ್ಟಿ ಈಶ್ವರನನ್ನೂ ಪ್ರಾರ್ಥಿಸದೇ ಕುಳಿತಿರುವುದು ಸರ್ವಸಾಮಾನ್ಯವಾಗಿದೆ. ನನಗೆ ಒಂದು ಸಂಶಯ ಬಹುವಾಗಿ ಬಾಧೆಕೊಡುತ್ತಿದೆ. ಶಾಸ್ತ್ರದಲ್ಲಿ ಗಂಡಸಿಗೆ ಮಾತ್ರ ಕಾಶೀಯಾತ್ರೆ ಹೇಳಿದೆ; ಹೆಂಗಸಿಗೆ ಹೇಳಿಲ್ಲ. ಇರಲಿ. ಆ ಶಾಸ್ತ್ರ ಬರೆದ ಕಾಲಕ್ಕೂ ಈ ಆಧುನಿಕ ಕಾಲಕ್ಕೂ ಸಮಾಜದ ಸ್ಥಿತಿಯಲ್ಲಿ ಬಹು ವ್ಯತ್ಯಾಸವಿದೆ. ಆಗ ಹೆಂಗಸರಿಗೆ ವಿದ್ಯಾಭ್ಯಾಸದ ಹಂಬಲವಿರಲಿಲ್ಲ. ಗಂಡಿಗೂ ಹೆಣ್ಣಿಗೂ ಬಹು ವ್ಯತ್ಯಾಸವಿತ್ತು. ಈಗ ಗಂಡುಹೆಣ್ಣಿಗೆ ಇರುವ ವ್ಯತಾಸವೊಂದೇ: ಒಂದು ಗಂಡು, ಇನ್ನೊಂದು ಹೆಣ್ಣು; ಲಿಂಗಭೇದ

ಮಾತ್ರ ಉಳಿದಿದೆ; ಇತರ ಭೇದಗಳೆಲ್ಲಾ ಅಳಿದಿವೆ. ಮನೋವೃತ್ತಿ ಒಂದೇ; ವಿದ್ಯಾಭ್ಯಾಸ ಪದ್ಧತಿ ಒಂದೇ; ಒಂದೇ ತರಗತಿಯಲ್ಲಿ ಕುಳಿತು, ಒಂದೇ ಅಧ್ಯಾಪಕ ರಿಂದ ಕಲಿತು; ಒಂದೇ ಪರೀಕ್ಷೆಗೆ ಕೂತು ತೇರ್ಗಡೆಹೊಂದಿ; ಒಂದೇ ಕೆಲಸಕ್ಕೆ ಅರ್ಜಿಹಾಕುತ್ತಾರೆ. ಪಾಠಗಳು ಮಾತ್ರವೇ ಒಂದಲ್ಲ: ಆಟಗಳೂ ಒಂದೇ; ಅವರಿಗೂ ವ್ಯಾಯಾಮಶಿಕ್ಷಣವುಂಟು. ಟೆನಿಸ್, ವಾಲೀಬಾಲ್, ಕ್ರಿಕೆಟ್ ಆಟ ಗಳನ್ನೂ ಅಭ್ಯಾಸಮಾಡುತ್ತಾರೆ. ಓಡುವುದು, ಚೆಂಡೆಸೆಯುವುದು, ನೆಗೆಯುವುದು, ಹಾಡುವುದು, ಇತ್ಯಾದಿ ಪಂದ್ಯಗಳಲ್ಲಿ ಗಂಡಸರ ಜತೆಗೂ ಭಾಗವಹಿಸುವರು. ಕೆಲಸ ದಲ್ಲಿಯೂ ಅಷ್ಟೆ: ಪಾರ್ಲಿಮೆಂಟ್ ಸದಸ್ಯತ್ವದಿಂದ ಮೊದಲಾಗಿ ಮಂತ್ರಿಪದವಿಯ ವರೆಗೂ, ಪೋಲೀಸ್ ಕೆಲಸ ಮೊದಲಾಗಿ ನ್ಯಾಯಾಧೀಶರ ಕಾರ್ಯದ ವರೆಗೂ, ಮದ್ದುಗುಂಡು ಕಾರ್ಖಾನೆಯ ಕೂಲಿಯಿಂದ ಮೊದಲಾಗಿ ವಿಮಾನವನ್ನು ನಡೆಸುವ ವರೆಗೂ ಹೆಂಗಸರು ಸರ್ವಕಾರ್ಯಕ್ಷೇತ್ರದಲ್ಲಿಯೂ ಕೆಲಸವನ್ನು ದಕ್ಷತೆಯಿಂದ ಮಾಡುತ್ತಿದ್ದಾರೆ. ಇಷ್ಟೆಲ್ಲವೂ ನಮ್ಮ ದೇಶದಲ್ಲಿ ಆಗದೇ ಹೋಗಿದ್ದರೂ, ಹೆಣ್ಣು ಗಂಡಿಗೆ ಯಾವ ಬಗೆಯಲ್ಲೂ ಕಡಿಮೆಯಲ್ಲ ಸರಿಸಮಾನವಾದ ಹಕ್ಕುಳ್ಳವಳು ಎಂದು ಸ್ಥಾಪಿತವಾಗಿದೆ. ಮಗಳಿಗೆ ಮದುವೆ ಮಾಡಲೇಬೇಕು ಎನ್ನುವ ಹಂಬಲಿರುವ ಕನ್ಯಾ ಪಿತೃ ಮಗಳಿಗೆ ಕಾಶೀಯಾತ್ರೆಯನ್ನು ಮಾಡಿಸಿದರೆ—ಉತ್ತರಕಾಶಿಯಾಗದಿದ್ದರೆ, ದಕ್ಷಿಣಕಾಶಿಯೇ ಸಾಕು—ಕಾಶೀಯಾತ್ರೆಯ ಫಲ ಬರಲೇಬೇಕಲ್ಲವೆ. ಈ ಫಲ ಒಂದೇ ಬರುತ್ತೆ ಎನ್ನುವುದು ನನಗೆ ಸ್ವಂತವಾಗಿಯೂ ಪರೋಕ್ಷವಾಗಿಯೂ ಆಗಿರುವ ಅನುಭವ. ಅಥವ ವಿದ್ಯಾಪರಿಪೂರ್ಣರಾದ ಹೆಂಗಸರು, ಮದುವೆಯ ಹಂಬಲವಿರುವವರು, ಕಾಶೀಯಾತ್ರೆಗೆ ಹೋಗುತ್ತೇವೆ ಎಂದು ಪ್ರಕಟಿಸಿದರೆ ಆಗ ಯಾರಾದರೊಬ್ಬರು "ದೇವಿ, ಕಾಶಿಗೆ ಹೋಗಬೇಡ ನಾನು ನಿನ್ನನ್ನು ಮದುವೆ ಯಾಗುತ್ತೇನೆ" ಎಂದು ಹೇಳಿ ನಿಲ್ಲಿಸಬಹುದು ಎಂದು ನನಗೆ ಸಂಪೂರ್ಣನಂಬಿಕೆ ಇದೆ. ಇಂಥಾ ಸಂದರ್ಭದಲ್ಲಿ—ಸತ್ಯದ ಆಧಾರವಿರುವುದರಿಂದ—ಹೆಣ್ಣಿಗೇ ಕಾಶೀ ಯಾತ್ರೆಯನ್ನು ಮಾಡಬೇಕು ಎನ್ನಿಸುತ್ತೆ. ಈ ಮಾತು ಬರೆಯುವ ನನಗೆ ಹುಚ್ಚು ಎಂದು ಖಂಡಿತ ಭಾವಿಸಬೇಡಿ, ನನ್ನ ಅಭಿಪ್ರಾಯಕ್ಕೆ ಶಾಸ್ತ್ರಾಧಾರವಿದೆ, ಸತ್ಯಾ ಧಾರವಿದೆ. ಇದೊಂದು ಕೌತುಕವಾದ್ದರಿಂದ ಎಲ್ಲರಿಗೂ ಹೆಚ್ಚಿನ ಸಂತೋಷವ ನ್ನುಂಟುಮಾಡುತ್ತೆ; ಹೆಣ್ಣು ಗಂಡಿಗೆ ಸಮ ಎನ್ನುವುದನ್ನು ಸಮರ್ಥಿಸುತ್ತೆ. ನೋಟಕ್ಕಾಗಿ ನಡೆಸುವ ಆಟದ ಕಾಶೀಯಾತ್ರೆ ಹೆಣ್ಣಿಗಾದರೇನು, ಗಂಡಿಗಾದರೇನು. ಆಟದ ಸವಿಯೂ ನೋಟದ ಸವಿಯೂ ಎಲ್ಲಿ ಮಾಯವಾಗುತ್ತೆ!

ಹೆಣ್ಣಿಗೆ Higher Education ಕೊಟ್ಟರೆ ಮದುವೆ ಆಗುವ ಸಂಭವ ಕಡಿಮೆ

ಆದ್ದರಿಂದ ಕಾಲೇಜಿನಲ್ಲಿ ಓದಿಸಬಾರದು ಎಂದು ಕೆಲವು ಮಿತ್ರರು ನನ್ನಲ್ಲಿ ಹೇಳಿ ಆ ಪ್ರಕಾರ ನಡೆದುಕೊಂಡಿದಾರೆ. ಇದು ಬಹು ಕಾರಣಗಳಿಂದ ಬಹು ತಪ್ಪು ನಡತೆ. ಇದು ಮೂಢನಂಬಿಕೆ. ಮೇಲೆ ನಾನು ಹೇಳಿರುವ ಮಾತುಗಳನ್ನು ಓದಿದಮೇಲೆ ಯಾದರೂ ನನ್ನ ಮಿತ್ರರು ಮಕ್ಕಳನ್ನು ಕಾಲೇಜಿಗೆ ಕಳುಹಿಸುವರು ಎಂದು ನಂಬಿದೇನೆ. ಹೆಣ್ಣುಮಕ್ಕಳು ಹೆಚ್ಚುಹೆಚ್ಚಾಗಿ ಬಂದರೆ ಅವರಿಗೇ ಮೀಸಲಾದ ಕಾಲೇಜುಗಳನ್ನು ತೆರೆಯಬಹುದು. ಈಗಿನ Co-Ed. ಪದ್ಧತಿಯನ್ನು ನಿಲ್ಲಿಸಬಹುದು. ಇದರಿಂದ ಆಗಬಹುದಾದ (ಬೇರೆ ದೇಶಗಳಲ್ಲಿ ಆಗಿರುವ) ಅನಾಹುತಗಳನೇಕವನ್ನು ತಡೆಗಟ್ಟಬಹುದು; ಅಗ್ಗದ ಮೋಹಕ್ಕೆ ಅಡ್ಡಿ ತರಬಹುದು.

ನನ್ನ ಅನುಭವಕ್ಕೆ ಇನ್ನೂ ಬಾರದಿರುವುದು; ಮುಂದೆ ಬರಲೇಬೇಕಾಗಿರುವುದು ಬಹು ಕಷ್ಟತರವಾದ ಯಾತ್ರೆ; ಇದೇ ವರಾನ್ವೇಷಣಯಾತ್ರೆ. ಇತರ ಯಾತ್ರೆಗಳಿಗೆಲ್ಲಾ ಒಂದುಬಗೆಯ ಸಿದ್ಧತೆಯುಂಟು, ಇದರಲ್ಲಿ ಜಯಶೀಲರಾಗಲು ಏನು ಸಿದ್ಧತೆ ಬೇಕೋ ಹೇಳಲು ಸಾಧ್ಯವಿಲ್ಲ. ಬಿಂದು ಸರೋವರದಲ್ಲಿ ಮಿಂದು ಸರ್ವಪಾಪಗಳನ್ನೂ ಕಳೆದುಕೊಂಡಿರಬಹುದು; ಬದರಿಯಲ್ಲಿ ಸಾಕ್ಷಾತ್ ನಾರಾಯಣದರ್ಶನವನ್ನೆ ಮಾಡಿರಬಹುದು; ಬ್ರಹ್ಮಕಪಾಲದಲ್ಲಿ ಕರ್ಮಮಾಡಿ ಪಿತೃಕೋಟಿಯನ್ನು ಸ್ವರ್ಗಕ್ಕೆ ಕಳುಹಿರಬಹುದು; ಮಾನಸಸರೋವರದಲ್ಲಿ ಮುಳುಗಿ ದೇವತ್ವವನ್ನೆ ಹೊಂದಿರಬಹುದು. ಆದರೂ ಈ ಯಾತ್ರೆಯಲ್ಲಿ ಜಯ ದೊರೆಯುವುದು ಸುಲಭವಲ್ಲ. ಹಣದ ರಾಶಿಯಿದ್ದರೂ ಹೆಣ್ಣಿಗೆ ಮದುವೆಮಾಡಲು ಸಾಧ್ಯವಾಗದವರುಂಟು; ಸರಸ್ವತಿಯ ಅವತಾರವೋ ಎನ್ನುವಷ್ಟು ವಿದ್ಯಾಸಂಪನ್ನೆಯಾದ ಮಗಳಿಗೆ ವರನನ್ನು ಗೊತ್ತುಮಾಡಲು ಕಷ್ಟಪಟ್ಟವರುಂಟು; ರತಿಯಷ್ಟೊ ರೂಪಲಾವಣ್ಯಗಳ ಗಣಿಯಾಗಿದ್ದರೂ ಮನ್ಮಥನೇ ಬೇಕೆಂದು ಹಠವಿಲ್ಲದಿದ್ದರೂ ಮದುವೆಯಾಗದೆ ನಿಂತವರುಂಟು. ವಿದ್ಯೆ, ರೂಪು, ಸಂಪತ್ತು—ಇವು ಮೂರೂ ಇದ್ದು ವರ ಸಿಕ್ಕದೆಹೋದ ಸಂದರ್ಭಗಳೂ ಉಂಟು. ಬಂಧುಮಿತ್ರರ ಪರವಾಗಿ ಜವಾಬುದಾರಿ ವಹಿಸಿ ವರಾನ್ವೇಷಣಕ್ಕೆ ಮಾತ್ರವಲ್ಲ ಕನ್ಯಾರ್ಥಿಯಾಗಿಯೂ ಅಲೆದಿದೇನೆ, ಸಾಕಷ್ಟು ಅನುಭವ ಹೊಂದಿದೇನೆ, ಹಲವರಿಂದ ಅವರ ಅನುಭವಾಮೃತದ ಸವಿಯನ್ನು ಕಂಡಿದೇನೆ; ಹಾಗೂ ಈ ಯಾತ್ರೆ ಸುಲಲಿತವಾಗಿ, ಸುಖವಾಗಿ, ಜಯಶೀಲವಾಗಿ ನಡೆಯಲು ಹೀಗೆ ಆರಂಭಮಾಡಬೇಕು, ಹೀಗೆ ಮುಂದುವರಿಯಬೇಕು; ಮೊದಲ ಸೋಪಾನ ಇದು; ಎರಡನೇ, ಮೂರನೇದರ ಲಕ್ಷಣ ಹೀಗೆ ಎಂದು ಖಚಿತವಾಗಿ ಹೇಳುವ ಧೈರ್ಯವಿಲ್ಲ. ನಿಮ್ಮಲ್ಲಿ ಹಲವರು ನಿಮ್ಮ ಅನುಭವಗಳನ್ನು ಬರೆದು ಕಳಿಸಿದರೆ ಅದನ್ನೆಲ್ಲಾ ಮಥನಮಾಡಿ ನನ್ನ ಜ್ಞಾನರಾಶಿಯೊಡನೆ ಸೇರಿಸಿಕೊಂಡು ಈ

ವರಾನ್ವೇಷಣಯಾತ್ರೆಯ ಸಂಬಂಧವಾಗಿ ಕೆಲವು ಖಚಿತವಾದ ಅಂಶಗಳನ್ನು ಸಂಗ್ರಹಿಸುತ್ತೇನೆ. ಈ ಯಾತ್ರೆಯನ್ನು ನಾನು ಕೈಕೊಳ್ಳುವ ಕಾಲ ಸಮೀಪಿಸುತ್ತಿರುವುದರಿಂದ ಕೈಕಟ್ಟಿಕೊಂಡು ಕೂತಿರಲಾರೆ; ಯಾತ್ರೆಗಾಗಿ ಸಿದ್ಧತೆ ನಡೆಯಲೇಬೇಕು. ನಾನು ಕಾಣುವ ಸತ್ಯಾಂಶವನ್ನು, ನಾನು ಮಾಡುವ ನಿರ್ಣಯಗಳನ್ನು ನಿಮಗೆ ಮಾತ್ರ ಗುಟ್ಟಾಗಿ ತಿಳಿಸಬಯಸುತ್ತೇನೆ. ನಾವು ಎಷ್ಟೇ ಸಿದ್ಧತೆ ಮಾಡಿದರೂ ಉಮಾಪತಿಯ ಆಶೀರ್ವಾದವಿಲ್ಲದೆ ಮದುವೆ ನಡೆಯುವುದಿಲ್ಲ ಎಂದು ಚೆನ್ನಾಗಿ ತಿಳಿದಿದೇನೆ. ಅವನ ವರವನ್ನು ಪಡೆಯಲು ಪ್ರಯತ್ನ ಸತತವಾಗಿ ನಡೆಯುತ್ತಲೇ ಇದೆ. ಮರೆಯದೆ ನಿಮ್ಮ ಅನುಭವಗಳನ್ನು ಬರೆದು ಕಳುಹಿಸಿ—ಅವನ್ನು ತಿಳಿಯಲು ಬಹು ಕುತೂಹಲಿಯಾಗಿದೇನೆ.

ಮಂ.

ಜೀವಸಾಮ್ರಾಜ್ಯದಲ್ಲಿ ಮಾನವನ ಸ್ಥಾನ

ಲೇಖಾಂಕ ೨

ಸಾಗರದ ಒಳಗಡೆಯಲ್ಲಿ

ಜೀವ-ವಿಕಾಸದಲ್ಲಿ ಮಾನವನ ನಿಜವಾದ ಸ್ಥಾನವನ್ನೂ, ಮಾನವನ ವಿಕಾಸ ವನ್ನೂ ಅವನ ರಚನೆಯನ್ನೂ ನಾವು ಅರಿತುಕೊಳ್ಳಬೇಕಾದರೆ, ವಿಕಾಸದಲ್ಲಿ ಹಿಂದು ಳಿದು, ಮಾನವನ ವಿಕಾಸಕ್ಕೆ ಕಾರಣವಾದ ಪ್ರಾಣಿಗಳ ವಿಷಯವಾಗಿ ಸ್ವಲ್ಪವಾದರೂ ತಿಳಿದುಕೊಳ್ಳಬೇಕು. ಈ ವಿಷಯದ ಹಿನ್ನೆಲೆಯಿಂದ ಮಾನವನ ಸ್ಥಾನವನ್ನು ಪರಿ ಶೀಲಿಸಿದರೆ ಆಗ ಅವನ ಸ್ಥಾನ ತಾನೇತಾನಾಗಿ ತಿಳಿದೀತು.

ಮೊದಲೇ ತಿಳಿಸಿರುವಂತೆ ಜೀವ ಮೊದಲು ಹುಟ್ಟಿದ್ದು ಸಾಗರದಲ್ಲಿ, ಬೆಳೆದದ್ದು ಸಾಗರದಲ್ಲಿ. ಬಳಿಕ ಭೂಮಿಯ ಮೇಲಕ್ಕೆ ಹರಡಿತು. ಜೀವಿಗಳು ವಿಕಾಸದ ಕೊನೆಯಲ್ಲಿ ಒಮ್ಮೆಗೇ ನೀರನ್ನು ಬಿಟ್ಟು ನೆಲದ ಮೇಲಕ್ಕೆ ವಲಸೆ ಬಂದಿಲ್ಲ. ಆಗಾಗ ಸಂದರ್ಭ ಒದಗಿ ಬಂದಾಗ, ಅವಕಾಶವನ್ನು ಸದುಪಯೋಗಪಡಿಸಿಕೊಂಡು ಜೀವಿಗಳು ಭೂಮಿಯ ಮೇಲಕ್ಕೆ ವಲಸೆ ಬಂದಿವೆ. ನೆಲದಮೇಲೆ ಬಂದು ನೆಲಸಿದ ಜೀವಿಗಳ ವಿಕಾಸ ಸಾಗರ ದಲ್ಲಿ ನಡೆದಂತೆಯೇ ಸಮಾನಾಂತರ ರೇಖೆಗಳಲ್ಲಿಯೇ ನಡೆದುಬಂದಿದ್ದರೂ ಮೊದ ಮೊದಲು ಸಾಗರದಲ್ಲಿ ಸಿಕ್ಕ ಸಂದರ್ಭಾವಕಾಶಗಳು ಭೂಮಿಯ ಮೇಲೆ ಸಿಗದೆ, ಚಿಕ್ಕ ಪುಟ್ಟ ಹುಳ ಹುಪ್ಪಟೆ, ಜಂತುಗಳಲ್ಲಿ ನೆಲದಮೇಲೆ ಹೊಗಳುವಷ್ಟು ವಿಕಾಸವೇನೂ ನಡೆದಿಲ್ಲ. ಆದುದರಿಂದ ಜೀವವಿಕಾಸದ ಮೊದಲ ಅವಸ್ಥೆಗಳನ್ನು (Stages) ನಾವು ಸಾಗರದಲ್ಲಿಯೇ ಹುಡುಕಬೇಕು.

ಭೂಮಿಯ ವಿಸ್ತೀರ್ಣದಲ್ಲಿ ಮುಕ್ಕಾಲುಭಾಗವನ್ನು ಸಾಗರಗಳೇ ಆಕ್ರಮಿಸಿವೆ. ಭೂಮಿಯ ಮೇಲೆ ವಾಸಿಸುವ ಜೀವಿಗಳ ಸಂಖ್ಯೆಗಿಂತ, ಸಾಗರದೊಳಗಡೆ ವಾಸಿಸುವ ಜೀವಿಗಳ ಸಂಖ್ಯೆ ಹೆಚ್ಚು ಎನ್ನುವುದು ವಾಸ್ತವ. ಆದರೂ, ವಿವಿಧ ಸನ್ನಿವೇಶಗಳಲ್ಲಿ ವಾಸಿಸಿದರೂ, ಕೆಲವು ಸಣ್ಣಪುಟ್ಟ ಭೇದಗಳನ್ನು ಬಿಟ್ಟರೆ, ದೇಹದ ರಚನೆ ನಡವಳಿಕೆ ಗಳಲ್ಲಿ ಹೆಚ್ಚು ವ್ಯತ್ಯಾಸವಿಲ್ಲ. ಸಾಗರ ಮೇಲೆ ನೋಡಲು ಚಪ್ಪಟೆಯಾಗಿ ಕಂಡರೂ ಆಳವಾದ ಈ ಚಪ್ಪಟೆಯ ಮೇರೆಯ ಒಳಗಡೆ ಭೂಮಿಯ ಮೇಲಿರುವಂತೆಯೇ ಹಳ್ಳ ತಿಟ್ಟು, ಬೆಟ್ಟಗುಡ್ಡ, ಕಣಿವೆ ತಪ್ಪಲುಗಳಿವೆ, ನೀರಿನ ಪ್ರವಾಹಗಳಿವೆ. ಅದನ್ನು ಮುಳುಗಿ ರುವ ಇನ್ನೊಂದು ಪ್ರಪಂಚವೆಂದೇ ಹೇಳಬಹುದು. ನೆಲದ ಮೇಲಿರುವಂತೆಯೇ ನೀರಿನ ಒಳಗೂ ಸಾಗರದ ಸಸ್ಯಗಳ ಕಾಡುಗಳಿವೆ, ತೇಲುವ ಹುಲ್ಲುಗಾವಲುಗಳಿವೆ,

ಹವಳದ ಹುಳುಗಳ ಸುಂದರ ವನಗಳಿವೆ, ಸಾಗರದ ಕುಸುಮ (Sea Anemone)ಗಳ ತೋಟಗಳಿವೆ. ಸಾಗರದ ನೀರಿನ ಮೇಲಿನಿಂದ ಕೆಳಗಡೆ ಹೊರಟಂತೆ, ಮೇಲಿದ್ದ ಹೊಂಬೆಳಕು ಹಚ್ಚನಾಗುತ್ತ ಹೊರಟು ಅರ್ಧಮೈಲಿಗೆಲ್ಲಾ ಕತ್ತಲು ತುಂಬುತ್ತದೆ. ಈ ಕಗ್ಗತ್ತಲಿನಲ್ಲಿ ಕಾಣಬರುವ ಅಲ್ಪಸ್ವಲ್ಪ ಬೆಳಕೆಂದರೆ, ಈ ಆಳದಲ್ಲಿ ಓಡಾಡುವ, ತೆವಳುವ, ಈಜುವ ಸ್ವಯಂಪ್ರಕಾಶ (Luminiscent) ಪ್ರಾಣಿಗಳ ಮಿಣುಕುಬೆಳಕು. ಇನ್ನೂ ಕೆಳಗೆ ಹೋದರೆ, ಸಾಗರದ ತಳದಲ್ಲಿ ಬಾಳಿ ಬೆಳೆದು ಅಳಿದ ಸಹಸ್ರಾರು ಪ್ರಾಣಿಗಳ ಅವಶೇಷಗಳಿಂದಾದ ಕೆಸರಿದೆ.

ಈ ಕೆಸರನ್ನು ತೆಗೆದು ಶೋಧಿಸಿ, ಸೂಕ್ಷ್ಮದರ್ಶಕಯಂತ್ರದ ಸಹಾಯದಿಂದ ಪರೀಕ್ಷಿಸಿದರೆ, ಈ ಕೆಸರಿನ ಬಹುಭಾಗ, ಏಕಕಣ ಸಸ್ಯಗಳ ಚಿಪ್ಪುಗಳಿಂದಾಗಿದೆ. ಸಸ್ಯ ವರ್ಗದಲ್ಲಿ ಪೂರ್ತಿ ಸರಳವಾದ ಏಕಕಣ ಸಸ್ಯಗಳೆಂದರೆ ಚಿಪ್ಪಿಲ್ಲದ ಸಸ್ಯಗಳು. ಪ್ರಾಯಶಃ ಇಂದಿನ ಸಸ್ಯವರ್ಗವೆಲ್ಲವೂ ಈ ಸರಳ ಏಕಕಣ ಸಸ್ಯಗಳಿಂದಲೇ ವಿಕಾಸ ಗೊಂಡಿರಬೇಕು. ಸಾಗರದಲ್ಲಿ ಜೀವಿಸುವ ಪ್ರಾಣಿಗಳೆಲ್ಲವೂ ತಮ್ಮ ಆಹಾರಕ್ಕೆ ಈ ಸಸ್ಯಗಳನ್ನೇ ಅವಲಂಬಿಸಿರುವುದರಿಂದ, ಈ ಸಸ್ಯಗಳು ಸಾಗರದೊಳಗಿನ ಜೀವನದಲ್ಲಿ ಅತಿ ಮುಖ್ಯಸ್ಥಾನವನ್ನು ಗಳಿಸಿವೆ. ಇದೇ ರೀತಿ ಭೂಮಿಯ ಮೇಲೂ ಸಸ್ಯಗಳೇ ಜೀವಿಗಳಿಗೆ ಆಹಾರವನ್ನು ಒದಗಿಸಿ ಜೀವನಕ್ಕೆ ಅವಕಾಶವಿತ್ತಿವೆ. ಮತ್ತೊಂದು ಪ್ರಾಣಿಯನ್ನೇ ಆಹಾರವಾಗಿ ಉಪಯೋಗಿಸುವ ಮಾಂಸಾಹಾರಿ ಪ್ರಾಣಿಯಾದರೂ ಕೂಡ ಒಂದಲ್ಲ ಒಂದು ವಿಧವಾಗಿ ಸಸ್ಯವನ್ನೇ ಅವಲಂಬಿಸಬೇಕು. ಹೇಗೆನ್ನ ಬಹುದು! ಮಾಂಸಾಹಾರಿ ಪ್ರಾಣಿಯಾದ ಹುಲಿಯ ಆಹಾರವಾದ ದನ, ಜಿಂಕೆ, ಮೊಲಗಳು ಸಸ್ಯಾಹಾರಿಗಳು. ಸಸ್ಯವಿಲ್ಲದೆ ಈ ಪ್ರಾಣಿಗಳು ಬದುಕುವಂತಿಲ್ಲ. ಈ ಪ್ರಾಣಿಗಳಿಲ್ಲದೆ ಮಾಂಸಾಹಾರಿ ಪ್ರಾಣಿ ಬದುಕುವಂತಿಲ್ಲ.

ಸಾಗರದಲ್ಲಿ ಹೇರಳವಾಗಿ ಸಿಗುವ ಏಕಕಣ ಸಸ್ಯಗಳೆಂದರೆ ಸರಳವಾದ ಹಾಗೂ ಪ್ರಾಣಿರಾಜ್ಯ ಮತ್ತು ಸಸ್ಯಸಾಮ್ರಾಜ್ಯಗಳ ಮಧ್ಯ ಅಂಚಿನಲ್ಲಿರುವ ಚಾಟಿಚಲಾಂಗಿ ಗಳು (Flagellate) ಇವನ್ನು ಬಿಟ್ಟರೆ ಚಿಪ್ಪನ್ನುಳ್ಳ ದ್ವಯಾಣುಗಳು (Diatoms) ಕೆಸರಿನಲ್ಲಿ ಸಿಕ್ಕುವ ಚಿಪ್ಪು ಈ ದ್ವಯಾಣುಗಳದ್ದು. ಚಾಟಿಚಲಾಂಗಿಗಳಲ್ಲಿ ಚಿಪ್ಪು ಇಲ್ಲದಿರುವುದರಿಂದ ಸಾಗರದ ತಳದಲ್ಲಿ ಸಿಕ್ಕುವ ಕೆಸರಿನಲ್ಲಿ ಇವುಗಳು ಇಲ್ಲ. ಆದರೆ ಈ ಚಾಟಿಚಲಾಂಗಿಗಳೂ, ಬದುಕಿರುವ ದ್ವಯಾಣುಗಳೂ, ಇತರ ತೇಲುವ ಜೀವಿ ಗಳೊಡನೆ ತೇಲುಜೀವಿಗಳ ಸಮುದಾಯ (Plankton) ವನ್ನು ಮಾಡುತ್ತವೆ. ತೇಲು ಜೀವಿಗಳೆಂದರೆ ಸ್ವಯಂಶಕ್ತಿಗಿಂತಲೂ ಮಿಗಿಲಾಗಿ ಸಾಗರದ ಮೇಲೆ ನೀರಿನೊಡನೆ ಸೇರಿ ತೇಲುತ್ತವೆ.

ಸಾಗರದಲ್ಲಿರುವ ಚಿಕ್ಕ ಪುಟ್ಟ ಮೀನುಗಳಿಂದ ಮೊದಲ್ಗೊಂಡು ರಾಕ್ಷಸಾಕಾರದ ತಿಮಿಂಗಿಲಗಳ ವರೆವಿಗೂ ಸಮಸ್ತ ಪ್ರಾಣಿಗಳೂ ಆಹಾರಕ್ಕಾಗಿ ಈ ತೇಲುಜೀವಿಗಳನ್ನೇ ಅವಲಂಬಿಸಬೇಕು.

ಹೀಗೆ ಪ್ರಾಣಿಗಳಿಗೆ ಆಹಾರವನ್ನು ಒದಗಿಸುವ ಈ ತೇಲುಜೀವಿಗಳ ಸಮುದಾಯದಲ್ಲಿ ಸೂಕ್ಷ್ಮವಾದ ಕ್ರಿಮಿಗಳಿವೆ. ಅವು ಆದಿಜೀವಿ (Protozoa) ಗಳ ವಂಶಕ್ಕೆ ಸೇರುತ್ತವೆ. ಈ ವಂಶದಲ್ಲಿ ಹುಟ್ಟಿದ ಜೀವಿಗಳು ಆದಿಯಲ್ಲಿ ಅವತರಿಸಿದ ಜೀವಗಳನ್ನು ಹೋಲುವುದೇ, ಈ ವಂಶವನ್ನು ಆದಿಜೀವಿಗಳೆಂದು ಕರೆಯಲು ಕಾರಣ. ಆದಿಜೀವಿಗಳೆಲ್ಲವೂ ಏಕಕಣಜೀವಿಗಳು. ಮಿಕ್ಕೆಲ್ಲವೂ ಬಹುಕಣಜೀವಿಗಳು. ಆದಿಜೀವಿಗಳು ಏಕಕಣಜೀವಿಗಳಾದರೂ ದೇಹದ ರಚನೆಯೇನೂ ಸರಳವಾಗಿಲ್ಲ. ದ್ವಯಾಣುಗಳಂತೆ ಕೆಲವಕ್ಕೆ ಸುಣ್ಣದ ಚಿಪ್ಪುಗಳುಂಟು. ಪ್ರಾಣಿಗಳು ಅಳಿದ ಬಳಿಕ ಅವುಗಳ ಬರಿದಾದ ಚಿಪ್ಪುಗಳು ತಳಕ್ಕೆ ಮುಳುಗಿ ನಯವಾದ ಮಣ್ಣಾಗುತ್ತದೆ. ಹಲವು ಆದಿಜೀವಿಗಳು ಸ್ವಯಂರಂಜಿಗಳು (Phosphorescent). ಕೆಲವು ಸಾರಿ ಇಂತಹ ಸ್ವಯಂರಂಜಿ ಜೀವಿಗಳು ಒಟ್ಟಿಗೆ ಸೇರಿದಾಗ ರಾತ್ರಿಯ ಹೊತ್ತು ಸಾಗರದ ಮೇಲೆ ಅಲ್ಲಲ್ಲಿ ಹಚ್ಚನೆಯ ಬೆಳಕುಂಟಾಗುತ್ತದೆ. ಆದಿಜೀವಿಗಳು ಮುಖ್ಯವಾಗಿ ನೀರಿನಲ್ಲಿಯೇ ಜೀವಿಸುವ ಪ್ರಾಣಿಗಳಾದರೂ, ನೀರಿನಿಂದ ಹೊರಗೆ ಒದ್ದೆ ಮಣ್ಣಿನಲ್ಲಿಯೇ ಇತರ ಪ್ರಾಣಿಗಳ ದೇಹದ ಒಳಗಡೆಯೇ ಜೀವಿಸುತ್ತವೆ. ಆದಿಜೀವಿಗಳಲ್ಲೊಂದಾದ ಅಮೀಬಾ (Amoeba) ಪ್ರಾಣಿಯ ದೇಹ ಸ್ವಚ್ಛಲೋಷ್ಯದ ಚೂರಿನಂತಿರುತ್ತದೆ. ಈ ಪ್ರಾಣಿಯ ಗಾತ್ರ ಒಂದಂಗುಲದ ನೂರರ ಒಂದನೆಯ ಭಾಗದಷ್ಟಿದೆ. ಈ ಪ್ರಾಣಿ ಮಣ್ಣಿನಲ್ಲಿಯೋ ನೀರುಗಿಡಗಳಲ್ಲಿಯೋ ವಾಸಿಸುತ್ತದೆ. ಹೀಗೆ ಆದಿಜೀವಿಗಳೆಲ್ಲವೂ ಬಹಳ ಸೂಕ್ಷ್ಮವಾದ ಪ್ರಾಣಿಗಳು.

ಬಹುಕಣಜೀವಿಗಳಲ್ಲಿ ಅತಿ ಸರಳವಾದ ಪ್ರಾಣಿಗಳೆಂದರೆ ಸ್ಪಂಜು (Sponge) ಪ್ರಾಣಿಗಳು. ಆಕಾರದಲ್ಲಿ ಸಸ್ಯಗಳಂತೆ ಕಂಡರೂ ಅವು ವಾಸ್ತವವಾಗಿ ಪ್ರಾಣಿಗಳು. ನಯವಾಗಿ ನೇಯ್ದು ಬಲೆಯಂತಿರುವ ಅಸ್ಥಿಪಂಜರದಲ್ಲಿ ಆದಿಜೀವಿಗಳಂತಿರುವ ಪ್ರಾಣಿಗಳೇ ಸಾಮೂಹಿಕ ಜೀವನವನ್ನು ನಡೆಸುತ್ತವೆ. ಈ ಪ್ರಾಣಿಗಳಲ್ಲಿ ವಿಥವಿಥವಾದ ಆಕಾರಗಳಿಂದ ಕಾಣಬರುವ ಭಾಗಗಳು ಆಯಾ ಕೆಲಸಗಳಿಗನುಗುಣವಾಗಿ ಮಾರ್ಪಟ್ಟಿರುವ ಜೀವಕಣಗಳು. ಕೆಲವಕ್ಕೆ ಉದ್ದವಾದ ಚಾಟಿಚಲಾಂಗ (Flagella) ವೆ ಈ ಚಲಾಂಗಗಳನ್ನು ಸಹ ಹೊಯ್ದಾಡಿಸುತ್ತ ನೀರಿನ ಪ್ರವಾಹವನ್ನುಂಟುಮಾಡುತ್ತವೆ. ಈ ನೀರಿನ ಪ್ರವಾಹ ದೇಹವನ್ನು ಹೊಕ್ಕು ಹೊರಬರುತ್ತದೆ. ಈ ಪ್ರವಾಹದೊಡನೆ ಬರುವ ಸೂಕ್ಷ್ಮಕ್ರಿಮಿಗಳನ್ನು ಆಹಾರವಾಗಿ ಉಪಯೋಗಿಸುತ್ತವೆ. ಇಡೀ ಜೀವನ

ದಲ್ಲಿ, ಬೆಳವಣಿಗೆಯಲ್ಲಿ ಕೆಲವು ಗಂಟೆಗಳ ಕಾಲಾವಕಾಶವನ್ನು ಬಿಟ್ಟರೆ, ಒಂದೇ ಸ್ಥಳದಲ್ಲಿ ಅಂಟಿಕೊಂಡು, ಸ್ಥಳದಿಂದ ಸ್ಥಳಕ್ಕೇ ಓಡಾಡಲಾರವು. ಕೆಂಪು, ಕಿತ್ತಲೆ, ನೇರಳೆ, ಹಸಿರು, ಹಳದಿ ಮುಂತಾದ ವಿವಿಧ ವರ್ಣಗಳಿಂದ ಕೂಡಿದ ಈ ಪ್ರಾಣಿಗಳನ್ನು ನೋಡಲು ಬಲುಚೆನ್ನು.

ಸ್ಪಂಜು ಪ್ರಾಣಿಗಳಿಗಿಂತ ವಿಕಾಸದಲ್ಲಿ ಮುಂದುವರಿದ ಪ್ರಾಣಿಗಳೆಂದರೆ ಜಠರಾಂಶ ಜೀವಿಗಳು (Coelenterates). ಇವು ಟೊಳ್ಳುದೇಹದ ಬಹುಕಣ ಜೀವಿಗಳು. ಈ ಪ್ರಾಣಿಗಳ ದೇಹರಚನೆ ಸ್ಪಂಜು ಪ್ರಾಣಿಗಳ ಸಾಮೂಹಿಕ ಜೀವನಕ್ಕಿಂತಲೂ ಮುಂದುವರಿದಿದೆ. ಇವುಗಳ ದೇಹದಲ್ಲಿರುವ ಜೀವಕಣಗಳು ಸ್ವೇಚ್ಛಾಪ್ರವೃತ್ತಿಗಳಾಗದೆ, ನೂರಾರು ಜೀವಕಣಗಳು ಒಡಗೂಡಿ ಜೀವಕಣಗಳ ಪದರ (Layer) ಗಳೇರ್ಪಟ್ಟಿದೆ. ಈ ವಂಶಕ್ಕೆ ಸೇರಿದ ಕೆಲವು ಪ್ರಾಣಿಗಳು ಬಂಡೆಗಳಿಗೋ, ಗಿಡಗಳಿಗೋ ಅಂಟಿಕೊಂಡಿರುತ್ತವೆ, ಕೆಲವು ಸ್ಥಳದಿಂದ ಸ್ಥಳಕ್ಕೆ ಓಡಾಡಲೂ ಬಲ್ಲವು. ಜೀವವಿಕಾಸದಲ್ಲಿಯೇ ಮೊದಲಬಾರಿಗೆ ಇವುಗಳಲ್ಲಿ ನರಕಣ (Nerve Cell) ಗಳನ್ನು ಕಾಣಬಹುದು. ಈ ಪ್ರಾಣಿಗಳ ದೇಹ ಒಂದು ಕಡೆ ಮುಚ್ಚಿದ ಕೊಳವೆಗಳಂತಿರುತ್ತದೆ. ತೆರೆದಿರುವ ಇನ್ನೊಂದು ತುದಿಯೇ ಬಾಯಿ. ಈ ಬಾಯಿಯ ಸುತ್ತಲೂ ಕರಬಳ್ಳಿ, (Tentacle) ಗಳಿವೆ. ಈ ಕರಬಳ್ಳಿಗಳಮೇಲೆ ಕುಟುಕುಕಣ (Stinging Cell) ಗಳಿವೆ. ಇವಕ್ಕೆ ಸ್ವಲ್ಪಮಟ್ಟಿಗೆ ಇಂದ್ರಿಯ ಜ್ಞಾನವಿದೆ. ಸಣ್ಣಸಣ್ಣ ಜೀವಿಗಳನ್ನು ಕರಬಳ್ಳಿಗಳ ಸಹಾಯದಿಂದ ಹಿಡಿದು, ಕುಟುಕು ಕಣಗಳ ವಿಷದಿಂದ ಕೊಂದು ಬಾಯಿಯ ಮುಖಾಂತರ ಒಳಕ್ಕೆ ತೆಗೆದುಕೊಳ್ಳುತ್ತವೆ. ಹೀಗೆ ಆಹಾರದ ಜೀವಿಗಳನ್ನು ಕೊಲ್ಲುವುದಕ್ಕೂ, ಶತ್ರುಗಳನ್ನು ಹೆದರಿಸುವುದಕ್ಕೂ ಕುಟುಕುಕಣಗಳು ಸಹಾಯವಾಗುತ್ತವೆ. ಈ ವಂಶಕ್ಕೆ ಸೇರಿದ ಪ್ರಾಣಿಗಳು ಸಾಗರದ ಜೀವಿಗಳಲ್ಲಿಯೇ ಅತಿ ಸುಂದರವಾದ ಪ್ರಾಣಿಗಳು. ಸಾಗರದ ಅಂಚಿನಲ್ಲಿ ಕಾಣುವ ಸಾಗರದ ಕುಸುಮ (Sea Anemone) ಗಳು, ಸುಂದರವಾದ ಹವಳಗಳು (Corals) ಈ ವಂಶದಲ್ಲಿ ಪುಷ್ಪಪ್ರಾಣಿಗಳು (Anthozoa) ಎಂಬ ವರ್ಗಕ್ಕೆ ಸೇರುತ್ತವೆ. ಈ ಪ್ರಾಣಿಗಳ ಸುಂದರವಾದ ಬಣ್ಣದಿಂದಲೂ, ಹೂವಿನಂತಿರುವ ಆಕೃತಿಯಿಂದಲೂ, ಇವುಗಳು ವಾಸಿಸುವ ಸ್ಥಳಗಳನ್ನು ಸಾಗರದ ಹೂದೋಟಗಳೆಂದರೆ ಅತಿಶಯವಾಗಲಾರದು. ಜಠರಾಂಶ ಜೀವಿಗಳು ಬಹಳವಾಗಿ ಒಂಟಿ ಜೀವಿಗಳು. ಹವಳದ ಹುಳುಗಳು ಸುಣ್ಣದ ಅಸ್ಥಿಪಂಜರವನ್ನು ಕಟ್ಟಿ ಅದರ ಹೊರಗೋ ಒಳಗೋ ವಾಸಿಸುತ್ತವೆ. ನಾನಾ ರೀತಿಯ ಆಕಾರದ ಸುಣ್ಣದ ಅಸ್ಥಿಪಂಜರದ ಬಿಳಿಯ ಬಣ್ಣದ ಹಿನ್ನೆಲೆಯಲ್ಲಿ ವಿವಿಧವರ್ಣದ ಈ ಹವಳದ ಹುಳುಗಳನ್ನು ನೋಡಬೇಕು! ಕೆಂಪುನೇರಳೆ ಮಿಶ್ರಿತ

ದಲ್ಲಿ, ಬೆಳವಣಿಗೆಯಲ್ಲಿ ಕೆಲವು ಗಂಟೆಗಳ ಕಾಲಾವಕಾಶವನ್ನು ಬಿಟ್ಟರೆ, ಒಂದೇ ಸ್ಥಳದಲ್ಲಿ ಅಂಟಿಕೊಂಡು, ಸ್ಥಳದಿಂದ ಸ್ಥಳಕ್ಕೇ ಓಡಾಡಲಾರವು. ಕೆಂಪು, ಕಿತ್ತಲೆ, ನೇರಳೆ, ಹಸಿರು, ಹಳದಿ ಮುಂತಾದ ವಿವಿಧ ವರ್ಣಗಳಿಂದ ಕೂಡಿದ ಈ ಪ್ರಾಣಿಗಳನ್ನು ನೋಡಲು ಬಲುಚೆನ್ನು.

ಸ್ಪಂಜು ಪ್ರಾಣಿಗಳಿಗಿಂತ ವಿಕಾಸದಲ್ಲಿ ಮುಂದುವರಿದ ಪ್ರಾಣಿಗಳೆಂದರೆ ಜಠರಾಂಶ ಜೀವಿಗಳು (Coelenterates). ಇವು ಟೊಳ್ಳುದೇಹದ ಬಹುಕಣ ಜೀವಿಗಳು. ಈ ಪ್ರಾಣಿಗಳ ದೇಹರಚನೆ ಸ್ಪಂಜು ಪ್ರಾಣಿಗಳ ಸಾಮೂಹಿಕ ಜೀವನಕ್ಕಿಂತಲೂ ಮುಂದುವರಿದಿದೆ. ಇವುಗಳ ದೇಹದಲ್ಲಿರುವ ಜೀವಕಣಗಳು ಸ್ವೇಚ್ಛಾಪ್ರವೃತ್ತಿಗಳಾಗದೆ, ನೂರಾರು ಜೀವಕಣಗಳು ಒಡಗೂಡಿ ಜೀವಕಣಗಳ ಪದರ (Layer) ಗಳೇರ್ಪಟ್ಟಿದೆ. ಈ ವಂಶಕ್ಕೆ ಸೇರಿದ ಕೆಲವು ಪ್ರಾಣಿಗಳು ಬಂಡೆಗಳಿಗೋ, ಗಿಡಗಳಿಗೋ ಅಂಟಿಕೊಂಡಿರುತ್ತವೆ, ಕೆಲವು ಸ್ಥಳದಿಂದ ಸ್ಥಳಕ್ಕೆ ಓಡಾಡಲೂ ಬಲ್ಲವು. ಜೀವವಿಕಾಸದಲ್ಲಿಯೇ ಮೊದಲಬಾರಿಗೆ ಇವುಗಳಲ್ಲಿ ನರಕಣ (Nerve Cell) ಗಳನ್ನು ಕಾಣಬಹುದು. ಈ ಪ್ರಾಣಿಗಳ ದೇಹ ಒಂದು ಕಡೆ ಮುಚ್ಚಿದ ಕೊಳವೆಗಳಂತಿರುತ್ತದೆ. ತೆರೆದಿರುವ ಇನ್ನೊಂದು ತುದಿಯೇ ಬಾಯಿ. ಈ ಬಾಯಿಯ ಸುತ್ತಲೂ ಕರಬಳ್ಳಿ (Tentacle) ಗಳಿವೆ. ಈ ಕರಬಳ್ಳಿಗಳಮೇಲೆ ಕುಟುಕುಕಣ (Stinging Cell) ಗಳಿವೆ. ಇವಕ್ಕೆ ಸ್ವಲ್ಪಮಟ್ಟಿಗೆ ಇಂದ್ರಿಯ ಜ್ಞಾನವಿದೆ. ಸಣ್ಣಸಣ್ಣ ಜೀವಿಗಳನ್ನು ಕರಬಳ್ಳಿಗಳ ಸಹಾಯದಿಂದ ಹಿಡಿದು, ಕುಟುಕು ಕಣಗಳ ವಿಷದಿಂದ ಕೊಂದು ಬಾಯಿಯ ಮುಖಾಂತರ ಒಳಕ್ಕೆ ತೆಗೆದುಕೊಳ್ಳುತ್ತವೆ. ಹೀಗೆ ಆಹಾರದ ಜೀವಿಗಳನ್ನು ಕೊಲ್ಲುವುದಕ್ಕೂ, ಶತ್ರುಗಳನ್ನು ಹೆದರಿಸುವುದಕ್ಕೂ ಕುಟುಕುಕಣಗಳು ಸಹಾಯವಾಗುತ್ತವೆ. ಈ ವಂಶಕ್ಕೆ ಸೇರಿದ ಪ್ರಾಣಿಗಳು ಸಾಗರದ ಜೀವಿಗಳಲ್ಲಿಯೇ ಅತಿ ಸುಂದರವಾದ ಪ್ರಾಣಿಗಳು. ಸಾಗರದ ಅಂಚಿನಲ್ಲಿ ಕಾಣುವ ಸಾಗರದ ಕುಸುಮ (Sea Anemone) ಗಳು, ಸುಂದರವಾದ ಹವಳಗಳು (Corals) ಈ ವಂಶದಲ್ಲಿ ಪುಷ್ಪಪ್ರಾಣಿಗಳು (Anthozoa) ಎಂಬ ವರ್ಗಕ್ಕೆ ಸೇರುತ್ತವೆ. ಈ ಪ್ರಾಣಿಗಳ ಸುಂದರವಾದ ಬಣ್ಣದಿಂದಲೂ, ಹೂವಿನಂತಿರುವ ಆಕೃತಿಯಿಂದಲೂ, ಇವುಗಳು ವಾಸಿಸುವ ಸ್ಥಳಗಳನ್ನು ಸಾಗರದ ಹೂದೋಟಗಳೆಂದರೆ ಅತಿಶಯವಾಗಲಾರದು. ಜಠರಾಂಶ ಜೀವಿಗಳು ಬಹಳವಾಗಿ ಒಂಟಿ ಜೀವಿಗಳು. ಹವಳದ ಹುಳುಗಳು ಸುಣ್ಣದ ಅಸ್ಥಿಪಂಜರವನ್ನು ಕಟ್ಟಿ ಅದರ ಹೊರಗೋ ಒಳಗೋ ವಾಸಿಸುತ್ತವೆ. ನಾನಾ ರೀತಿಯ ಆಕಾರದ ಸುಣ್ಣದ ಅಸ್ಥಿಪಂಜರದ ಬಿಳಿಯ ಬಣ್ಣದ ಹಿನ್ನೆಲೆಯಲ್ಲಿ ವಿವಿಧವರ್ಣದ ಈ ಹವಳದ ಹುಳುಗಳನ್ನು ನೋಡಬೇಕು! ಕೆಂಪುನೇರಳೆ ಮಿಶ್ರಿತ

ವಾದ **ಕೊಳವೆ ಹವಳ** (Organ Pipe Coral)ಗಳು ಒಂದಕ್ಕೊಂದು ಅಂಟಿಕೊಂಡು ಸಮಾನಾಂತರವಾಗಿರುವ ಕೊಳವೆಗಳನ್ನು ಕಟ್ಟಿ ಅದರೊಳಗಡೆ ವಾಸಿಸುತ್ತವೆ. ಕೆಲವು ಹವಳಗಳು ಮರಗಿಡಗಳಂತೆ ಕವಲೊಡೆದಿರುತ್ತವೆ. ಮೆದುಳು ಹವಳ (Brain Coral) ದುಂಡುದುಂಡಾಗಿ ಮೆದುಳು, ಅದರ ಮೇಲಿರುವ ಸುಕ್ಕನ್ನು ಹೋಲುತ್ತದೆ. ಕೆಲವು ತಲೆಕೆಳಗಾದ ನಾಯಿಕೊಂಡೆಗಳಂತಿರುತ್ತವೆ. ಬೀಸಣಿಗೆಗಳಂತಿರುವ ಸಾಗರದ ಬೀಸಣಿಗೆ (Sea Fan) ಗಳೆಂಬ ಹವಳಗಳಿವೆ. ಕೈಬೆರಳುಗಳಂತಿರುವ ಸಾಗರದ ಲೇಖನಿ (Sea Pen) ಎಂಬ ಹವಳಗಳಿವೆ.

ಪಕ್ಷಿಗಳ ಪುಕ್ಕಗಳಂತೆ ನಯವಾಗಿ, ನೀರಿನಂತೆ ಮೃದುವಾಗಿ, ಗಿಡಗಳಂತೆ ಬೆಳೆಯುವ ಜಠರಾಂಶ ಜೀವಿಗಳಿವೆ. ಸ್ಫಟಿಕದಂತೆ ಸ್ವಚ್ಛವಾದ, ಬಿಳಿಯ ಮತ್ತು ಅಲ್ಪಸ್ವಲ್ಪ ಬಣ್ಣವುಳ್ಳ ಜೊಲ್ಲುಮೀನು (Jelly Fish) ಗಳೂ ಈ ವಂಶಕ್ಕೆ ಸೇರುತ್ತವೆ. ನೀಲಿ, ಗುಲಾಬಿ, ಕುಂಕುಮವರ್ಣಗಳಿಂದ ಕೂಡಿ ಆಕಾರದಲ್ಲಿ ಸಣ್ಣವಾದರೂ ವಿಷಪೂರಿತವಾದ ಪೋರ್ಚುಗೀಸರ ಯುದ್ಧಮಾನವ (Portugeese-man-of-war) ಜೀವಿಗಳೂ ಉಂಟು. ಈ ಜೀವಿಗಳು ಈಜುಬುರುಡೆಗಳಂತಿರುವ ಅಂಗಗಳ ಸಹಾಯದಿಂದ ನೀರಿನ ಮೇಲೆ ತೇಲುತ್ತವೆ. ಸಿಹಿನೀರಿನಲ್ಲಿ ಜೀವಿಸುವ ಜಠರಾಂಶಜೀವಿಗಳೆಂದರೆ ತುಂಬಾ ವಿರಳ. ಪ್ರಪಂಚದಲ್ಲಿ ಎಲ್ಲೋ ಕೆಲವೆಡೆಗಳಲ್ಲಿ ಮಾತ್ರ ಸಿಕ್ಕಿವೆ. ಇಂಥವೇ ಸಿಹಿನೀರಿನ ಜೊಲ್ಲುಮೀನುಗಳು, ಶಿವಮೊಗ್ಗಿಯಿಂದ ಎರಡು ಮೈಲಿ ದೂರದಲ್ಲಿರುವ ಅರಕೆರೆಯ ಹತ್ತಿರ ತುಂಗಾನದಿಯಲ್ಲಿ, ಬೇಸಿಗೆಯಲ್ಲಿ ನೀರು ಒಣಗಿದಾಗ, ಅಲ್ಲಲ್ಲಿ ಗುಂಡಿಗಳಲ್ಲಿ ನಿಂತ ನೀರಿನಲ್ಲಿ ಸಿಕ್ಕಿದ್ದವು. ಅವನ್ನು ನೋಡುವ ಸುಯೋಗ ನಮಗೂ ದೊರಕಿತ್ತು. ಇಂತಹ ಅದ್ಭುತಗಳನ್ನು ನೋಡಿ ಆನಂದಿಸಬೇಕಲ್ಲದೆ ಕೇಳಿಯಲ್ಲ!

ಆಕಾರದಲ್ಲಿ ಹೂವುಗಳಂತಿದ್ದರೂ ಕೆಲವು ಹುಳಗಳ ರಚನೆ ಜಠರಾಂಶಜೀವಿಗಳಂತೆ ಜೊಲ್ಲಿನಿಂದ ಮಾಡಲ್ಪಟ್ಟಿಲ್ಲ. ಇವು ಗಿಡಗೆಂಟೆಗಳನ್ನೂ ಹೋಲುವುದಿಲ್ಲ. ಈ ಜಂತುಗಳ ಆಕಾರವೂ ವಿವಿಧ ರೀತಿಯಲ್ಲಿದೆ. ಮಣ್ಣುಹುಳುಗಳಲ್ಲ ದೇಹ ಉಂಗುರಗಳ ಜೋಡಣೆಯಂತಿದೆ. ಜಿಗಣೆಗಳಲ್ಲಿ ದೇಹ ಮಣ್ಣುಹುಳುವಿನಂತೆಯೇ ಇದೆ. ಇದರ ಜೊತೆಗೆ ದೇಹದ ಎರಡು ತುದಿಯಲ್ಲಿಯೂ ಎರಡು ಹೀರುಬಟ್ಟಲು (Sucker) ಗಳಿವೆ.

ಪಟ್ಟಿ, ಲಾಡಿಗಳಂತಿರುವ ಪಟ್ಟಿಹುಳು (Ribbon Worm), ಲಾಡಿ ಹುಳು (Taipe Worm) ಗಳಿವೆ. ಎಲೆಯಂತಿರುವ ಚಪ್ಪಟೆ ಜಂತುಗಳಿವೆ. ಕೆಲವು ಸಾಗರದ ಜಂತುಗಳಿಗೆ, ಅಲಂಕಾರದ ಆಕಾರವೂ, ಸುಂದರವಾದ ಬಣ್ಣವೂ ಇವೆ. ಕೆಲವು

ಜಂತುಗಳು ಬಿಳಿ, ಗುಲಾಬಿ ಬಣ್ಣಗಳಿಂದ ಕೂಡಿವೆ. ಇವು ಕವಲೊಡೆದು ಪುಕ್ಕಗಳಂತಿರುವ ತಮ್ಮ ಮೃದುದೇಹವನ್ನು, ಸುಣ್ಣ ಮರಳು ಅಥವಾ ದೇಹದಿಂದ ಉಗುಳಿದ ಚರ್ಮದ ಕೊಳವೆಗೂಡುಗಳನ್ನು ಕಟ್ಟಿ ಅದರೊಳಗೆ ರಕ್ಷಿಸಿಕೊಳ್ಳುತ್ತವೆ. ನಮಗೆ ಹೊರಗೆ ಕಾಣುವುದು ನೀರಿನಲ್ಲಿ ಹೊಯ್ದಾಡುತ್ತಿರುವ ಸುಲಲಿತವಾದ ಕಿವಿರುಕಿರೀಟ (Crown of Gills) ಮಾತ್ರ. ಈ ಹುಳುಗಳು ತಮ್ಮ ನಯವಾದ ದೇಹವನ್ನು ಹೊರಗಿನ ಪ್ರಕೃತಿಯ ವಿಕೋಪವಾತಾವರಣದಿಂದಲೂ, ಶತ್ರುಗಳಿಂದಲೂ ರಕ್ಷಿಸಿಕೊಳ್ಳಲು ಈ ರೀತಿಯ ಗೂಡುಗಳನ್ನು ಕಟ್ಟಿ ಅದರೊಳಗೆ ವಾಸಿಸುತ್ತವೆ. ಏನೊಂದು ಗಲಾಟೆಯಿಲ್ಲದೆ ತಾವೇ ತಾವಾಗಿದ್ದಾಗ, ಹೂವು ಸುಳಿಗಾಳಿಯಲ್ಲಿ ಓಲಾಡುವಂತೆ ನೀರಿನಲ್ಲಿ ಓಲಾಡುತ್ತಿರುತ್ತವೆ. ಆದರೆ ಅಪಾಯದ ಮೊದಲ ಚಿಸ್ಥೆ ಕಾಣುತ್ತಲೇ ಗೂಡಿನೊಳಗೆ ಅಡಗಿಕೊಂಡುಬಿಡುತ್ತವೆ. ಈ ಗೂಡುಗಳು ಶತ್ರುಗಳಿಗೆ ಕಾಣಿಸದಿರಲೆಂದು ಮರಳಿನೊಳಗೆ ಹುದುಗಿಟ್ಟಿರುತ್ತವೆ. ಕೆಲವು ತಮ್ಮ ಗೂಡನ್ನು ಕಪ್ಪೆಚಿಪ್ಪಿನ ಚೂರು, ಮಣ್ಣು ಮರಳಿನಿಂದ ಭದ್ರಪಡಿಸಿಕೊಂಡಿರುತ್ತವೆ.

ಸಾಗರದ ಹುಳುಗಳಲ್ಲಿ ಕೆಲವು ಸ್ವಯಂರಂಜಿಗಳು. ಸಾಗರದ ಇಲಿ (Sea Mouse)ಯೂ ಬಿರುಗೂದಲಿನಿಂದ ಹೊಚ್ಚಿದ ಅಂಡಾಕಾರದ ಹುಳು. ಇದರದು ಬಂಗಾರಬಣ್ಣ. ನೀರಿನಲ್ಲಿ ಚಲಿಸುವಾಗ ಈ ಬಂಗಾರಬಣ್ಣದಿಂದ ನವಿಲುನೀಲಿಗೆ ತಿರುಗುವುದನ್ನು ನೋಡಲು ಬಲು ಸೊಗಸು! ಕಂಚುಬಣ್ಣದ ಬೊಂತೆಹುಳು (Neries)ವೂ ಉಂಗುರುದ ಹುಳುಗಳಲ್ಲಿ ಒಂದು. ಇದರ ದೇಹದ ಪ್ರತಿಯೊಂದು ಉಂಗುರಭಾಗ (Segment)ದ ಪಕ್ಕದಲ್ಲಿಯೂ ಬಿರುಗೂದಲು (Setae)ಗಳನ್ನುಳ್ಳ ಹುಟ್ಟಿನಂತಿರುವ ಚಲನಾಂಗಗಳಿವೆ.

ಉಂಗುರದ ಹುಳುಗಳಲ್ಲಿ ದೇಹವು ಉಂಗುರದಂತಿರುವ ಬಹುಭಾಗಗಳ ಜೋಡಣೆಯಿಂದಾಗಿದೆ. ಮಣ್ಣುಹುಳು, ಜಿಗಣೆಗಳನ್ನು ಬಿಟ್ಟರೆ ಮಿಕ್ಕ ಉಂಗುರದ ಹುಳುಗಳಲ್ಲಿ ಪ್ರತಿಯೊಂದು ಉಂಗುರಭಾಗವೂ ಒಂದಿಲ್ಲೊಂದು ತರಹೆಯ ಪಾದಗಳನ್ನೊ, ಬಿರುಗೂದಲಿನ ಚಲನಾಂಗಗಳನ್ನೊ ಹೊಂದಿರುತ್ತವೆ. ಈ ತರಹೆಯ ಹುಳುಗಳಿಂದಲೇ ಕೀಟಕ (Insect)ಗಳೇ ಮುಂತಾದ ನಡೆಯಬಲ್ಲ ಸಂಧಿಪದಿಗಳು ಹುಟ್ಟಿರಬಹುದೆಂದು ಊಹಿಸಲಾಗಿದ್ದೆ. ಸಂಧಿಪದಿಗಳ ದೇಹದ ರಚನೆಯೂ ಉಂಗುರದ ಬಹುಭಾಗಗಳ ಜೋಡಣೆಯಿಂದಾಗಿದೆ. ಪ್ರತಿಯೊಂದು ಭಾಗಕ್ಕೂ ಒಂದೊಂದು ಜೊತೆ ಉಪಾಂಗಗಳಿವೆ. ಇವುಗಳ ಮೆದುಳು, ಮೆದುಳುಬಳ್ಳಿಯೂ, ಅವುಗಳ ರಚನೆಯೂ ಉಂಗುರದ ಹುಳುಗಳಾದ ವಲಯವಂತಗಳಂತಿದೆ.

ಉಂಗುರದ ಹುಳುಗಳಲ್ಲಿ ನಾವು ಚೆನ್ನಾಗಿ ಕಾಣಬಹುದಾದ ವಿಕಾಸವೆಂದರೆ,

ಸ್ಪಂಜು ಪ್ರಾಣಿಗಳಂತೆ, ಜಠರಾಂಶಜೀವಿಗಳಂತೆ ನೀರಿನ ಪ್ರವಾಹದೊಡನೆ ತೇಲಿ ಓಡಾಡದೆ ತಮ್ಮ ಇಚ್ಛಾನುಸಾರ ಸ್ಥಳದಿಂದ ಸ್ಥಳಕ್ಕೆ ಓಡಾಡಬಲ್ಲ ಶಕ್ತಿ. ಹೀಗೆ ಬಂದ ಓಡಾಟಿಕೆಯ ನಡತೆಗೆ ಅನುಕೂಲವಾಗುವಂತೆ ದೇಹವೂ ರೂಪಾಂತರ ಹೊಂದಿದೆ. ಇವುಗಳಲ್ಲಿ ಒಂದು ಭಾಗವು ತಲೆಯ ಭಾಗ; ಇದರ ವಿರುದ್ಧಭಾಗ, ಹಿಂಭಾಗ ಅಥವಾ ಬಾಲದ ಭಾಗ. ಇದನ್ನು ತಲೆಯ ಭಾಗ ಎಳೆದೊಯ್ಯುತ್ತದೆ. ಇದನ್ನು ಉಗಿಬಂಡಿಗೆ ಹೋಲಿಸಬಹುದು. ಉಗಿಬಂಡಿಯ ಮುಂಭಾಗದಲ್ಲಿ ಎಂಜಿನ್ ಇದ್ದು ಹಿಂದಿನ ಬೋಗಿಗಳನ್ನು ಎಳೆದೊಯ್ಯುವಂತೆ ತಲೆಯ ಭಾಗ ಬಾಲದ ಭಾಗವನ್ನು ಎಳೆದೊಯ್ಯುತ್ತದೆ. ಹೀಗೆ ಚಲಿಸುವಾಗ ಒಂದು ಭಾಗ ಮೇಲ್ಮುಖನಾಗಿರುತ್ತದೆ, ಇದೇ ಬೆನ್ನು. ಇನ್ನೊಂದು ಭಾಗ ಕೆಳಮುಖನಾಗಿರುತ್ತದೆ, ಇದೇ ಹೊಟ್ಟೆ. ಇನ್ನೆರಡು ಭಾಗಗಳು ಅಕ್ಕಪಕ್ಕಗಳು. ಇವೇ ಎಡಬಲಗಳು. ಈ ರೀತಿ ಜೀವಿಗಳು ವಿಕಾಸಹೊಂದಿದಂತೆ ಸರಳದೇಹ ಬಹಳ ಮಾರ್ಪಾಡುಗಳನ್ನು ಹೊಂದಿದೆ. ವಿಕಾಸದಲ್ಲಿ ಈ ಅವಸ್ಥೆ (Stage) ಬಹಳ ಮುಖ್ಯವಾದುದು. ಈ ರೀತಿಯ ದೇಹರಚನೆ ಪ್ರಾಣಿಗಳ ಚಟುವಟಿಕೆಗಳಿಗೆ ಹಿನ್ನೆಲೆಯಾದ ಮೆದುಳಿನ ಬೆಳವಣಿಗೆಗೆ ತುಂಬಾ ಸಹಕಾರಿಯಾಗಿದೆ.

ಕಂಟಕ ಚರ್ಮಿ (Echinodermata) ಗಳಲ್ಲಿ ಹೆಸರೇ ಸೂಚಿಸುವಂತೆ ಕಠಿನ ವಾಗಿ ಮುಳ್ಳುಹಂದಿಯಂತಿರುವ ಹೊರಚರ್ಮವಿದೆ. ದೇಹರಚನೆ ಪಂಚಕಿರಣಗಳ ನಕ್ಷತ್ರಾಕಾರವಾಗಿದೆ. ಕೆಲವು ಕಂಟಕ ಚರ್ಮಿಗಳಲ್ಲಿ ಈ ನಕ್ಷತ್ರಾಕಾರವನ್ನು ಕಂಡುಹಿಡಿಯುವುದು ಕಷ್ಟ. ಕೆಲವು ಕಂಟಕ ಚರ್ಮಿಗಳ ವಿನಾ ಬೇರೆಯವುಗಳಲ್ಲಿ ತಲೆ, ಬಾಲ, ಎಡ, ಬಲ, ಹೊಟ್ಟೆ, ಬೆನ್ನು ಎಂದು ದೇಹವನ್ನು ವಿಂಗಡಿಸಲಾಗುವುದಿಲ್ಲ.

ನಕ್ಷತ್ರಮೀನು (Star Fish) ಗಳಲ್ಲಿ ಸಂಚಿಕಿರಣದ ನಕ್ಷತ್ರಾಕಾರವನ್ನು ಚೆನ್ನಾಗಿ ಕಾಣಬಹುದು. ಈ ಕಿರಣಗಳ ಕೆಳಭಾಗದಲ್ಲಿ ಹೀರುಬಟ್ಟಲುಗಳನ್ನುಳ್ಳ ಸಣ್ಣ ಸಣ್ಣ ಕೊಳವೆ ಕಾಲು (Tube Foot) ಗಳ ಸಾಲುಗಳಿವೆ. ಈ ಪ್ರಾಣಿಗಳು ಚಲಿಸುವಾಗ ಒಂದು ಕಿರಣವನ್ನು ತಲೆಯಂತೆ ಮೇಲೆತ್ತಿ ಚಲಿಸುತ್ತವೆ. ಇವುಗಳ ಆಹಾರ ಮೃದ್ವಂಗಿಗಳೇ ಮುಂತಾದ ಕಪ್ಪೆಚಿಪ್ಪಿನ ಪ್ರಾಣಿಗಳು. ಈ ಕಪ್ಪೆಚಿಪ್ಪಿನ ಪ್ರಾಣಿಯ ಎರಡು ಚಿಪ್ಪುಗಳನ್ನು ಕೊಳವೆಕಾಲುಗಳ ಹೀರುಬಟ್ಟಲಿನ ಸಹಾಯದಿಂದ ಹಿಡಿದು ಹಿಗ್ಗಿಸಿ ತೆಗೆಯುತ್ತವೆ. ಆಹಾರಜೀವಿ ಅದರ ಬಾಯಿಯ ರಂಧ್ರಕ್ಕಿಂತ ತೀರಾ ದೊಡ್ಡದಾಗಿರುವುದರಿಂದ ದೇಹದ ಒಳಗಿರುವ ಜಠರವೇ ಹೊರಕ್ಕೆ ಬಂದು, ಆಹಾರ ಜೀವಿಯನ್ನು ನುಂಗಿ, ಅರಗಿಸಿ, ಅರಗದ ಕಲ್ಮಷವನ್ನು ಹೊರಗೆ ಬಿಟ್ಟು ಒಳಕ್ಕೆ ಹೋಗುತ್ತದೆ. ನಕ್ಷತ್ರ ಮೀನುಗಳಿಗೆ ಒಳಗಡೆಯ ಅಸ್ಥಿಪಂಜರವಿಲ್ಲ. ಹೊರಗಿರುವ

ಕಠಿನವಾದ ಚರ್ಮವನ್ನೇ, ಎಲುಬಿನ ಚೂರುಗಳು, ಸುಣ್ಣದ ಮುಳ್ಳುಗಳು ಮುಂತಾದ ವನ್ನು ನೇಯ್ದು ಭದ್ರಪಡಿಸಿಕೊಂಡಿವೆ. ದೇಹದ ಮೇಲ್ಭಾಗದಲ್ಲಿ ಇಕ್ಕಳದಂತಿರುವ ಹಲ್ಲುಗಳು ಹರಡಿವೆ. ಈ ಹಲ್ಲುಗಳು ದೇಹದ ಮೇಲ್ಭಾಗವನ್ನು ಶುಚಿಮಾಡಲೂ ಶತ್ರುಗಳಿಂದ ರಕ್ಷಿಸಿಕೊಳ್ಳಲೂ ಉಪಯೋಗವಾಗುತ್ತವೆ.

ಉದ್ದವಾದ ಕುಚ್ಚಿನಂತಿರುವ ಕರಕಿರಣ (Ray or Arm) ಗಳನ್ನು ಹೊಂದಿದ ಪೆಡಸುನಕ್ಷತ್ರಗಳು (Brittle Stars) ಮತ್ತು ಇವುಗಳ ಹತ್ತಿರದ ಬಂಧುಗಳಾದ ಸಾಗರದ ಕಮಲಗಳು (Sea Lily) ನಕ್ಷತ್ರ ಮೀನುಗಳನ್ನೇ ಹೋಲುತ್ತವೆ. ಇವು ಗಳಲ್ಲಿ ಕರಕಿರಣಗಳು ನಕ್ಷತ್ರ ಮೀನುಗಳಲ್ಲಿರುವಂತೆ ದೇಹಕ್ಕೆ ಹೊಂದಿಕೊಂಡಿರದೆ ದೇಹದಿಂದ ಬೇರೆಯಾಗಿವೆ. ಪೆಡಸು ನಕ್ಷತ್ರಗಳು ಹಾವಿನಂತಿರುವ ತಮ್ಮ ಉದ್ದ ವಾದ ಕರಕಿರಣಗಳ ಸಹಾಯದಿಂದ ಓಡಾಡುತ್ತವೆ. ಈಜುವ, ಬಂಡೆಗಳ ಮೇಲೆ ತೆವಳುವಶಕ್ತಿ ಇದ್ದರೂ ಕೆಲವು ಸಾಗರದ ಕಮಲಗಳು ಕಲ್ಲುಬಂಡೆಗಳಿಗೆ ಅಂಟಿ ಕೊಂಡು ವಾಸಿಸುತ್ತವೆ. ಇವಕ್ಕೆ ಗಿಡಗಳಂತೆ ಕೆಳಗೆ ಕಾಂಡವಿರುತ್ತದೆ.

ಸಾಗರದ ಬಾಲಕ (Sea Urchin) ನಲ್ಲಿ ಐದು ಕರಕಿರಣಗಳೂ ಸ್ವತಂತ್ರ ವಾಗಿರದೆ ಮೇಲಕ್ಕೆ ಬಾಗಿ, ಒಂದರ ಪಕ್ಕಕ್ಕೊಂದು ಅಂಟಿಕೊಂಡು ಪೆಡಸಾದ ದುಂಡನೆಯ ಚಿಪ್ಪನ್ನು ಮಾಡಿವೆ. ಕೊಳವೆಕಾಲುಗಳು ಚಿಪ್ಪಿನ ಹೊರಭಾಗದಲ್ಲಿಯೇ ಇವೆ. ಚಿಪ್ಪಿನ ಮೇಲಿರುವ ಮುಳ್ಳುಗಳು ಇವನ್ನು ರಕ್ಷಿಸುತ್ತವೆ. ಈ ಮುಳ್ಳುಗಳು ನಮ್ಮ ಕೈಗಳ ಮೂಳೆಗಳಂತೆ ಕೀಲಾಗಿ ಅಂಟಿಕೊಂಡಿವೆ. ಇವಕ್ಕೆ ಚಲಿಸುವ ಶಕ್ತಿ ಇದೆ. ಬಾಯಿ ಈ ಚಿಪ್ಪಿನ ಕೆಳಭಾಗದಲ್ಲಿದೆ. ಈ ಬಾಯಿಯು ಸುತ್ತಲೂ ಮೃದುವಾದ ಚರ್ಮವಿದೆ. ಇದರ ಸುತ್ತಲೂ ಐದು ಬಲವಾದ ಹಲ್ಲುಗಳಿವೆ. ಸಾಗರ ಬಾಲಕದ ಆಕಾರ ಕಿತ್ತಳೆ ಹಣ್ಣಿನಂತೆ ದುಂಡಗೂ, ಅಂಡಾಕಾರವಾಗಿಯೂ, ತೆಳ್ಳಗೆ ತಟ್ಟೆ ಯಂತೆಯೂ ಇರುತ್ತದೆ.

ಸಾಗರದ ಸೌತೆಕಾಯಿ (Sea Cucumber) ಗಳು ಈ ಯಾವ ಪ್ರಾಣಿ ಗಳಂತೆಯೂ ಇಲ್ಲ. ಉದ್ದವಾದ ಕೊಳವೆಗಳಂತಿವೆ. ಇವುಗಳ ದೇಹವನ್ನು ತಲೆ, ಬಾಲ, ಹೊಟ್ಟೆ ಬೆನ್ನು ಎಂದು ವಿಂಗಡಿಸಬಹುದು. ಇವುಗಳ ಚರ್ಮ ದಪ್ಪ ತೊಗಲಿನಂತಿರುತ್ತದೆ. ಈ ತೊಗಲಿನಲ್ಲಿ ಹುದುಗಿರುವ ಸೂಕ್ಷ್ಮವಾದ ಕಡ್ಡಿ, ಚಿಪ್ಪಿನ ತಟ್ಟೆಗಳೇ ಇವುಗಳ ಅಸ್ಥಿಪಂಜರ. ಇವುಗಳಿಗೂ ಕೊಳವೆಕಾಲುಗಳಿವೆ. ದೇಹದ ತಲೆಯಭಾಗದಲ್ಲಿರುವ ಬಾಯಿಯ ಸುತ್ತಲೂ ಕರಬಳ್ಳಿಗಳಾಗಿ ಮಾರ್ಪಟ್ಟ ಕೊಳವೆ ಕಾಲುಗಳಿವೆ. ಈ ಕರಬಳ್ಳಿಗಳ ಸಹಾಯದಿಂದ ಆಹಾರವನ್ನು ಬಾಯಿಯೊಳಕ್ಕೆ ನೂಕುತ್ತದೆ. ಕರಬಳ್ಳಿಗಳು ಗುದ್ದಲಿಯಾಕಾರವಾಗಿಯೂ, ಕವಲೊಡೆದು ಉದ್ದನೆ

ಮೀಸೆಯ ಆಕಾರವಾಗಿಯೂ ಇರುತ್ತವೆ. ಬಾಯಿಂದ ಬೆಳ್ಳಗೆ ಹತ್ತಿಯಂತಿರುವ ಅಂಟುವಸ್ತುವನ್ನು ಉಗುಳಿ ಆಹಾರದ ಸುತ್ತಲೂ ಸುತ್ತುತ್ತವೆ. ಇದರಿಂದಾಗಿ ಇವನ್ನು ಹತ್ತಿ ನೂಲುವವು (Cotton Spinners) ಎಂದು ಕರೆಯುತ್ತಾರೆ.

ಮೃದ್ವಂಗಿಗಳ (Mollusca) ದೇಹ, ಹೆಸರೇ ಸೂಚಿಸುವಂತೆ ತುಂಬಾ ಮೃದು. ಈ ವಂಶಕ್ಕೆ ಅಪೂರ್ವವಾದ ಪ್ರಾಣಿಗಳು ಸೇರುತ್ತವೆ. ಬಣ್ಣಬಣ್ಣದ ಸಾಗರದ ಚಿಪ್ಪುಗಳು, ತೋಟದಲ್ಲಿ ಹಾವಳಿ ಮಾಡುವ ಬಸವನ ಹುಳುಗಳು, ಸಾಗರದ ಭಯಂಕರ ಪ್ರಾಣಿಗಳಲ್ಲೊಂದಾದ 'ಅಷ್ಟಪಾದಿ' (Octopus)ಗಳೂ ಈ ವಂಶಕ್ಕೆ ಸೇರುತ್ತವೆ.

ವಿಕಾಸದ ಹಾದಿಯಲ್ಲಿ ಮೃದ್ವಂಗಿಗಳು ಕಂಟಕ ಚರ್ಮಿಗಳಿಗಿಂತ ಒಂದು ಹೆಜ್ಜೆ ಮುಂದುವರಿದಿವೆ. ಸಮರ್ಥವಾದ ಜೀರ್ಣಾಂಗಗಳು, ಮೆದುಳುನರಗಳು ಇವೆ. ಇವುಗಳಲ್ಲಿ ರಕ್ತಪರಿಚಲನೆಗೆ ಅನುಕೂಲವಾದ ರಕ್ತನಾಳಗಳು ಬೆಳೆದಿವೆ, ಹೃದಯವಿದೆ, ಕಿವಿರುಗಳಿವೆ. ಕೆಲವು ಮೃದ್ವಂಗಿಗಳಲ್ಲಿ ಚೆನ್ನಾಗಿ ಬೆಳೆದಿರುವ ಕಣ್ಣುಗಳಿವೆ.

ಚಿಪ್ಪುಮೀನುಗಳಲ್ಲಿ ಚಿಪ್ಪು ದೇಹದ ಹೊರಭಾಗದಲ್ಲಿದೆ. ಸಾಗರದ ದಡದಲ್ಲಿ ಸಿಕ್ಕುವ ಈ ಪ್ರಾಣಿಗಳ ಬರಿಯ ಚಿಪ್ಪುಗಳನ್ನೆ ನಾವು ಕಪ್ಪೆಚಿಪ್ಪುಗಳು ಎನ್ನುವುದು. ಕೆಲವು ಮೃದ್ವಂಗಿಗಳಿಗೆ ಕಪ್ಪೆಚಿಪ್ಪಿನ ಹುಳುವಿನಲ್ಲಿರುವಂತೆ ಒಂದು ಜೊತೆ ಚಿಪ್ಪಿನ ಚೂರುಗಳಿವೆ. ಒಂದು ಕಡೆ ಬಾಗಿಲಿನಂತೆ ಚಿಲಕದಿಂದ ಅಂಟಿಕೊಂಡಿವೆ. ಹೀಗೆ ಎರಡು ಚಿಪ್ಪಿನ ಚೂರುಗಳಿರುವ ಪ್ರಾಣಿಗಳನ್ನು ದ್ವಿಭಾಗಿ (Bivalve) ಗಳೆನ್ನುತ್ತೇವೆ. ಬಸವನ ಹುಳು, ಶಂಖದ ಹುಳುವಿನಲ್ಲಿರುವಂತೆ ಕೆಲವಕ್ಕೆ ಒಂದೇ ಒಂದು ಚಿಪ್ಪಿನ ಚೂರಿರುತ್ತದೆ.

ದ್ವಿಭಾಗಿಗಳು ಸಾಮಾನ್ಯವಾಗಿ ಸೋಮಾರಿಗಳು. ಇವುಗಳ ದೇಹದಲ್ಲಿ ತಲೆಯೆಂಬ ಭಾಗವೇ ಇಲ್ಲ. ಆಹಾರವನ್ನು ಹಿಡಿಯಲೂ, ಅಗಿಯಲೂ ಅನುಕೂಲವಾದ ಅಂಗಗಳಿಲ್ಲ. ದ್ವಿಭಾಗಿಗಳು ಸಾಮಾನ್ಯವಾಗಿ ಬಂಡೆಗಳಿಗೆ ಅಂಟಿಕೊಂಡೋ, ಮರಳಿನಲ್ಲಿ ಹುದುಗಿಕೊಂಡೋ, ಮರದ ಪೊಟರೆಗಳಲ್ಲಿಯೋ ವಾಸಿಸುತ್ತವೆ. ಅದಕ್ಕಾಗಿಯೇ ರೂಪಗೊಂಡಿರುವ ಕೊಳವೆಗಳ ಮುಖಾಂತರ ಸದಾಕಾಲವೂ ಚಿಪ್ಪಿನೊಳಕ್ಕೆ ಬಂದು ಹೊರಹೋಗುವ ನೀರಿನ ಪ್ರವಾಹದೊಡನೆ ಸೂಕ್ಷ್ಮಜೀವಿಗಳನ್ನೇ ಆಹಾರವಾಗಿ ಉಪಯೋಗಿಸುತ್ತವೆ. ಇದೇ ನೀರಿನಿಂದಲೇ ಉಸಿರಾಡುತ್ತವೆ.

ಜಠರಪಾದಿ (Gastropod) ಗಳಲ್ಲಿರುವುದು ಒಂದೇ ಚಿಪ್ಪು. ಇವು ತಮ್ಮ ದೇಹದ ಕೆಳಗಡೆಇರುವ ದಪ್ಪನಾದ ಚಪ್ಪಟೆ ಮಾಂಸದ ಅಂಗಾಲಿನ ಮೇಲೆ ತೆವಳುತ್ತವೆ. ಇದು ಹೊಟ್ಟೆಯ ಮೇಲೆ ತೆವಳುವ ಭಾವನೆಯನ್ನು ಕೊಡುತ್ತದೆ. ಇದರಿಂದಲೇ ಇವನ್ನು

ಜಠರಪಾದಿಗಳೆನ್ನುವುದು. ಈ ಅಂಗಾಲಿನ ತುದಿಯಲ್ಲಿ ತಟ್ಟೆಯಂತಹ ಗಟ್ಟಿಯಾದ ವಸ್ತುವಿದೆ. ಇದನ್ನು ತಾವು ಹೆದರಿ ಚಿಪ್ಪಿನೊಳಕ್ಕೆ ಹೋದಾಗ ಚಿಪ್ಪಿನ ಬಾಯನ್ನು ಮುಚ್ಚಲು ಉಪಯೋಗಿಸುತ್ತವೆ. ಜಠರಪಾದಿಗಳಲ್ಲಿ ಹಲ್ಲುಗಳ ಸಾಲುಳ್ಳ ಉದ್ದವಾದ ಲಾಡಿಯಂತಿರುವ ನಾಲಿಗೆಯೊಂದಿದೆ. ಇದನ್ನು ಆಹಾರವನ್ನು ಅಗಿಯಲು ಉಪಯೋಗಿಸುತ್ತವೆ. ಒಂದು ಸಾಲು ಹಲ್ಲುಗಳು ಸವೆದುಹೋದರೆ ಇನ್ನೊಂದು ಸಾಲು ಹಲ್ಲು ಮುಂದೆ ಬಂದು ಕೆಲಸಮಾಡುತ್ತದೆ. ಇವುಗಳಲ್ಲಿ ಸ್ಪಷ್ಟವಾದ ತಲೆಯನ್ನು ಕಾಣಬಹುದು. ಈ ತಲೆಯ ತುದಿಯಲ್ಲಿ ಕರಬಳ್ಳಿಗಳಿವೆ. ಈ ಕರಬಳ್ಳಿಗಳ ತುದಿಯಲ್ಲಿ ಬಸವನ ಹುಳುವಿನಲ್ಲಿರುವಂತೆ ಕಣ್ಣುಗಳಿವೆ. ಕೆಲವು ಜಠರಪಾದಿಗಳಲ್ಲಿ ಶಂಖಗಳಲ್ಲಿರುವಂತೆ ಚಿಪ್ಪು ಸುರುಳಿಯಾಕಾರವಾಗಿರುತ್ತದೆ. ಈ ರೀತಿಯ ಸುರುಳಿ ಚಿಪ್ಪುಗಳು, ಸುಂದರವಾದ ಆಕಾರ, ಅಲಂಕಾರ, ಬಣ್ಣಗಳಿಂದ ಕೂಡಿರುತ್ತವೆ.

ಶಿರಪಾದಿ (Cephalopod) ಗಳಾದರೋ ತಮ್ಮ ತಲೆಯನ್ನೇ ಚಲನಾಂಗವನ್ನಾಗಿ ಉಪಯೋಗಿಸುತ್ತವೆ. ಇವುಗಳಲ್ಲಿ ತಲೆಯೂ ಪಾದವೂ ಒಂದುಗೂಡಿವೆ. ಈ ಪಾದಗಳ ಮಧ್ಯದಲ್ಲಿ ಬಾಯಿಯ ರಂಧ್ರವಿದೆ. ಗಿಣಿಯ ಕೊಕ್ಕಿನಂತಿರುವ ಒಂದು ಜೊತೆ ದವಡೆಗಳಿವೆ. ಈ ಬಾಯಿಯ ಸುತ್ತಲೂ ಹೀರು ಬಟ್ಟಲುಗಳನ್ನುಳ್ಳ ಎಂಟು ಹತ್ತು ಕರಗಳಿವೆ. ಇವೇ ರೂಪಾಂತರಹೊಂದಿದ ಪಾದಗಳು. ಈ ಕರಗಳು ಆಹಾರವನ್ನು ಹಿಡಿಯಲು ಸಹಾಯಮಾಡುತ್ತವೆ.

ಶಿರಪಾದಿಗಳಲ್ಲೊಂದಾದ ಅಷ್ಟಪಾದಿ (Octopus) ಗಳಿಗೆ ಎಂಟು ಕರಗಳಿವೆ. ಇವು ಸಾಮಾನ್ಯವಾಗಿ ಸಾಗರದ ತಳದಲ್ಲಿ ವಾಸಿಸುತ್ತವೆ. ಇವು ಸಾಗರದೊಳಗಿರುವ ಗುಹೆಗುಹ್ವರಗಳ ಹತ್ತಿರ ಸುತ್ತಾಡುತ್ತಿರುತ್ತವೆ. ಇವು ಕಲ್ಲುಗೂಡುಗಳನ್ನು ಕಟ್ಟಿಕೊಂಡು; ಅದರಲ್ಲಿ ಕಾಯುತ್ತಿದ್ದು, ಗೂಡಿನ ಹತ್ತಿರ ಬರುವ ಪ್ರಾಣಿಗಳ ಮೇಲೆ ಹಾರಿ, ಉದ್ದವಾದ ಕರಗಳಿಂದ ಕಟ್ಟಿ, ದೇಹದಿಂದ ಒಂದು ರೀತಿಯ ಶಾಯಿ (Sepia) ಹೊರದೂಡಿ, ಸುತ್ತಲಿನ ನೀರನ್ನು ಕಪ್ಪುಮಾಡಿ, ಹಿಡಿದ ಪ್ರಾಣಿಗೆ ಕಣ್ಣು ಕಾಣಿಸದಂತೆ ದಿಗ್ಭ್ರಮೆಹಿಡಿಸಿ ತಿನ್ನುತ್ತವೆ.

ಕೆಲವು ಶಿರಪಾದಿಗಳಿಗೆ ದೇಹದ ಪಕ್ಕದಲ್ಲಿ ಈಜುರೆಕ್ಕೆ (Fin) ಗಳಿರುತ್ತವೆ. ಇವುಗಳಿಗೆ ಕವಲೊಡೆದ ಕಿವಿರುಗಳಿರುತ್ತವೆ. ದೇಹದೊಳಕ್ಕೆ ನೀರಿನ ಪ್ರವಾಹವನ್ನುಂಟುಮಾಡಿ ಉಸಿರಾಡುತ್ತವೆ. ಮತ್ತು ಇದನ್ನು ಲಾಲಿಕೆಯಂತಿರುವ ರೂಪಾಂತರಹೊಂದಿದ ಪಾದಭಾಗದಿಂದ ರಭಸದಿಂದ ಹೊರದೂಡಿ ಬಾಲ ಮುಂದಾಗಿ ಚಲಿಸುತ್ತವೆ. ರೆಂಬೆಮೀನು (Cuttle Fishes) ಗಳನ್ನು ಶತ್ರುಗಳು ಅಟ್ಟಿಸಿಕೊಂಡು ಬಂದಾಗ ಶಾಯಿಯನ್ನು ಉಗುಳಿ ಅದರ ಮರೆಯಲ್ಲಿ ಓಡಿ ಪಾರಾಗುತ್ತವೆ.

ಹಿಂದೆ ಬಾಳಿ ಅಳಿದ ಶಿರಪಾದಿಗಳಲ್ಲಿ ಮಿಕ್ಕ ಮೃದ್ವಂಗಿಗಳಂತೆ ಚಿಪ್ಪು ಹೊರಗಿತ್ತು. ಈಗ ಬದುಕಿರುವ ಶಿರಪಾದಿಗಳಲ್ಲಿ ನಾವಿಗಾಮಿ (Nautilus) ಎಂಬೊಂದನ್ನು ಬಿಟ್ಟರೆ ಯಾವುದಕ್ಕೂ ಹೊರಚಿಪ್ಪು ಇಲ್ಲ. ನಾವಿಗಾಮಿಯಲ್ಲಿ ಸುರುಳಿ ಸುತ್ತಿದ ಸುಂದರವಾದ ಹೊರಚಿಪ್ಪಿದೆ. ಇದರ ಮುಖ್ಯ ಉಪಯೋಗ ಶತ್ರುಗಳಿಂದ ರಕ್ಷಿಸಿಕೊಳ್ಳುವುದು. ಆದರೆ ಹೆಣ್ಣು ಕಾಗದದ ನಾವಿಗಾಮಿ (Paper Nautilus) ತನ್ನ ಮೊಟ್ಟೆಗಳಿಗೆ ತೊಟ್ಟಿಲಾಗಿ ಉಪಯೋಗಿಸುತ್ತದೆ. ಮಿಕ್ಕ ಶಿರಪಾದಿಗಳಲ್ಲಿ ಚಿಪ್ಪು ಹಗುರಾಗಿ ದೇಹದ ಒಳಗಿದೆ. ಇದನ್ನೇ ನಾವು 'ಸಾಗರದ ನೊರೆ' ಎಂದು ಗಾಜನ್ನುಜ್ಜಲು ಉಪಯೋಗಿಸುವುದು. ಇದು ಹಗುರಾಗಿರುವುದರಿಂದ ನೀರಿನಲ್ಲಿ ಪ್ರಾಣಿಗಳು ತೇಲಲು ಅನುಕೂಲವಾಗಿವೆ. ನಾವಿಗಾಮಿಯಲ್ಲಿ ಹತ್ತು ಕರಗಳಿವೆ. ಉಳಿದ ಶಿರಪಾದಿಗಳೆಲ್ಲ ಅಷ್ಟಪಾದಿಗಳು.

ಅಕಶೇರುಕಗಳಲ್ಲೆಲ್ಲ ಅತಿ ದೊಡ್ಡ ಪ್ರಾಣಿಗಳೆಂದರೆ ದೊಡ್ಡ ಶಿರಪಾದಿಗಳು. ರಾಕ್ಷಸಸ್ವರೂಪದ ಈ ಅಷ್ಟಪಾದಿಗಳು ಮೂವತ್ತರಿಂದ ಐವತ್ತು ಅಡಿಗಳಷ್ಟು ದೊಡ್ಡವಿರುತ್ತವೆ. ಇವು ಹೆಚ್ಚು ಬುದ್ಧಿಶಾಲಿಗಳೂ ಹೌದು. ಕಶೇರುಕಗಳಲ್ಲಿರುವಂತೆಯೇ ಇವುಗಳಲ್ಲಿಯೂ ಚೆನ್ನಾಗಿ ಬೆಳೆದ ಒಂದು ಜೊತೆ ದೊಡ್ಡ ಕಣ್ಣುಗಳಿವೆ.

ಮರಿಗಳ ಬೆಳವಣಿಗೆಯಲ್ಲಿ ಹೆಚ್ಚು ಕಡಿಮೆ, ಹುಳುಗಳು ಮತ್ತು ಮೃದ್ವಂಗಿಗಳೆರಡರಲ್ಲಿಯೂ ಒಂದೇ ವಿಶೇಷ ಗುಣಗಳು ಕಾಣಬರುವುದರಿಂದ ಮೃದ್ವಂಗಿಗಳೂ ಸಹ ಹುಳುಗಳು ಹುಟ್ಟಿದ ಕವಲಿನಿಂದಲೇ ಹುಟ್ಟಿರಬೇಕೆಂದು ಜೀವಶಾಸ್ತ್ರಜ್ಞರು ಅಭಿಪ್ರಾಯಪಟ್ಟಿದ್ದಾರೆ. ಉಂಗುರುಭಾಗಗಳ ಜೋಡಣೆಯ ದೇಹದ ಹುಳುಗಳಿಂದಲೇ ಸಂಧಿಪದಿಗಳು (ಕೀಲುಕಾಲುಗಳು) ಹುಟ್ಟಿದವೆಂಬುದು ವಾಸ್ತವ.

ಸಂಧಿಪದಿಗಳು ಹೆಸರೇ ಸೂಚಿಸುವಂತೆ ಕೀಲುಕಾಲುಗಳನ್ನು ಹೊಂದಿದ ಪ್ರಾಣಿಗಳು. ಕೀಲು ಹೊರ ಅಸ್ಥಿಪಂಜರವನ್ನು ಹೊಂದಿದ ಪ್ರಾಣಿಗಳೂ ಕೂಡ ಇದೇ ಗುಂಪಿಗೆ ಸೇರುತ್ತವೆ. ಈ ಪ್ರಾಣಿಗಳ ಹೊರ ಅಸ್ಥಿಪಂಜರವನ್ನು ಹಿಂದಿನ ಯೋಧರ ರಕ್ಷಾಕವಚಗಳಿಗೆ ಹೋಲಿಸಬಹುದು. ಈ ವಂಶಕ್ಕೆ ಏಡಿಗಳು, ನಳ್ಳಿಗಳು, ಸೀಗಡಿಗಳು, ಶತಪಾದಿಗಳು, ಸಹಸ್ರಪಾದಿಗಳು, ಕೀಟಕಗಳು, ಚೇಳುಗಳು, ಜೇಡರ ಹುಳುಗಳು, ಹುಳುವಿನಂತಿರುವ ಪೆರಿಪೇಟಸ್ (Peripatus) ಇತ್ಯಾದಿ ಪ್ರಾಣಿಗಳು ಸೇರುತ್ತವೆ.

ಈ ಪ್ರಾಣಿಗಳಲ್ಲೆಲ್ಲಾ ದೇಹದ ರಚನೆ ನೋಡುವವರಿಗೆ ಬೇರೆಬೇರೆಯಾಗಿ ಕಂಡರೂ ರಚನಾಕ್ರಮ ಮಾತ್ರ ಒಂದೇ. ದೇಹವು ರಕ್ಷಾಕವಚಗಳನ್ನು ಹೊದಿಸಿದ

ಭಾಗಗಳ ಸರಪಳಿಯಂತಿದೆ. ಈ ಒಂದೊಂದು ಭಾಗವೂ ತನ್ನ ಹಿಂದಿನ ಭಾಗಗಳಿಗೆ ನಯವಾದ ಚರ್ಮದ ಸುತ್ತಿನಿಂದ ಜೋಡಿಸಲ್ಪಟ್ಟಿದೆ. ಒಂದೊಂದು ಉಂಗುರ ಭಾಗವೂ ಒಂದೊಂದು ಜೊತೆ ಉಪಾಂಗಗಳನ್ನು ಹೊಂದಿದೆ. ಈಗ ಸಿಕ್ಕಿರುವ ತ್ರಿಭಾಗಿ (Trilobite) ಪ್ರಾಣಿಗಳ ಅವಶೇಷಗಳ ಸಹಾಯದಿಂದ ಹುಳುಗಳಿಗೂ ಸಂಧಿಪದಿಗಳಿಗೂ ಸಂಬಂಧವನ್ನು ಕಲ್ಪಿಸಬಹುದಾಗಿದೆ. ಮೊಟ್ಟಮೊದಲು ಕಾಣಿಸಿ ಕೊಂಡ ಸಂಧಿಪದಿಯೆಂದರೆ ತ್ರಿಭಾಗಿಗಳೇ. ಪೆರಿಪೇಟಸ್ ಕೂಡ ಪುರಾತನ ಸಂಧಿಪದಿ. ಇಂದು ಈ ಪುರಾತನ ಸಂಧಿಪದಿಯಾದ ಪೆರಿಪೇಟಸ್ ಪ್ರಪಂಚದಿಂದ ಮರೆಯಾಗುವ ಸ್ಥಿತಿಯಲ್ಲಿದೆ. ಇದನ್ನು ಜೀವಂತಶವ (Living Fossil) ಎಂದೆನ್ನಬಹುದು. ಈ ಪ್ರಾಣಿ ಸುಲಭದಲ್ಲಿ ರಚಿತವಾದ ಉಂಗುರಭಾಗದ ದೇಹದ ಪ್ರಾಣಿಗಳಿಗೂ, ಹೆಚ್ಚು ರೂಪಾಂತರಹೊಂದಿದ ಕೀಟಕಗಳ ಗುಂಪಿಗೂ ನಡುವೆ ವಿಕಾಸದ ಸರಪಳಿಯ ಕೊಂಡಿಯಂತಿದೆ. ಶತಪಾದಿಗಳೂ, ಸಹಸ್ರಪಾದಿಗಳೂ ತಮ್ಮ ದೇಹದ ರಚನೆಯಲ್ಲಿ ಬಹಳ ಹಿಂದುಳಿದು ಮೊದಲ ಮೂಲಮಟ್ಟದಲ್ಲಿಯೇ ಉಳಿದಿವೆ. ಸರಪಳಿಯಂತಿರುವ ದೇಹ, ಹೊರಗಿನ ರಕ್ಷಾ ಕವಚ, ಹಾಗೂ ಉಪಾಂಗಗಳಿದ್ದರೂ ಅನೇಕ ಸಂಧಿಪದಿಗಳು ತಮ್ಮ ಮೂಲರಚನೆಯಿಂದ ತುಂಬಾ ಬದಲಾಗಿ ಹೋಗಿವೆ. ಉಪಾಂಗಗಳಂತೂ ಆಕಾರ ಮತ್ತು ರಚನೆಯಲ್ಲಿ ತುಂಬಾ ಬದಲಾಗಿವೆ. ಕೆಲಜೀವಿಗಳಲ್ಲಿ, ಕೆಲವು ಉಂಗುರ ಭಾಗಗಳು ಕೂಡಿಹೋಗಿವೆ. ಇನ್ನು ಕೆಲಜೀವಿಗಳಲ್ಲಿ ಒಂದೊಂದು ಉಂಗುರಭಾಗಕ್ಕೂ ಇರಬೇಕಾದ ಉಪಾಂಗಗಳು ಕಳೆದುಹೋಗಿವೆ. ಜೊಂತೆ ಹುಳು (Neries) ವಿನಲ್ಲಿ ಬಿರುಗೂದಲಿನ ಚಲನಾಂಗಗಳೇ ಇಂದಿನ ಸಂಧಿಪದಿಗಳ ಉಪಾಂಗಗಳಾಗಿರಬಹು ದೆಂದು ಊಹಿಸಲಾಗಿದೆ. ಈ ಉಪಾಂಗಗಳೇ, ನಡೆಯಲು ಅನುಕೂಲವಾದ ಕೀಲು ಕಾಲುಗಳಾಗಿ, ಈಜಲು ಸಹಕಾರಿಯಾದ ಹುಟ್ಟುಗಳಾಗಿ, ದಾರಿಯನ್ನು ಕಂಡುಹಿಡಿ ಯುವ ಕುಡಿಮೀಸೆಗಳಾಗಿ (Antenna), ಆಹಾರವನ್ನಗಿಯುವ ದವಡೆಗಳಾಗಿ, ಇವೇ ಮುಂತಾಗಿ ರೂಪಾಂತರಹೊಂದಿವೆ. ಈ ಸಂಧಿಪದಿಗಳಲ್ಲಿ, ದೇಹದ ರಕ್ಷಾ ಕವಚ, ಕೀಲುಕಾಲುಗಳು, ಚುರುಕಾಗಿ ಓಡಿಯಾಡುವುದಕ್ಕೂ, ವಿವಿಧ ಸನ್ನಿವೇಶ ಗಳಿಗೆ ಹೊಂದಿಕೊಳ್ಳುವುದಕ್ಕೂ, ಮಿಕ್ಕೆಲ್ಲ ಅಕಶೇರುಕಗಳಿಗಿಂತಲೂ ಹೆಚ್ಚು ಸಹಕಾರಿ ಯಾಗಿವೆ. ಇದೇ ರಚನೆ ಭೂಮಿಯ ಮೇಲಕ್ಕೆ ವಲಸೆ ಬಂದು ಗಾಳಿಯನ್ನು ಉಸಿ ರಾಡಲೂ ಅನುವಾಯಿತು. ಇಂದಿಗೂ ಭೂಮಿಯ ಮೇಲೆ ವಾಸಿಸುವ ಪ್ರಾಣಿಗಳ ಲ್ಲೆಲ್ಲಾ ಕೀಟಕಗಳ ಸಂಖ್ಯೆಯೇ ಹೆಚ್ಚು. ಈ ಪ್ರಾಣಿಗಳಲ್ಲಿ ಮೆದಳು, ಮೆದಳುಬಳ್ಳಿ ಗಳಿವೆ, ದೇಹದಲ್ಲಿ ಹೃದಯವಿದೆ, ಚೆನ್ನಾಗಿ ಬೆಳೆದಿರುವ ಕಣ್ಣುಗಳಿವೆ. ಕೆಲವು ಕೀಟಕ ಗಳ ಕಣ್ಣುಗಳಂತೂ ಅಕಶೇರುಹಗಳಲ್ಲಿಯೇ ಹೆಚ್ಚು ಸಮರ್ಥವಾಗಿವೆ. ಕೀಟಕಗಳು,

ಶತಪಾದಿಗಳು, ಸಹಸ್ರಪದಿಗಳು, ಝುರಿಗಳು, ಜೇಡಗಳು, ಚೇಳುಗಳು ಇವೆಲ್ಲವೂ ಭೂಮಿಯ ಮೇಲೆ ವಾಸಿಸುತ್ತವೆ. ಗಾಳಿಯನ್ನು ಉಸಿರಾಡುತ್ತವೆ. ಏಡಿಗಳು, ನಳ್ಳಿಗಳು, ನೀರಿನ ಚಿಗಟಗಳು, ಬಾರ್ನಕಲ್ (Barnacle) ಎಂಬ ಪ್ರಾಣಿಗಳು ನೀರಿನಲ್ಲಿ ವಾಸಿಸಿ, ಕಿವಿರುಗಳ ಸಹಾಯದಿಂದ ಉಸಿರಾಡುತ್ತವೆ.

ವಿಶೇಷವಾಗಿ ನೀರಿನಲ್ಲಿ ವಾಸಿಸುವ ಕವಚಾಂಶಿಗಳನ್ನು, ಅವುಗಳಿಗಿರುವ ಸುಣ್ಣದ ಕವಚದಿಂದ ಕವಚಾಂಶಿ (Crustacea) ಗಳೆನ್ನುತ್ತಾರೆ. ಕವಚಾಂಶಿಗಳು ಆಕಾರ ಮತ್ತು ಸಂಖ್ಯೆಯಲ್ಲಿ ಕೀಟಕಗಳನ್ನು ಮೀರಿಸಲಾಗದಿದ್ದರೂ, ಕೀಟಕಗಳು ನೆಲದ ಮೇಲೆ ಹರಡಿರುವಂತೆ ಕವಚಾಂಶಿಗಳು ನೀರಿನಲ್ಲಿ ಹರಡಿವೆ. ನೀರಿದ್ದಲ್ಲೆಲ್ಲಾ ಕವಚಾಂಶಿಗಳನ್ನು ಕಾಣಬಹುದು. ಹಳ್ಳಗಳು ಒಣಗಿದಾಗ ನೀರು ನಿಲ್ಲುವ ಗುಂಡಿಗಳಿಂದ ಮೊದಲ್ಗೊಂಡು, ಕಗ್ಗತ್ತಲೆಯ ಮಯವಾದ ಸಾಗರದ ತಳದಲ್ಲಿಯೂ ಇವನ್ನು ಕಾಣಬಹುದು. ಇವು ನೀರಿನಲ್ಲಿ ಈಜಬಲ್ಲವು. ನೀರುಗಿಡಗಳ ಮೇಲೆ ಓಡಾಡಬಲ್ಲವು, ಬಂಡೆಗಳ ಮೇಲೆ ತೆವಳಬಲ್ಲವು, ತೇಲುಜೀವಿಗಳೊಡನೆ ತೇಲಲೂ ಬಲ್ಲವು. ಗಾತ್ರದಲ್ಲಿ ಸಣ್ಣವೆಂದರೆ ನೀರಿನ ಚಿಗಟ (Water Flea), ಅತಿ ದೊಡ್ಡವೆಂದರೆ ಹನ್ನೊಂದು ಅಡಿ ಉದ್ದದ ಕೊಂಡಿಯ ಚೀನಾದೇಶದ ಜೇಡ ಏಡಿ (Spider Crab) ತೇಲುಜೀವಿಗಳಾದ ಕವಚಾಂಶಿಗಳು ತಿಮಿಂಗಿಲಗಳಿಗೆ ಆಹಾರವಾದುದರಿಂದ ಇವು ಅತಿ ಮುಖ್ಯವಾದವು. ಹಲಕೆಲವು ಸಾರಿ ಕೆಂಪು ಬಣ್ಣದ ಈ ಕವಚಾಂಶಿಗಳು ಒಂದೇ ಕಡೆ ಸೇರಿದಾಗ ಕೆಲವು ಚದುರ ಮೈಲಿಗಳು ಸಾಗರ ಕೆಂಪು ಬಣ್ಣವಾಗಿ ಕಾಣಬರುತ್ತದೆ.

ಪ್ರೌಢಾವಸ್ಥೆಯಲ್ಲಿ ಕವಚಾಂಶಿಗಳನ್ನು ಒಂದಕ್ಕೊಂದನ್ನು ಹೋಲಿಸುವುದು ತುಂಬಾ ಕಷ್ಟ. ಬೆಳೆದ ಮೇಲೆ ಸನ್ನಿವೇಶದ ಪರಿಣಾಮದಿಂದಾಗಿ ಒಂದಕ್ಕೊಂದಕ್ಕೆ ಹೋಲಿಕೆಯೇ ಸಿಕ್ಕುವುದಿಲ್ಲ. ಹೋಲಿಕೆಯನ್ನು ಕಾಣಬೇಕಾದರೆ ಬೆಳವಣಿಗೆಯಲ್ಲಿ ಮಾತ್ರ ಸಾಧ್ಯ. ಸೀಗಡಿಗಳಿಗೆ ಉದ್ದವಾದ ಬಾಲವಿದೆ. ಏಡಿಗಳಿಗೆ ಇಲ್ಲ. ಇದ್ದರೂ ತೀರ ಸಣ್ಣದು. ಈ ಸಣ್ಣ ಬಾಲವನ್ನೇ ದೇಹದ ಕೆಳಗಡೆಗೆ ಮುದುಡಿಕೊಂಡು ಓಡಾಡುತ್ತವೆ. ಆದರೆ ಬೆಳವಣಿಗೆಯಲ್ಲಿ ಏಡಿಯ ಮರಿಗೂ ಉದ್ದವಾದ ಬಾಲವಿರುತ್ತದೆ. ಹೀಗೆ ಹಿಂದಿನ ವಿಭಾಗವಿಜ್ಞಾನಿಗಳು ತಿಳಿಯದೇ ಬಾರ್ನಕಲ್ (Barnacle) ಪ್ರಾಣಿಯನ್ನು ಮೃದ್ವಂಗಿಗಳ ವಂಶಕ್ಕೆ ಸೇರಿಸಿಬಿಟ್ಟಿದ್ದರು. ಇತ್ತೀಚೆಗೆ ಅದರ ಬೆಳವಣಿಗೆಯನ್ನು ಪರಿಶೀಲಿಸಿದ ಬಳಿಕ ಅದನ್ನು ಕವಚಾಂಶಿಗಳ ಗುಂಪಿಗೆ ಸೇರಿಸಲಾಯ್ತು. ಅದರ ಮರಿಯೂ ಮಿಕ್ಕ ಕವಚಾಂಶಿಗಳಂತೆ ಈಜಿ ಸ್ವತಂತ್ರಜೀವನವನ್ನು ನಡೆಸುತ್ತದೆ. ಆದರೆ ಪ್ರೌಢಾವಸ್ಥೆ ಪ್ರಾಪ್ತವಾಗುತ್ತಲೇ, ಬಂಡೆಗಳಿಗೋ, ಹಡಗುಗಳ ತಳಕ್ಕೋ ತಲೆಯ ಸಹಾಯದಿಂದ ಅಂಟಿಕೊಂಡುಬಿಡುತ್ತದೆ. ಮರಿಯಲ್ಲಿ ಹುಟ್ಟು

ಗಳಂತೆ ಈಜಲು ಸಹಕಾರಿಯಾಗಿದ್ದ ಕಾಲುಗಳು ಪ್ರೌಢಾವಸ್ಥೆಯಲ್ಲಿ ಬಲೆಯಂತೆ ಕವಲೊಡೆದು ನೀರಿನಲ್ಲಿ ಆಹಾರವನ್ನು ಹಿಡಿಯಲು ಸಹಾಯವಾಗುತ್ತವೆ.

ಅಪರೂಪವಾಗಿ ಕೆಲವು ಕವಚಾಂಶಿಗಳು ಸಿಹಿನೀರಿನಲ್ಲಿ ವಾಸಿಸಿದರೂ ಬಹಳವಾಗಿ ಕವಚಾಂಶಿಗಳು ಸಾಗರವಾಸಿಗಳು. ಕೆಲವು ನೆಲದಮೇಲೆ ವಾಸಿಸಿ, ಗಾಳಿಯನ್ನೇ ಉಸಿರಾಡುತ್ತವೆ. ಗಿಡದ ತಿಗಣೆ (Wood Lice), ಕೊಂಡಿತಿಗಣೆ (Pill Bugs) ಗಳು ನೆಲದ ಮೇಲಿನ ಜೀವನಕ್ಕೆ ಚೆನ್ನಾಗಿಯೇ ಹೊಂದಿಕೊಂಡಿವೆ. ನೆಲದ ಮೇಲಿನ ಯತಿಏಡಿ (Hermit Crabs) ಗಳು ನೀರಿನಿಂದ ಬಹಳ ದೂರದಲ್ಲಿ ವಾಸಿಸುತ್ತವೆ. ಮೊಟ್ಟೆಯಿಡುವ ಕಾಲಕ್ಕೆ ಮಾತ್ರ ನೀರಿಗೆ ಹಿಂದಿರುಗಿ ಬರುತ್ತವೆ. ಕಳ್ಳನಳ್ಳಿ (Robber Crab) ಅಥವಾ ತೆಂಗಿನಗಿಡದ ಏಡಿ (Coconut Crab) ಗಳು ದೊಡ್ಡದೊಡ್ಡ ತೆಂಗಿನ ಮರಗಳನ್ನು ಹತ್ತುತ್ತವೆ. ತೆಂಗಿನಕಾಯಿಗಳನ್ನು ಬಲವಾದ ತಮ್ಮ ಕೊಂಡಿಗಳ ಸಹಾಯದಿಂದ ಕಣ್ಣುಗಳಿಗೆ ಹೊಡೆದು ಕಳಚಿ ತಿನ್ನುತ್ತವೆ. ಇವೂ ಕೂಡ ನೆಲದಮೇಲಿನ ಯತಿ ಏಡಿಗಳಂತೆ ಸಾಗರದಲ್ಲಿ ಜೀವನವನ್ನು ಆರಂಭಿಸಿ, ನೆಲದ ಮೇಲಕ್ಕೆ ವಲಸೆಬಂದು, ಪುನಃ ಮೊಟ್ಟೆಯಿಡುವ ಕಾಲಕ್ಕೆ ನೀರಿಗೆ ಹಿಂದಿರುಗುತ್ತವೆ. ಯತಿನಳ್ಳಿಗಳು ವಿಶೇಷವಾಗಿ ನೀರಿನಲ್ಲಿ ವಾಸಿಸುವ ಪ್ರಾಣಿಗಳು. ಇವುಗಳ ದೇಹ ಹೊರ ಅಸ್ಥಿಪಂಜರವಿಲ್ಲದೆ ತುಂಬಾ ಮೃದುವಾಗಿರುತ್ತದೆ. ಈ ದೇಹವನ್ನು ಜಠರ ಪಾದಿಗಳ ಖಾಲಿ ಚಿಪ್ಪಿನೊಳಗಿಟ್ಟುಕೊಂಡು ರಕ್ಷಿಸಿಕೊಳ್ಳುತ್ತವೆ. ಈ ಚಿಪ್ಪನ್ನು ತನ್ನ ಕೊನೆಯ ಎರಡು ಜೊತೆ ಕಾಲುಗಳಿಂದ ಒಳಗಡೆ ಭದ್ರವಾಗಿ ಹಿಡಿದುಕೊಂಡು ನಡೆದಲ್ಲೆ ಗೆಲ್ಲ ಚಿಪ್ಪನ್ನು ಹೊತ್ತುಕೊಂಡು ಚಲಿಸುತ್ತವೆ. ಕಳ್ಳನಳ್ಳಿಯೂ ಯತಿಏಡಿಯೇ. ಆದರೆ ಈ ಕಳ್ಳನಳ್ಳಿ ಯತಿಏಡಿಗಳಂತೆ ಬೇರೆ ಪ್ರಾಣಿಗಳ ಚಿಪ್ಪನ್ನು ಉಪಯೋಗಿಸು ವುದರ ಬದಲು ದೇಹವನ್ನು ಚಿಪ್ಪಿನ ತಟ್ಟೆಗಳಿಂದ ರಕ್ಷಿಸಿಕೊಳ್ಳುತ್ತದೆ.

ಕೆಲವು ಏಡಿಗಳು ತಮ್ಮನ್ನು ಶತ್ರುಗಳಿಂದ ರಕ್ಷಿಸಿಕೊಳ್ಳಲು ತಮ್ಮ ದೇಹದ ಮೇಲೆ ವಿಷಪೂರಿತವಾದ ಜೀವಂತ ಪ್ರಾಣಿಗಳನ್ನೋ, ಸಸ್ಯಗಳನ್ನೋ, ಸನ್ನಿವೇಶಕ್ಕನುಸು ಗುಣವಾಗಿ ಬೆಳಸಿಕೊಳ್ಳುತ್ತವೆ. ಕೆಲವು ಏಡಿಗಳು ತಮ್ಮ ಪುಟ್ಟ ಕೊಂಡಿಗಳಲ್ಲಿ ಕುಟುಕು ಕಣಗಳಿರುವ ಸಾಗರದ ಕುಸುಮಗಳನ್ನು ಹಿಡಿದಿರುತ್ತವೆ. ಈ ಸಾಗರದ ಕುಸುಮ ಏಡಿಯು ತಿನ್ನುವಾಗ ಬಿಟ್ಟ ತಿಗುಡಿನ ಚೂರುಗಳನ್ನೇ ಆಹಾರವಾಗಿ ಉಪಯೋಗಿ ಸುತ್ತದೆ. ಸ್ಪಂಜು ಏಡಿ (Sponge Crab) ಗಳು ತಮ್ಮ ಹಿಂಗಾಲುಗಳಿಂದ ಸ್ಪಂಜು ಗಳನ್ನು ಹಿಡಿದುಕೊಂಡು, ತಮ್ಮ ದೇಹವು ಶತ್ರುಗಳಿಗೆ ಕಾಣಿಸದಂತೆ ಮರೆಮಾಡಿ ಕೊಳ್ಳುತ್ತವೆ. ಜೇಡ ಏಡಿ (Spider Crab) ತನ್ನ ಬೆನ್ನ ಮೇಲೆ ಸಸ್ಯಗಳನ್ನೋ, ಸ್ಪಂಜುಗಳನ್ನೋ ನಾಟಿಹಾಕಿ ಬೆಳೆಸಿ ತನ್ನ ದೇಹವನ್ನು ಮರೆಮಾಚಿಕೊಳ್ಳುತ್ತದೆ. ಈ

ಏಡಿ ಹಳೆಯ ಸ್ಥಳದಿಂದ ಹೊಸ ಸ್ಥಳಕ್ಕೆ ಬಂದರೆ ಅಲ್ಲಿ ಸಾಮಾನ್ಯವಾಗಿ ಬೆಳೆಯುವ ಸಸ್ಯಗಳು ಬೇರೆಯಾದರೆ, ಹಳೆಯವನ್ನು ಕಿತ್ತು ಅಲ್ಲಿರುವ ಹೊಸ ಗಿಡಗಳನ್ನು ಬೆಳೆಸಿಕೊಳ್ಳುತ್ತದೆ. ಸನ್ನಿವೇಶಕ್ಕೆ ತಕ್ಕ ಬಣ್ಣವನ್ನು ಬದಲಾಯಿಸಿಕೊಳ್ಳಬಲ್ಲ ಶಕ್ತಿ ಈಸೋಪನ ಸೀಗಡಿ (Aesop Prawn) ಗಿದೆ. ಒಂದು ಬಣ್ಣದಿಂದ ಮತ್ತೊಂದಕ್ಕೆ ಬದಲಾಗಲು ಎರಡುಮೂರು ದಿನಗಳು ಹಿಡಿಯುತ್ತದೆ. ತನ್ನ ಸುತ್ತ ಕವಲೊಡೆದ ಜೊಂಡುಗಿಡಗಳಿದ್ದರೆ, ಅದಕ್ಕನುಗುಣವಾಗಿ ತನ್ನ ದೇಹವನ್ನು ಬಣ್ಣಬಣ್ಣದ ಗೆರೆಗಳಿಂದ ಅಲಂಕರಿಸುತ್ತದೆ. ರಾತ್ರಿಯ ಹೊತ್ತು ಮಾತ್ರ ನೀರಿನಂತೆ ನೀಲಿಯಾಗಿ ಕಾಣುತ್ತದೆ.

ಸೀಗಡಿಗಳು (Prawns), ಶ್ರಿಂಪಗಳು (Shrimps), ಸಾಗರದ ನಳ್ಳಿಗಳು (Lobsters) ಕೊಂಡಿಮೀನುಗಳು (Cray Fishes) ಉದ್ದನೆಯ ಬಾಲದ ಕವಚಾಂಶಿಗಳ ಗುಂಪಿಗೆ ಸೇರುತ್ತವೆ. ಇವು ಬಾಲದ ತುದಿಯನ್ನು ಆಗಾಗ ಮಿಡಿಕಿಸುವುದರಿಂದ ರಭಸದಿಂದ ಈಜುತ್ತವೆ. ಸಾಗರದ ನಳ್ಳಿಗಳು ಸಾಗರದ ತಳದಲ್ಲಿ ವಾಸಿಸುತ್ತವೆ. ಸಾಗರದ ಕೆಲವು ಜೀವಿಗಳಂತೆ ಕೆಲವು ಕವಚಾಂಶಿಗಳೂ ಕೂಡ ಸ್ವಯಂಪ್ರಕಾಶಿಗಳು. ಈ ಸ್ವಯಂಪ್ರಕಾಶಿ ಕವಚಾಂಶಿಗಳು ಹಗಲಿನ ಹೊಂಬೆಳಕು ಮುಟ್ಟದ ಸಾಗರದ ಆಳದಲ್ಲಿ ವಾಸಿಸುತ್ತವೆ. ಕೆಲವು ಪ್ರಾಣಿಗಳ ಇಡೀ ದೇಹವೇ ಮಿಣುಕುತ್ತಿರುತ್ತದೆ. ಮಿಣುಕುವ ಸ್ಥಳಗಳಲ್ಲಿ ಬಣ್ಣಗಳಿರುವುದುಂಟು. ಈ ರೀತಿಯ ಮಿಣುಕುಬೆಳಕು, ವಿವಿಧವರ್ಣ, ಆಕಾರಗಳಲ್ಲಿದ್ದು, ಆಹಾರಜೀವಿಗಳನ್ನು ಆಕರ್ಷಿಸಲು ಅನುಕೂಲವಾಗುತ್ತದೆ. ಈ ತರಹೆಯ ಮಿಣುಕು ಬೆಳಕಿನನಮೂನೆಗಳು ಆ ಆಳದಲ್ಲಿ ಶತ್ರುಗಳನ್ನೂ, ಮಿತ್ರರನ್ನೂ ಕಂಡುಹಿಡಿಯುವುದಕ್ಕೂ ಸಹಾಯವಾಗುತ್ತದೆ.

ಅಕಶೇರುಹಗಳಲ್ಲಿ ಹೆಚ್ಚು ಮುಂದುವರಿದ ಪ್ರಾಣಿಗಳೆಂದರೆ ಸಂಧಿಪದಿಗಳು. ಇವು ತಮ್ಮದೇ ಆದ ಒಂದು ಬೇರೆ ಹಾದಿಯನ್ನು ಹಿಡಿದು, ವಿಕಾಸದಲ್ಲಿ ನಾನಾ ರೀತಿಯಾಗಿ ರೂಪಗೊಂಡು ನಡೆದಿವೆ. ಆದರೆ ಬೆನ್ನೆಲುಬನ್ನು ಹೊಂದಿದ ಪ್ರಾಣಿಗಳು ವಿಕಾಸದ ಆದಿಯಲ್ಲಿಯೇ ಬೇರೆಯದೊಂದು ವಿಶಿಷ್ಟವಾದ ಹಾದಿಯನ್ನು ಹಿಡಿದುದರಿಂದ, ವಿಕಾಸದಲ್ಲಿ ಬಹಳದೂರ—ಮಿಕ್ಕೆಲ್ಲಕ್ಕಿಂತಲೂ ಬಲುಮುಂದೆ—ಸಾಗಿವೆ.

ಕಶೇರುಹಗಳಲ್ಲಿ ತೀರಾ ಹಿಂದುಳಿದ ಪ್ರಾಣಿಗಳೆಂದರೆ ಮೀನುಗಳು, ಹಾಗೆಯೇ ತೀರಾ ಮುಂದುವರಿದಿರುವವು ಸಸ್ತನಿಗಳು. ಹಿಂದುಳಿದ ಈ ಮೀನುಗಳಿಗೂ, ಅಕಶೇರುಹಗಳಿಗೂ ನಡುವೆ ಮಹದಂತರವಿದೆ. ಈ ಅಂತರದಲ್ಲಿ ಅವತರಿಸಿದ ಪ್ರಾಣಿಗಳ ಸಂಖ್ಯೆ ಬಹಳವಿರಬೇಕು! ಈ ಅಂತರ ಜೀವವಿಕಾಸದ ಹಾದಿಯಲ್ಲಿ ದಾಟಬೇಕಾದ ದೊಡ್ಡ ಹಳ್ಳ. ಅಳಿದುಳಿದ ಕೆಲವು ಪ್ರಾಣಿಗಳ ಸಹಾಯದಿಂದ ಈ ಹಳ್ಳಕ್ಕೆ ಸೇತುವೆಯನ್ನು ಕಟ್ಟಲು ಪ್ರಯತ್ನಗಳು ನಡೆದಿವೆ. ಈ ಸೇತುವೆಯ ಅಸ್ತಿಭಾರಕ್ಕೆ ಸಿಕ್ಕಿರುವ

ವಸ್ತು ತೀರಾ ಕಡಿಮೆ. ಈ ಪ್ರಾಣಿಗಳನ್ನೇ ನಾವು ಆದಿಕಶೇರುಹಗಳು (Proto-chordates) ಎಂದೆನ್ನುತ್ತೇವೆ.

ಕಶೇರುಹಗಳ ಮುಖ್ಯವಾದ ಅಂಗ, ಬಾಗಬಲ್ಲ ಕೀಲು ಬೆನ್ನುಮೂಳೆ. ಆದರೆ ಆದಿ ಕಶೇರುಹಗಳಲ್ಲಿ ಈ ಕೀಲಿನ ಬೆನ್ನುಮೂಳೆಯ ಬದಲು, ತಲೆಯಿಂದ ಬಾಲದ ವರೆಗೂ ಹರಡಿದ ಗಟ್ಟಿಯಾದರೂ ಬಾಗುವ ಕಡ್ಡಿಯಂತಹ ನೋಟೋಕಾರ್ಡ್ (Notochord) ಇದೆ. ಈ ನೋಟೋಕಾರ್ಡನ್ನು ಇಂದಿಗೂ ಕಶೇರುಹಗಳ ಮರಿಗಳಲ್ಲಿ ಕಾಣಬಹುದು. ಬೆಳವಣಿಗೆಯ ಅಂತ್ಯ ಅವಸ್ಥೆಗಳಲ್ಲಿ ಈ ನೋಟೋಕಾರ್ಡನ ಜಾಗವನ್ನು ಬೆನ್ನಮೂಳೆ ಆಕ್ರಮಿಸುತ್ತದೆ.

ಆದಿಕಶೇರುಹಗಳಲ್ಲೊಂದಾದ ಬೆಲೆನೋಗ್ಲಾಸಸ್ (Balanoglossus) ಪ್ರಾಣಿ ಹುಳುವಿನಂತಿದೆ. ಇದರಲ್ಲಿ ನೋಟೋರ್ಡ್ ತಲೆಯ ತುದಿಯಲ್ಲಿ ಒಂದು ಚೂರಿನಂತಿದೆ. ಸಾಗರದ ಜೀಕಳಿ (Sea Squirt) ಮತ್ತೊಂದು ಆದಿಕಶೇರುಹ. ಇದರ ದೇಹ ಜೊಲ್ಲಿನಂತಿದೆ. ಪ್ರೌಢಾವಸ್ಥೆಯನ್ನೆಲ್ಲ ಪೂರ್ತಿಯಾಗಿ ಕಲ್ಲುಬಂಡೆಗಳಿಗೆ ಅಂಟಿಕೊಂಡು ಕಳೆಯುತ್ತದೆ. ಮರಿಗಳು ಮಾತ್ರ ಗೊದಮುಗಳಂತೆ ಚುರುಕಾಗಿ ಓಡಾಡಬಲ್ಲವು. ಇದಕ್ಕೆ ಚೆನ್ನಾಗಿ ರೂಪಿತವಾದ ನರಾಂಗಗಳೂ, ಇಂದ್ರಿಯಾಂಗಗಳೂ, ಹೃದಯ, ಬಲವಾದ ಬಾಲ ಮತ್ತು ಮುಖ್ಯವಾಗಿ ನೋಟೊಕಾರ್ಡ್ ಇವೆ. ಈ ಮರಿಯು ಕಪ್ಪೆಯ ಗೊದಮದಂತೆಯೇ ಇರುತ್ತದೆ. ಕಾಣದವರು ಈ ಗೊದಮ ಬೆಳೆದು ಕಪ್ಪೆಯಾಗಬಹುದೆಂದು ನಿರೀಕ್ಷಣೆಯಲ್ಲಿದ್ದರೆ, ಆಶೆ ನಿರಾಶೆಯಾದೀತು. ಏಕೆಂದರೆ ಇದು ಹೋಗಿ ಗಿಡಗಳಿಗೋ, ಬಂಡೆಗಳಿಗೋ ತಲೆಯ ಸಹಾಯದಿಂದ ಅಂಟಿಕೊಂಡುಬಿಡುತ್ತದೆ. ಮರಿಯಲ್ಲಿದ್ದ ಬಾಲ, ನರಾಂಗಗಳು, ಮೆದುಳು, ಇಂದ್ರಿಯಾಂಗಗಳು ನೋಟೋಕಾರ್ಡ್ ಎಲ್ಲವೂ ಲೀನವಾಗಿ ಹೋಗುತ್ತವೆ. ಹಿಂದಿದ್ದ ನರಾಂಗಗಳ ಗುರುತಾಗಿ ಕೆಲವು ನರಕಣಗಳ ಸಮೂಹ ಉಳಿಯುತ್ತದೆ. ಪ್ರೌಢಾವಸ್ಥೆಯಲ್ಲಿ ಪ್ರಾಣಿ ಎರಡು ಬಾಯಿಯ ಶೀಷೆಯಂತೆ ಕಾಣುತ್ತದೆ. ಒಂದು ಬಾಯಿಯಿಂದ ನೀರನ್ನು ಒಳಕ್ಕೆ ತೆಗೆದುಕೊಳ್ಳುತ್ತದೆ. ಅದರಲ್ಲಿರುವ ಆಹಾರವನ್ನು ಶೋಧಿಸಿಕೊಂಡು, ನೀರಿನಲ್ಲಿರುವ ಆಮ್ಲಜನಕವನ್ನು ಹೀರಿ ಮತ್ತೊಂದು ಬಾಯಿಯ ಮುಖಾಂತರ ಹೊರಕ್ಕೆ ತಳ್ಳುತ್ತದೆ. ಇದರಿಂದಲೇ ಇದನ್ನು ಜೀಕಳಿ ಎಂದು ಕರೆಯುವುದು. ಜೀವನದ ಆದಿಯಲ್ಲಿ ಆದಿಕಶೇರುಹವಾಗಿದ್ದ ಈ ಪ್ರಾಣಿಯನ್ನು, ಪ್ರೌಢಾವಸ್ಥೆಯಲ್ಲಿ ಆದಿಕಶೇರುಹವೆಂದು ಗುರುತು ಹಿಡಿಯುವುದು ಕಷ್ಟ.

ಲ್ಯಾನ್ಸಲೆಟ್ (Lancet) ಗಳು ಬೆಲೆನೋಗ್ಲಾಸಸ್, ಸಾಗರದ ಜೀಕಳಿಗಿಂತಲೂ ಕಶೇರುಹಗಳಿಗೆ ತೀರಾ ಹತ್ತಿರದ ಬಂಧುಗಳು. ಸುಮಾರು ಎರಡು ಅಂಗುಲ ಉದ್ದ

ವಿರುತ್ತದೆ. ದೇಹ ಗಾಜಿನಂತೆ ಸ್ವಚ್ಛವಾಗಿದೆ. ಸಲಾಕೆಯಂತೆ ಬಾಲ ತಲೆಗಳೆರಡೂ ಚೂಪಾಗಿವೆ. ಇವೂ ಕೂಡ ಮರಿಯಾಗಿದ್ದಾಗ ಬಹಳ ಚುರುಕಾಗಿ ಈಜಾಡ ಬಲ್ಲವು. ಆದರೆ ಪ್ರೌಢಪ್ರಾಣಿಗಳು ತುಂಬಾ ಸೋಮಾರಿಗಳು. ಮರಳಿನಲ್ಲಿ ಮುದುಡಿ ಕೊಂಡು ಬಿದ್ದಿರುತ್ತವೆ. ಮರಳಿನಿಂದ ಹೊರಗೆ ತಲೆ ಮಾತ್ರ ಕಾಣುತ್ತಿರುತ್ತದೆ. ಇವುಗಳ ರಚನೆ ಕಶೇರುಹಗಳಂತಿದೆ. ಇದರಲ್ಲಿ ನೋಟೋಕಾರ್ಡ್ ತಲೆಯಿಂದ ಬಾಲದವರೆಗೂ ಹರಡಿದೆ. ಕಶೇರುಹಗಳಲ್ಲಿರುವಂತೆ ತಲೆಬುರುಡೆ ಮಾತ್ರ ಇಲ್ಲ.

ಲಾಂಪ್ರೈಸ್ (Lampreys) ಮತ್ತು ಹಾಗ್ ಮೀನುಗಳ (Hag Fishes)ಲ್ಲಿ ತಲೆ ಬುರುಡೆಯ ಬದಲು ಕೋಮಲಾಸ್ಥಿ (Cartilage) ಕಡ್ಡಿಗಳಿಂದಾದ ಬಲೆಯಂತಹ ಪೆಟ್ಟಿಗೆಯಿದೆ. ಈ ಪೆಟ್ಟಿಗೆ ಕಶೇರುಹಗಳಲ್ಲಿ ಮುಂದೆ ಉದ್ಭವಿಸಬಹುದಾದ ತಲೆಬುರುಡೆಯ ಭವಿಷ್ಯವನ್ನು ನುಡಿದಿದೆ. ನೋಟೋಕಾರ್ಡ್‌ನ ಮೇಲೆ ಪದರ ಒಂದು ಬೆಳೆದು, ಇದೇ ನೋಟೋಕಾರ್ಡ್ ಮುಂದೆ ಬೆನ್ನುಹುರಿ (Vertebral Collumn) ಯಾಗಲಿದೆ ಯೆಂದು ಮುನ್ಸೂಚನೆಯನ್ನಿತ್ತಿದೆ. ಇವುಗಳಲ್ಲಿ ದವಡೆ, ಹಲ್ಲು, ಈಜು ರೆಕ್ಕೆಗಳಿಲ್ಲ ದಿರುವುದರಿಂದ ಇವುಗಳನ್ನು ನಿಜವಾದ ಮೀನುಗಳ ಗುಂಪಿಗೆ ಸೇರಿಸಲಾಗುವುದಿಲ್ಲ. ಇವುಗಳ ಬಾಯಿ ದುಂಡಗೆ ಹೀರುಬಟ್ಟಲಿನಂತಿದೆ. ಹೀಗೆ ತಲೆಯ ಕೋಮಲಾಸ್ಥಿಯ ಪೆಟ್ಟಿಗೆ, ಪದರ ಹೊಚ್ಚಿದ ನೋಟೋಕಾರ್ಡ್ ಮಟ್ಟದಿಂದ ವಿಕಾಸದಲ್ಲಿ ಒಂದು ಹೆಜ್ಜೆ ಮುಂದೆ ಹೋದರೆ ಸಾಕು ಬೆನ್ನುಹುರಿ, ಸರಿಯಾಗಿಯೇ ರೂಪಿತವಾದ ತಲೆಬುರುಡೆ ಗಳು ಕಾಣಬರುತ್ತವೆ.

ಇಂದಿಗೂ ಬದುಕಿರುವ ನಾಯಿಮೀನು (Dog Fish) ಗಳು, ಸೊರಮೀನು (Shark) ಗಳು, ಕೈಮೀರಾ (Chimera) ಗಳು, ರಶ್ಮಿಮೀನು (Ray Fish) ಗಳಲ್ಲಿಯೂ ಅಸ್ಥಿಪಂಜರ ಕೋಮಲಾಸ್ಥಿಮಟ್ಟದಲ್ಲಿಯೇ ಉಳಿದಿದೆ. ಆದರೆ ಲ್ಯಾಂಪ್ರೈಸ್, ಹಾಗ್ ಮೀನುಗಳಿಗಿಂತಲೂ ಮುಂದುವರಿದ, ನಿಜವಾದ ಮೀನುಗಳ ಮುಖ್ಯಗುಣಗಳಾದ ದವಡೆ, ಹಲ್ಲುಗಳು, ಚರ್ಮದ ಮೇಲೆ ಹೊದಿಸಿರುವ ಹಲ್ಲುಗ ಳಂತಿರುವ ಹುರುಗೆ (Scale) ಗಳೂ ಇವುಗಳಲ್ಲಿ ಬೆಳೆದಿವೆ. ಬಾಯಿಯ ಅಂಚಿನಲ್ಲಿ ಚರ್ಮದಲ್ಲಿ ಹುದುಗಿರುವ ಈ ಹುರುಪೆಗಳೇ, ಕಶೇರುಹಗಳಲ್ಲಿ ಬಾಯಿಯ ಒಳ ಹೊಕ್ಕು ಹಲ್ಲುಗಳಾಗಿರಬಹುದೆಂದು ಊಹಿಸಲಾಗಿದೆ. ಊಹೆಗೂ ಕಾರಣವಿದೆ. ಈ ಹುರಪೆಗಳ, ಮತ್ತು ಹಲ್ಲುಗಳ ರಚನೆ ಹೆಚ್ಚುಕಡಿಮೆ ಒಂದೇ ಇದೆ. ಇವನ್ನು ಕೋಮಲಾಸ್ಥಿ ಮೀನುಗಳು (Cartilaginous Fishes) ಎಂದು ಕರೆಯುತ್ತೇವೆ. ಇವುಗಳಲ್ಲಿಯೂ ನಿಜವಾದ ಮೀನುಗಳಲ್ಲಿರಬೇಕಾದ ಎರಡು ಜೊತೆ, ಜೊತೆ ಈಜು ರೆಕ್ಕೆಗಳಿವೆ. ಈ ಜೊತೆ ಈಜುರೆಕ್ಕೆಗಳೇ ಪ್ರಾಣಿಗಳು ನೀರಿನ ವಾಸ ತೊರೆದು

ನೆಲದ ಮೇಲಕ್ಕೆ ವಲಸೆ ಬಂದಾಗ ಕೈಕಾಲುಗಳಾಗಿ ಮಾರ್ಪಟ್ಟವು. ಈ ಕೋಮಲಾಸ್ಥಿಮೀನುಗಳಿಂದ ಮುಂದಿನ ಹೆಜ್ಜೆಯಲ್ಲಿ ಮೀನುಗಳಲ್ಲಿಯೇ ಕೋಮಲಾಸ್ಥಿಗೆ ಬದಲಾಗಿ ಗಟ್ಟಿಯಾದ ಮೂಳೆ ಕಾಣಿಸಿಕೊಳ್ಳುತ್ತದೆ. ಇವುಗಳಲ್ಲಿ ಚೆನ್ನಾಗಿ ಬೆಳೆದು, ಮೆದುಳನ್ನು ರಕ್ಷಿಸಬಲ್ಲ ಗಟ್ಟಿಯಾದ ತಲೆಬುರುಡೆ ಬೆಳೆದಿದೆ. ಇವನ್ನೇ ನಾವು ಮೂಳೆ ಮೀನುಗಳು (Bony Fishes) ಎಂದು ಕರೆಯುತ್ತೇವೆ. ಇಂದು ಜೀವಿಸಿರುವ ಮೀನುಗಳಲ್ಲಿ ಬಹಳವಾಗಿ ಎಲ್ಲವೂ ಈ ಗುಂಪಿಗೆ ಸೇರುತ್ತವೆ.

ನೀರಿನಲ್ಲಿ ಘರ್ಷಣೆ ಇಲ್ಲದೆ ಸುಲಭವಾಗಿ ಚಲಿಸಲು ಅನುಕೂಲವಾಗುವಂತೆ ಮೀನುಗಳ ದೇಹದ ಆಕಾರ ರಚನೆಯಾಗಿದೆ ಮತ್ತು ನುಣುಪಾಗಿದೆ. ಮೀನುಗಳಲ್ಲಿ ಚಲನೆಗೆ ಅವುಗಳ ಬಾಲ ತುಂಬಾ ಸಹಕಾರಿಯಾಗಿದೆ. ಬಾಲವು ಅಕ್ಕಪಕ್ಕಕ್ಕೆ ಹೊರಳಾಡುವುದರಿಂದ ದೇಹವನ್ನು ಮುಂದಕ್ಕೆ ತಳ್ಳುತ್ತದೆ. ಪ್ರಾಣಿ ಅಕ್ಕಪಕ್ಕಕ್ಕೆ ಹೊರಳಿ ಮುಳುಗದಂತೆ ಈಜುರೆಕ್ಕೆಗಳು ದೇಹವನ್ನು ನಡೆಸುತ್ತವೆ. ದೇಹ ತೆಳ್ಳಗೆ ಸ್ವಚ್ಛವಾಗಿದೆ. ದೇಹದ ಮೇಲೆ ಹುರುಪೆಗಳು ಮನೆಗೆ ಹೆಂಚು ಹೊದಿಸಿದಂತೆ ಜೋಡಿಸಲ್ಪಟ್ಟಿವೆ. ಹುರುಪೆಗಳ ಮೇಲೆ ಒಂದಾದಮೇಲೊಂದು ದುಂಡು ಗೆರೆಗಳಿವೆ. ಈ ಒಂದೊಂದು ಗೆರೆಯೂ ಮೀನಿನ ಆಯುಷ್ಯದಲ್ಲಿ ಒಂದೊಂದು ವರುಷವನ್ನು ಸೂಚಿಸುತ್ತವೆ. ಸಾಗರದ ಮೀನುಗಳಲ್ಲಿ, ವೇಗವಾಗಿ ಚಲಿಸುವ ಮೀನುಗಳಲ್ಲಿ ಸಾಮಾನ್ಯವಾಗಿ ಗಾಳಿ ತುಂಬಿದ ಚೀಲವೊಂದಿರುತ್ತದೆ. ಇದು ನೀರಿನಲ್ಲಿ ಮೀನಿನ ನಿಲುವನ್ನು ವಿಶದೀಕರಿಸುತ್ತದೆ. ನೀರಿನಲ್ಲಿ ಮೀನು ಮೇಲೆ ಬರಬೇಕಾದರೆ ಚೀಲದಲ್ಲಿ ಗಾಳಿಯನ್ನು ತುಂಬಿಕೊಳ್ಳುತ್ತದೆ. ಇದರಿಂದ ಮೀನು ಹಗರಾಗಿ ಮೇಲೆ ತೇಲುತ್ತದೆ. ಆಳಕ್ಕೆ ಹೋಗಬೇಕಾದಾಗ ಗಾಳಿಯನ್ನು ಉಗುಳುತ್ತವೆ. ಇದರಿಂದ ಭಾರವಾಗಿ ಕೆಳಗಡೆಗೆ ಮುಳುಗುತ್ತವೆ. ಆದುದರಿಂದ ಈ ಗಾಳಿಯ ಚೀಲದ ಸಹಾಯದಿಂದ ಮೀನುಗಳು, ನೀರಿನಲ್ಲಿ ತಮಗನುಗುಣವಾದ ಆಳದಲ್ಲಿರಬಹುದು. ಮತ್ತು ನೀರಿನಲ್ಲಿ ಅಲೆಗಳಿಂದುಂಟಾಗುವ ಪ್ರವಾಹಗಳನ್ನು ತೆಗೆದುಕೊಳ್ಳಬಹುದು. ದೇಹದ ಎರಡು ಪಕ್ಕಗಳಲ್ಲಿಯೂ ಎದೆಯಿಂದ ಬಾಲದ ವರೆವಿಗೆ ಒಂದು ಗೆರೆ ಹಬ್ಬಿದೆ. ಇದನ್ನು ಪಾರ್ಶ್ವಪಂಕ್ತಿ (Lateral Line) ಎಂದೆನ್ನುತ್ತೇವೆ. ಇದರ ಮಹತ್ವವೇನು ಎಂದು ಇನ್ನೂ ನಿರ್ದಿಷ್ಟವಾಗಿ ತಿಳಿದುಬಂದಿಲ್ಲ. ಈ ಪಂಕ್ತಿ ದೇಹದ ಮಗ್ಗುಲಿನಲ್ಲಿರುವುದರಿಂದ ಪಾರ್ಶ್ವದಲ್ಲಿರುವ ನೀರಿನ ಒತ್ತಡವನ್ನು ಮೆದುಳಿಗೆ ವರದಿ ಮಾಡಬಹುದು ಎಂದು ಊಹಿಸಲಾಗಿದೆ. ಇವು ಬಾಲವನ್ನು ಅಕ್ಕಪಕ್ಕಕ್ಕೆ ಬಡಿದು ನೀರಿನಲ್ಲಿ ನೇರವಾಗಿ ಚಲಿಸಬೇಕಾಗಿರುವುದರಿಂದ ನೀರಿನ ಒತ್ತಡವನ್ನು ತಿಳಿದುಕೊಳ್ಳಬೇಕಾದುದು ಅವಶ್ಯವಾಗಿದೆ.

ಮೀನುಗಳು ತಂಪುರಕ್ತವನ್ನು ಹೊಂದಿದ ಪ್ರಾಣಿಗಳು. ಇವುಗಳಲ್ಲಿ ರಕ್ತದ ಮತ್ತು ದೇಹದ ಶಾಖ ನಮ್ಮಲ್ಲಿರುವಂತೆ ಸದಾ ಒಂದೇ ಸಮನಾಗಿರದೆ, ಸನ್ನಿವೇಶದ ಶಾಖದೊಂದಿಗೆ ಬದಲಾಗುತ್ತಿರುತ್ತದೆ. ಮೀನುಗಳ ಆಹಾರವನ್ನು ಅವುಗಳ ಬಾಯಿಯ ರಚನೆಯಿಂದ ತಿಳಿದುಕೊಳ್ಳಬಹುದು. ಸಾಗರದ ಇತರ ಪ್ರಾಣಿಗಳನ್ನು ಕೊಂದು ತಿನ್ನುವ ಮೀನುಗಳಲ್ಲಿ ದವಡೆಗಳು ದೊಡ್ಡವಾಗಿಯೂ ಬಲವಾಗಿಯೂ ಇರುತ್ತವೆ. ತೇಲುಜೀವಿಗಳನ್ನೋ, ಗಿಡಗೆಂಟೆಗಳನ್ನೋ ತಿನ್ನುವ ಮೀನುಗಳಲ್ಲಿ ಬಾಯಿ ಬಹಳ ಸಣ್ಣದಾಗಿರುತ್ತದೆ. ಮೀನುಗಳಲ್ಲಿ ಉಸಿರಾಡುವ ಅಂಗಗಳೆಂದರೆ, ರಕ್ತದಿಂದ ತುಂಬಿ ಕವಲೊಡೆದು ತೆಳುವಾದ ಚರ್ಮವನ್ನು ಹೊಂದಿ ಪುಕ್ಕಗಳಂತಿರುವ ಕಿವಿರುಗಳು. ಕೋಮಲಾಸ್ಥಿ ಮೀನುಗಳಲ್ಲಿ ಈ ಕಿವಿರುಗಳಿಗೆ ಸರಿಯಾದ ರಕ್ಷಣೆ ಇಲ್ಲ. ಆದರೆ ಮೂಳೆಮೀನುಗಳಲ್ಲಿ ಇವನ್ನು ರಕ್ಷಿಸಲು ಕಿವಿರುಕವಚ (Operculum) ಗಳಿವೆ. ಇವು ದೇಹದ ಪಕ್ಕದಲ್ಲಿರುತ್ತವೆ. ಮೀನುಗಳು ಬಾಯಿಂದ ನೀರನ್ನು ನುಂಗಿ, ಕಿವಿರು ರಂಧ್ರ (Gill Slits) ಗಳ ಮೂಲಕ ಹೊರತಳ್ಳುತ್ತವೆ. ನೀರು ಹೀಗೆ ಹರಿದು ಹೋಗುವಾಗ ಕಿವಿರುಕಡ್ಡಿ (Gill Filaments) ಗಳ ಮೇಲೆ ಹರಿಯುತ್ತದೆ. ಹೀಗೆ ಹರಿದುಹೋಗುವಾಗ ಕಿವಿರುಕಡ್ಡಿಗಳಿಗೆ ಹಬ್ಬಿರುವ ರಕ್ತನಾಳಗಳಲ್ಲಿರುವ ರಕ್ತ ನೀರಿನಲ್ಲಿರುವ ಆಮ್ಲಜನಕವನ್ನು ತೆಗೆದುಕೊಂಡು ಇಂಗಾಲಾಮ್ಲವನ್ನು ವಿಸರ್ಜಿಸುತ್ತದೆ. ಇದಕ್ಕಾಗಿ ಮೀನುಗಳಲ್ಲಿ ಸದಾಕಾಲವೂ ನೀರಿನ ಪ್ರವಾಹ ಹರಿಯುತ್ತಿರುತ್ತದೆ. ಉಸಿರಾಡಬೇಕಾದುದರಿಂದ ಕಿವಿರುಗಳು ಯಾವಾಗಲೂ ಒದ್ದೆಯಾಗಿರಬೇಕು. ಹಾಗಿಲ್ಲದೆ ಒಣಗಿದವೆಂದರೆ ಕಿವಿರುಕಡ್ಡಿಗಳು ಮುದುಡಿಕೊಂಡುಬಿಡುತ್ತವೆ. ಉಸಿರಾಡುವುದು ನಿಂತುಹೋಗುತ್ತದೆ, ಮೀನುಗಳಿಗೆ ಸಾವು ಸನ್ನಿಹಿತವಾದಂತೆಯೇ ! ಗಾಳಿಯಲ್ಲಿರುವ ಆಮ್ಲಜನಕವನ್ನು ಹೀರುವ ಶಕ್ತಿ ಕಿವಿರುಗಳಿಗಿಲ್ಲ. ಹೆರ್ರಿಂಗ್ (Herring) ಮೀನುಗಳಲ್ಲಿ ಕಿವಿರುಗಳು ತುಂಬಾ ಮೃದುವಾಗಿರುವುದರಿಂದ ಅವುಗಳನ್ನು ನೀರಿನಿಂದ ಹೊರಕ್ಕೆ ತೆಗೆಯುತ್ತಲೇ ಸಾಯುತ್ತವೆ. ಕಾರ್ಪ್ (Carp) ಮೀನುಗಳಲ್ಲಿ ಕಿವಿರುಕೋಣೆ (Gill Chamber) ಸ್ವಲ್ಪ ದೊಡ್ಡದು. ಇದರಲ್ಲಿ ಸದಾ ನೀರನ್ನು ಕೂಡಿಟ್ಟುಕೊಂಡಿರುವುದರಿಂದ ನೀರಿನಿಂದ ಹೊರಗೆ ತೆಗೆದರೆ, ಆ ಶೇಖರಿಸಿಟ್ಟುಕೊಂಡ ನೀರು ಮುಗಿಯುವ ವರೆಗೆ ಜೀವಿಸಿರಬಲ್ಲದು. ಮರಗಳನ್ನು ಹತ್ತುವ ಸಿಹಿನೀರಿನ ಪರ್ಚಮೀನು (Climbing Perch) ಗಳಲ್ಲಿ ಉಸಿರಾಡಲು ಮತ್ತೊಂದು ಅಂಗವಿದೆ. ಇವು ಈ ಅಂಗದ ಸಹಾಯದಿಂದ ನೀರಿನಿಂದ ಹೊರಗೂ ಉಸಿರಾಡಬಲ್ಲವು. ಈ ಮೀನುಗಳು ಕಿವಿರುಕವಚಕ್ಕಿರುವ ಮುಳ್ಳುಗಳ ಸಹಾಯದಿಂದ ನಡೆಯಬಲ್ಲವು. ಮಣ್ಣುಮೀನುಗಳು (Mud Hoppers), ಹಾರುಮೀನು (Jumping Fishes)

ಗಳು ನೀರಿನಲ್ಲಿ ಕಳೆಯುವಷ್ಟೇ ಕಾಲವನ್ನು ನೆಲದಮೇಲೂ ಕಳೆಯಬಲ್ಲವು. ಇವು ನದೀಮುಖಜ ಭೂಮಿಗಳಲ್ಲಿ ವಾಸಿಸುತ್ತವೆ. ತೋಳಿನ ಈಜುರೆಕ್ಕೆ (Pectoral Fin) ಗಳ ಸಹಾಯದಿಂದ ಓಡಾಡುತ್ತವೆ. ಶ್ವಾಸಕೋಶದ ಮೀನುಗಳ (Lung Fish) ಲ್ಲಿ ಗಾಳಿಯಲ್ಲಿ ಉಸಿರಾಡಬಲ್ಲ ಶ್ವಾಸಕೋಶಗಳಂತಹ ಗಾಳಿಯ ಚೀಲಗಳಿವೆ. ಇವು ಉಸಿರಾಡಲು ನೀರನ್ನಾಗಲಿ, ಕಿವಿರುಗಳನ್ನಾಗಲಿ ಅವಲಂಬಿಸಿಲ್ಲ. ಇವು ನೀರಿನಿಂದ ಹೊರಗೆ ನೆಲದಮೇಲೆ ಬಹಳಕಾಲ ಜೀವಿಸಿರಬಲ್ಲವು. ಹೀಗೆ ನೀರಿನಲ್ಲಿಯೇ ವಾಸಿಸಿ, ಆಗಾಗ ಬರುವ ಬರಗಾಲಗಳನ್ನು ಎದುರಿಸಿ, ನೀರಿನಿಂದ ಹೊರಗಿರಲು ಹೊಂದಿಕೊಂಡು ವಾಸಿಸಬಲ್ಲ ಪ್ರಾಣಿಗಳಿಂದಲೇ, ಶ್ವಾಸಕೋಶಗಳನ್ನು ಹೊಂದಿ, ಕೈಕಾಲುಗಳನ್ನು ಪಡೆದ ಭೂಮಿಯ ಮೇಲಿನ ಕಶೇರುಹಗಳ ಉದ್ಭವವಾಗಿರಬಹುದು. ಬಹಳವಾಗಿ ವಿಕಾಸವೂ ಮುಂದೆ ಮುಂದೆ ಹೋಗಿದೆ. ಆದರೆ ಹಲಕೆಲವು ಸಾರಿ ತನ್ನ ಮುಂದಿನ ದಾರಿಯನ್ನು ಹಿಡಿದು ಸಾಗುವುದನ್ನು ಬಿಟ್ಟು ಹಿಂದಿರುಗಿಯೂ ಹೋಗಿದೆ. ಪೂರ್ತಿಯಾಗಿ ನೀರಿನ ಆಶ್ರಯವನ್ನು ತ್ಯಜಿಸಿ ನೆಲದಮೇಲಕ್ಕೆ ವಲಸೆ ಹೊರಟು, ಹೊಸ ಸನ್ನಿವೇಶಕ್ಕೆ ಹೊಂದಿಕೊಂಡ ಕೆಲವು ಕಶೇರುಹಗಳು ಪುನಃ ನೀರಿಗೆ ಹಿಂದಿರುಗಿಬಂದು ನೀರಿನ ಆಶ್ರಯಕ್ಕೆ ಶರಣುಹೋಗಿವೆ. ಹುಳಿ ಹಿಂಡಿದ ಹಾಲಿನಿಂದ ಹಾಲನ್ನು ಹೇಗೆ ಹಿಂದಿರುಗಿ ಪಡೆಯಲಾರೆವೋ ಹಾಗೆಯೇ, ಪುನಃ ನೀರಿಗೆ ಹಿಂದಿರುಗಿ ಬಂದ ಈ ಪ್ರಾಣಿಗಳಲ್ಲಿ, ನೆಲದಮೇಲಿನ ವಾಸಕ್ಕೆ ಅಪ್ರಯೋಜಕವಾಗಿ ಮಾರ್ಪಟ್ಟ ಅಂಗಗಳು ಪುನಃ ಹಿಂದಿನ ಜೀವನಕ್ಕೆ ತೊಡಗಿದಾಗ ಮತ್ತೆ ಹಿಂದಿನಂತೆ ಬೆಳೆದಿಲ್ಲ. ಇದು ಪ್ರಕೃತಿಯ ನಡತೆಗೆ ವಿರೋಧ. ಇದರಿಂದಲೇ ಇರಬೇಕು ನೆಲದಮೇಲಿನಿಂದ ಪುನಃ ನೀರಿಗೆ ಬಂದ ಪ್ರಾಣಿಗಳಲ್ಲಿ ಹಿಂದಿನಂತೆ ನೀರಿನಲ್ಲಿಯೇ ಉಸಿರಾಡಬಲ್ಲ ಕಿವಿರುಗಳು ಬೆಳೆದಿಲ್ಲ. ಹೀಗೆ ನೀರಿಗೆ ಮರಳಿಬಂದ ಪ್ರಾಣಿಗಳು, ಇತರ ನೀರಿನ ಪ್ರಾಣಿಗಳಂತೆಯೇ ವಾಸಿಸಿದರೂ, ಉಸಿರಾಡಲು ಗಾಳಿಗೆ ಆಗಾಗ ನೀರಿನ ಮೇಲಕ್ಕೆ ಬರಬೇಕಾಗುತ್ತದೆ, ಮತ್ತು ಇವಕ್ಕೆ ಕಿವಿರುಗಳ ಬದಲು ಶ್ವಾಸಕೋಶಗಳಿವೆ. ಮೊದಮೊದಲು ಕಶೇರುಹಗಳು ನೀರಿನಿಂದ ನೆಲಕ್ಕೆ ವಲಸೆ ಹೋಗುವಾಗ ಮರಿಮಾಡುವ ಕಾಲಕ್ಕೆ ಪುನಃ ನೀರಿಗೆ ಬರುವುದು ವಾಡಿಕೆಯಾಗಿತ್ತು. ಇದೇ ರೀತಿ ಕಪ್ಪೆಗಳಲ್ಲಿ ಇಂದಿಗೂ ಆಗುತ್ತಿದೆ, ಕಪ್ಪೆ ನೆಲದ ಮೇಲೆ ಜೀವಿತವನ್ನೆಲ್ಲ ಕಳೆದರೂ ಮೊಟ್ಟೆಯಿಡಲು ಮಾತ್ರ ನೀರಿಗೇ ಹಿಂದಿರುಗಿ ಹೋಗಬೇಕು. ಇದೇ ರೀತಿ ನೆಲವನ್ನು ಬಿಟ್ಟು ನೀರಿಗೆ ಮರಳಿ ಬಂದ ಪ್ರಾಣಿಗಳೂ ಕೂಡ ಮರಿಮಾಡುವ ಕಾಲಕ್ಕೆ ಸಾಗರದ ದಂಡೆಗೆ ಬರುತ್ತವೆ.

ಮೊಟ್ಟಮೊದಲು ನೆಲದ ಮೇಲಕ್ಕೆ ವಲಸೆ ಬಂದು ಜೀವನವನ್ನಾರಂಭಿಸಿದ ಕಶೇರುಹಗಳೆಂದರೆ ದ್ವಿಚರಿಗಳು (Amphibians). ಕಪ್ಪೆಗಳು ಈ ದ್ವಿಚರಿಗಳ ವರ್ಗಕ್ಕೆ

ಸೇರುತ್ತವೆ. ಇವು ತಮ್ಮ ಇಡೀ ಜೀವನವನ್ನು ನೀರಿನಲ್ಲಿಯೇ ಕಳೆದರೂ ಉಪ್ಪು ನೀರಿಗೆ ಮಾತ್ರ ಹಿಂದಿರುಗಿ ಬಂದಿಲ್ಲ. ಉಪ್ಪುನೀರು ಈ ಪ್ರಾಣಿಗಳಿಗೆ ವಿಷವಿದ್ದಂತೆ. ಸರೀಸೃಪಗಳು (Reptile) ದ್ವಿಚರಿಗಳಿಂದಲೇ ಉದ್ಭವಿಸಿದ್ದರೂ ದ್ವಿಚರಿಗಳಷ್ಟು ನೀರನ್ನು ಅವಲಂಬಿಸಿಲ್ಲ. ನೆಲದ ಮೇಲೆ ಸೂರ್ಯನ ಶಾಖದಿಂದ ಚರ್ಮವು ಒಣಗದಿರಲೆಂದು ಒರಟಾದ ದಪ್ಪ ಚರ್ಮವನ್ನು ಹೊಂದಿವೆ. ಬಿಸಿಲಿನ ಬೇಗೆಯಿಂದ ರಕ್ಷಿಸಲು ತಮ್ಮ ಮೊಟ್ಟೆಗಳನ್ನು ಸುಣ್ಣದ ಚಿಪ್ಪುಗಳೊಳಗಿಡುತ್ತವೆ. ಇವು ಲಕ್ಷಾಂತರ ವರುಷಗಳ ಹಿಂದೆ ಅಧಿಕವಾಗಿ ಹುಟ್ಟಿ ಬೆಳೆದು, ಭೂಮಂಡಲವನ್ನೇ ವ್ಯಾಪಿಸಿ ಭೂಮಿಯನ್ನು ಆಳಿದವು. ಈ ಕಾಲವನ್ನು ಸರೀಸೃಪಗಳ ಸುವರ್ಣಯುಗವೆನ್ನುತ್ತೇವೆ. ಆಗ ಎಲ್ಲಿ ನೋಡಿದರೂ, ಎತ್ತೆತ್ತ ನೋಡಿದರೂ ಸರೀಸೃಪಗಳೇ ಇದ್ದವು. (ನೋಡಿದವರಿಲ್ಲ . . . ಅಧಿಕೃತವಾದ ಊಹೆ!) ನೆಲ, ನೀರು, ಗಾಳಿಯ ಜೀವನಗಳಿಗೂ ವ್ಯಾಪಿಸಿದ್ದವು. ಇವು ಪುನಃ ನೀರಿಗೆ ಹಿಂದಿರುಗಿದಾಗ ಮರಳಿ ಈಜುರೆಕ್ಕೆಗಳು ಬೆಳೆಯಲಿಲ್ಲ. ಆದರೆ ಕೈ ಕಾಲುಗಳೇ ಈಜುರೆಕ್ಕೆಗಳಾಗಿ ಮಾರ್ಪಟ್ಟವು. ಇಂದು ನೆಲದ ಮೇಲೆ ವಾಸಿಸುತ್ತಿರುವ ಸರೀಸೃಪಗಳ ಸಂಖ್ಯೆ ಕಡಿಮೆ, ನೀರಿನಲ್ಲಂತೂ ತೀರಾ ಕಡಿಮೆ.

ಅಂದು ತಮ್ಮ ಸುವರ್ಣಯುಗದಲ್ಲಿ ಎಂಬತ್ತು ತೊಂಬತ್ತು ಅಡಿಗಳ ವರೆಗೆ ಬೆಳೆದು ಬೃಹದಾಕಾರವನ್ನು ತಾಳಿದ್ದವು. ಇಂದು ಬದುಕಿರುವ ಅತಿ ದೊಡ್ಡ ಸರೀಸೃಪವೆಂದರೆ ಉಪ್ಪುನೀರಿನಲ್ಲಿ ವಾಸಿಸುವ ಮೂವತ್ತಡಿಯ ಮೊಸಳೆಗಳು. ಅಂದಿನ ಆ ಬೃಹದಾಕಾರಕ್ಕೆ ಹೋಲಿಸಿದರೆ ಈ ಮೊಸಳೆಗಳ ಇಂದಿನ ಗಾತ್ರ ತೀರಾ ಅಲ್ಪ. ಮಿಕ್ಕ ಮೊಸಳೆಗಳು ಸಿಹಿನೀರಿನಲ್ಲಿ ನದಿಯ ದಂಡೆಗಳಲ್ಲಿ ಕಾಲಕಳೆಯುತ್ತ ವಾಸಿಸುತ್ತವೆ. ಇವುಗಳಿಗಿರುವ ದಪ್ಪನಾದ ಪುಟ್ಟ ಕಾಲುಗಳು ನೆಲದ ಮೇಲೆ ಓಡಾಟಕ್ಕೆ ಅನುಕೂಲವಾಗಿಲ್ಲ. ಮೂಗು ಕಣ್ಣುಗಳು ನೀರಿನ ಜೀವನಕ್ಕೆ ಹೊಂದಿಕೊಂಡಿವೆ. ದಪ್ಪನಾಗಿ ಚಪ್ಪಟೆಯಾದ ಇವುಗಳ ಬಾಲ ಮೀನುಗಳಲ್ಲಿರುವಂತೆ ಈಜಲು ತುಂಬಾ ಸಹಕಾರಿಯಾಗಿದೆ.

ಕೂರ್ಮಗಳು (Turtles) ಆಮೆಗಳ ಗುಂಪಿನಿಂದಲೇ ಉದ್ಭವಿಸಿದ್ದರೂ ಇವು ನೀರಿನ ವಾಸಕ್ಕೆ ಹಿಂದಿರುಗಿವೆ. ಮೊಟ್ಟೆಯಿಡಲು ಮಾತ್ರ ನೆಲಕ್ಕೆ ಬರುತ್ತವೆ. ಇವು ತಮ್ಮ ಜಾಲಪಾದ (Webbed Feet) ಗಳ ಸಹಾಯದಿಂದ ಗಾಂಭೀರ್ಯದ ಠೀವಿಯಿಂದ ಈಜುವುದನ್ನು ನೋಡಲು ಬಹಳ ಮೋಜೆನ್ನಿಸುತ್ತದೆ.

ಸಾಗರದ ಹಲ್ಲಿಗಳು (Iguana) ಹೆಸರು ಸೂಚಿಸುವಂತೆ ನೀರಿನಲ್ಲಿ ವಾಸಿಸುವುದಿಲ್ಲ. ಸಾಗರದ ದಂಡೆಯಲ್ಲಿ ಮರಳಿನ ಮೇಲೋ, ಬಂಡೆಗಳ ಮೇಲೋ, ಬಿಸಿಲು

ಕಾಯಿಸುತ್ತಿರುತ್ತವೆ. ಆಹಾರಕ್ಕಾಗಿ ಆಗಾಗ ನೀರಿಗೆ ಹೋಗಿ ಅಲ್ಲಿಯ ಗಿಡ ಗೆಂಟೆಗಳನ್ನು ತಿಂದುಬರುತ್ತವೆ. ಸುಮಾರು ಮೂರು ಅಡಿಗಳಷ್ಟು ಉದ್ದವಿರುತ್ತವೆ. ಬೆನ್ನಿನ ಮೇಲಿರುವ ಚೂಪಾದ ಮುಳ್ಳುಗಳಿಂದಲೂ, ಇವುಗಳ ವಿಕಾರವಾದ ಆಕಾರ ದಿಂದಲೂ ಇವು ಸಣ್ಣ ಸರ್ಪಗಳಂತೆ ಕಾಣಿಸುತ್ತವೆ.

ಸಾಗರದ ಹಾವುಗಳೂ ನೆಲದ ಹಾವುಗಳೂ ಬಂಧುಗಳೇ ಇರಬೇಕು. ಇವು ನೆಲದಿಂದ ನೂರಾರು ಮೈಲಿಗಳಾಚೆ ಮುಳುಗಿದ ಮರಳುದ್ವೀಪ (Shoals) ಗಳಲ್ಲಿ ವಾಸಿಸುತ್ತವೆ. ಇವುಗಳ ಗಾತ್ರ ಸಣ್ಣದೇ, ಹೆಚ್ಚೆಂದರೆ ನಾಲ್ಕೈದು ಅಡಿಗಳಷ್ಟು ಉದ್ದವಿರುತ್ತವೆ, ಬಣ್ಣಬಣ್ಣವಾಗಿಯೂ ಇರುತ್ತವೆ. ಇವುಗಳ ಬಾಲ ನೆಲದ ಹಾವುಗಳಂತೆ ದುಂಡಗಿರದೆ ಚಪ್ಪಟೆಯಾಗಿದೆ. ಈ ಬಾಲದ ಸಹಾಯದಿಂದ ನೀರಿನಲ್ಲಿ ಈಜುತ್ತವೆ. ಇವು ನೀರನ್ನು ಉಸಿರಾಡಲಾರವು. ಸಾಮಾನ್ಯವಾಗಿ ಮೊಟ್ಟೆಯಿಡಲು ದಂಡೆಗೆ ಬರುತ್ತವೆ.

ಪಕ್ಷಿಗಳು ಪ್ರಾಯಶಃ ಹಿಂದುಳಿದ ಸರೀಸೃಪಗಳ ಗುಂಪಿನಿಂದಲೇ ಉದ್ಭವಿಸಿರಬೇಕು. ಆದರೂ ಅವುಗಳಿಗಿಂತಲೂ ಬಹಳ ವಿಧದಲ್ಲಿ ಮುಂದುವರಿದಿವೆ. ನೀರು ಹಕ್ಕಿಗಳೆಂದರೆ ನೀರಿನ ಮೇಲೆ ವಾಸಿಸುವ ಹಕ್ಕಿಗಳೇ ಬಹಳ. ನೀರಿನೊಳಗೆ ವಾಸಿಸುವ ಹಕ್ಕಿಗಳು ವಿರಳ. ಈ ನೀರುಹಕ್ಕಿಗಳ ಆಹಾರ ಸಾಮಾನ್ಯವಾಗಿ ಮೀನುಗಳು. ಮೀನುಗಳನ್ನು ಹಿಡಿಯಲು ಅನುವಾದ ಉದ್ದನೆಯ ಕೊಕ್ಕುಗಳಿವೆ. ನೀರಿನ ವಾಸಕ್ಕೆ ಚೆನ್ನಾಗಿ ಹೊಂದಿಕೊಂಡಿರುವ ಹಕ್ಕಿಗಳೆಂದರೆ ಪೆಂಗುಯಿನ್ (Penguin) ಹಕ್ಕಿಗಳು. ಈ ಜೀವನಕ್ಕಾಗಿ ತನ್ನ ಸೆಚ್ಚಿನ ಅಲಂಕಾರವನ್ನೇ ತ್ಯಾಗಮಾಡಿಬಿಟ್ಟಿವೆ. ಹಕ್ಕಿಗಳು ಸಹಜವಾಗಿಯೂ ಸುಂದರವಾದ ಪ್ರಾಣಿಗಳು. ಹೀಗಿರುವಾಗ ಈ ಹಕ್ಕಿ ತನ್ನ ಸುಂದರಾಕಾರವನ್ನು ನೀರಿನ ಜೀವನಕ್ಕಾಗಿ ತ್ಯಾಗಮಾಡಿಬಿಟ್ಟಿದೆ. ಇವುಗಳಲ್ಲಿ ರೆಕ್ಕೆಗಳೇ ಈಜುರೆಕ್ಕೆಗಳಾಗಿವೆ. ಇವು ಮೀನುಗಳಂತೆ ನೀರಿನೊಳಗೆ ಈಜಲೂ ಬಲ್ಲವು, ನೆಲದ ಮೇಲೆ ಓಡಾಡಲೂ ಬಲ್ಲವು.

ನೀರಿನ ಜೀವನಕ್ಕೆ ಚೆನ್ನಾಗಿ ಹೊಂದಿಕೊಂಡ ಪ್ರಾಣಿಗಳಲ್ಲಿ ತಿಮಿಂಗಿಲಗಳೂ ಉಂಟು. ಇವು ಮರಿಮಾಡಲೂ ಕೂಡ ನೆಲದ ಆಶ್ರಯವನ್ನು ಆಶಿಸಿಲ್ಲ. ಇವುಗಳ ದೇಹ ಮೀನಿನ ದೇಹದಂತೆ ನುಣುಪಾಗಿದ್ದರೂ ಇವು ಮೀನುಗಳಲ್ಲ. ಆದರೆ ಪ್ರಾಣಿ ರಾಜ್ಯದಲ್ಲಿಯೇ ಅತ್ಯುತ್ಕೃಷ್ಟವಾದ ಸಸ್ತನಿಗಳ ಗುಂಪಿಗೆ ಸೇರಿವೆ. ತಿಮಿಂಗಿಲವೂ ಹಕ್ಕಿಗಳಂತೆ ಬಿಸಿರಕ್ತದ ಪ್ರಾಣಿ, ಶ್ವಾಸಕೋಶಗಳಿಂದ ಉಸಿರಾಡುತ್ತದೆ. ಇವು ಮರಿಗಳನ್ನು ಹಾಲುಣಿಸಿ ಬೆಳೆಸುತ್ತವೆ. ಸಸ್ತನಿಗಳ ವಿಕಾಸದಲ್ಲಿ ಮುಂಚೆಯೇ ನೆಲವನ್ನು ತೊರೆದು ನೀರನ್ನು ಮರೆಹೊಕ್ಕಿವೆ. ಇಲ್ಲದಿದ್ದರೆ ಇಷ್ಟು ಭಾರಿ ದೇಹವನ್ನು

ಎಷ್ಟು ಬಲವಾದ ಕಾಲುಗಳೂ ನೆಲದ ಮೇಲೆ ಹೊತ್ತು ತಿರುಗಲಾರವು. ಇಂದಿಗೂ ತಿಮಿಂಗಿಲಗಳ ಅಸ್ಥಿಪಂಜರದಲ್ಲಿ, ನೆಲದ ಮೇಲಿನ ಪೂರ್ವಿಕರ ಹಿಂಗಾಲುಗಳ ತುಣುಕುಗಳಿವೆ. ಮುಂಗಾಲುಗಳು ಈಜುರೆಕ್ಕೆಗಳಾಗಿ ಬದಲಾಗಿದ್ದರೂ ಅಸ್ಥಿ ಪಂಜರದ ರಚನೆಯಲ್ಲಿ ನೆಲದ ಬಂಧುಗಳಂತೆ ಪಂಚಾಂಗುಳಿಯ ರೀತಿಯಿದೆ. ನೀರಿನಲ್ಲಿ ಓಡಾಟಕ್ಕೆ ಅಡಚಣೆಯಾಗದಿರಲೆಂದು ರೋಮ ಮಾಯವಾಗಿ, ಚಳಿಯಾದ ನೀರಿನಲ್ಲಿಯೂ ದೇಹವನ್ನು ಶಾಖವಾಗಿಡಬಲ್ಲ ಹಗುರಾದ ಕೊಬ್ಬು ಬೆಳೆದಿದೆ. ಇಂದಿಗೂ ಕೆಲವು ತಿಮಿಂಗಿಲಗಳ ಬಾಯಿಯ ಹತ್ತಿರ ಬೆಳೆಯುವ ಮೀಸೆಗಳು ಹಿಂದಿದ್ದ ರೋಮವನ್ನು ನೆನಪಿಗೆ ತರುತ್ತಿವೆ. ಉಸಿರಾಡಲು ಅನುವಾಗುವಂತೆ, ದೇಹವು ನೀರಿನ ಮೇಲೆ ಹೆಚ್ಚು ಬಾರದಿರುವಂತೆ ನಾಸಿಕವು ತಲೆಯ ತುದಿಯಲ್ಲಿದೆ. ನೀರಿನಲ್ಲಿ ಮುಳುಗಿದ್ದಾಗ ನಾಸಿಕವು ಮುಚ್ಚಿರುತ್ತದೆ. ಇವುಗಳಲ್ಲಿ ಶ್ವಾಸಕೋಶಗಳು ತುಂಬಾ ದೊಡ್ಡವು. ಇದರ ತುಂಬಾ ಗಾಳಿಯನ್ನು ತುಂಬಿಕೊಂಡು ಮೇಲೆ ಬಂದಾಗ ಇದನ್ನು ಬಿರುಸಿನಿಂದ ಬಿಡುತ್ತವೆ.

ತಿಮಿಂಗಿಲಗಳಲ್ಲಿ ಎರಡು ವಿಧವುಂಟು, ಒಂದು ವಿಧದ ತಿಮಿಂಗಿಲಗಳಲ್ಲಿ ಬಾಯಲ್ಲಿ ಹಲ್ಲುಗಳಿವೆ. ಮತ್ತೊಂದು ವಿಧದ ತಿಮಿಂಗಿಲಗಳಲ್ಲಿ ಹಲ್ಲುಗಳಿಗೆ ಬದಲಾಗಿ ಐದಾರು ನೂರು ಕುಚ್ಚಿನಂತೆ ಕವಲೊಡೆದ ಚಿಪ್ಪಿನ ಪಟ್ಟಿಗಳಿವೆ. ಇವನ್ನು ಬಲೀನ್ (Baleen) ಅಥವ ತಿಮಿಂಗಿಲದೆಲಬು (Whalebone) ಗಳೆನ್ನುತ್ತಾರೆ. ಇವೆಲ್ಲಾ ಒಟ್ಟಿಗೆ ಜರಡಿಯಂತೆ ಕೆಲಸಮಾಡುತ್ತವೆ. ತಿಮಿಂಗಿಲದೆಲಬು ತಿಮಿಂಗಿಲಗಳು (Whalebone Whale) ತಮ್ಮ ಆಹಾರವಾದ ಸಣ್ಣ ಪುಟ್ಟ ಜೀವಿಗಳಿಂದ ಕೂಡಿದ ನೀರನ್ನು ಬಾಯೊಳಕ್ಕೆ ತುಂಬಿಕೊಂಡು, ತಿಮಿಂಗಿಲದೆಲುಬುಗಳನ್ನು ಮುಚ್ಚಿ, ಅವುಗಳ ಮೂಲಕ ನೀರನ್ನು ಉಗುಳುತ್ತವೆ. ಆಗ ನೀರು ಮಾತ್ರ ಸಂದಿನಲ್ಲಿ ಹೊರಗೆ ಬಂದು, ಜೀವಿಗಳು ಒಳಗೆ ಉಳಿಯುತ್ತವೆ. ಈ ತಿಮಿಂಗಿಲದೆಲುಬುಗಳು, ಹಲ್ಲಿದ್ದ ವಂಶಸ್ಥರಿಂದ ಉದ್ಭವಿಸಿದುದರಿಂದ ಹುಟ್ಟಿವೆ ಎಂದು ಅಭಿಪ್ರಾಯಪಡಲಾಗಿದೆ. ಏಕೆಂದರೆ ದವಡೆಯ ಸೋಡಿನಿಂದ ಹೊರಗೆ ಬೆಳೆಯದಿದ್ದರೂ ಈ ತಿಮಿಂಗಿಲಗಳಲ್ಲಿಯೂ, ತಿಮಿಂಗಿಲದ ಮರಿ ಗರ್ಭಕೋಶದಲ್ಲಿರುವಾಗಲೇ ಎಲ್ಲಾ ಸಸ್ತನಿಗಳಿಗಿರುವಂತೆ ಎರಡು ಸಾಲು ಹಲ್ಲುಗಳಿವೆ. ಪುರುಷಾಣು ತಿಮಿಂಗಿಲಗಳು (Sperm Whale) ಡಾಲ್ಫಿನ್ (Dolphin) ವಧಾತಿಮಿಂಗಿಲಗಳು (Killer), (Porpoise) ಪಾರಪಯಿಸ್‌ಗಳಲ್ಲಿ ಮೊನೆಯಾಗಿರುವ ಹಲ್ಲುಗಳಿವೆ. ಇವು ಮೀನುಗಳನ್ನು, ರೆಂಬೆಮಿಾನುಗಳನ್ನು ಹಿಡಿದು ತಿನ್ನುತ್ತವೆ.

ನಾಯಿ, ಕರಡಿ, ಬೆಕ್ಕುಗಳ ಗುಂಪಿಗೆ ಸೇರಿದ ನೀರುನಾಯಿ (Seal) ಗಳು

ತಿಮಿಂಗಿಲಗಳಂತೆ ನೀರಿನ ವಾಸಕ್ಕೆ ಪೂರ್ತಿಯಾಗಿ ಹೊಂದಿಕೊಂಡಿಲ್ಲ. ಬಳಲಿದಾಗ ವಿಶ್ರಮಿಸಿಕೊಳ್ಳಲೂ, ಮರಿಮಾಡಲೂ ಆಗಾಗ ದಂಡೆಗೆ ಬರುತ್ತವೆ. ಮಿಕ್ಕ ರೀತಿಯಲ್ಲಿ ನೀರಿನ ವಾಸಕ್ಕೆ ಅನುವಾಗಿ ದೇಹದ ಮಾರ್ಪಾಡಾಗಿದೆ. ದೇಹ ಬುಗುರಿಯಾಕಾರ ವಾಗಿದೆ. ಹಿಂಗಾಲುಗಳೂ ಬಾಲದೊಡನೆ ಸೇರಿ ಬಲವಾದ ಈಜುರೆಕ್ಕೆಯಾಗಿ ಮಾರ್ಪಟ್ಟಿವೆ. ಮುಳುಗಿದಾಗ ಮೂಗನ್ನು ಮುಚ್ಚಬಹುದು. ಬಾಯಿಯ ಪಕ್ಕ ದಲ್ಲಿರುವ ಮೀಸೆಗಳು, ಕಣ್ಣು ಕಾಣದ ಕಗ್ಗತ್ತಲಿನ ಆಳದಲ್ಲಿ ದಾರಿತೋರಲು ಸಹಕಾರಿ ಯಾಗಿವೆ. ಇರುವ ನಯವಾದ ಉಣ್ಣೆಯ ಚರ್ಮದ ಮೇಲುಹೊದಿಕೆಯ ಜೊತೆಗೆ ಕೊಬ್ಬು ಬೆಳೆದು ದೇಹವನ್ನು ಶಾಖವಾಗಿಡಲು ಸಹಕಾರಿಯಾಗಿವೆ. ಹಲ್ಲುಗಳು ಹಿಂದಕ್ಕೆ ಬಾಗಿ, ಬಾಯೊಳಗಿನಿಂದ ಆಹಾರವಾದ ಮೀನುಗಳು ನುಣುಚಿಕೊಂಡು ಹೋಗದಂತೆ ತಡೆಯುತ್ತವೆ.

ಏಕಕಣ ಜೀವಿಗಳಾದ ಆದಿಜೀವಿಗಳಿಂದ, ಬಿಸಿರಕ್ತದ, ಮರಿಗಳಿಗೆ ಮೊಲೆಯುಣಿ ಸುವ ಸಸ್ತನಿಗಳಾದ ತಿಮಿಂಗಿಲ ಮತ್ತು ನೀರುನಾಯಿಗಳ ವರೆಗೆ ವಿಕಾಸದ ನಡಿಗೆ ಬಹಳ ದೂರಸಾಗಿದೆ. ಈ ಹಾದಿಯಲ್ಲಿ ಹಲವಾರು ಮೈಲಿಗಲ್ಲುಗಳಿವೆ. ಹಾಗೂ ಈ ದಾರಿ ನೇರವಾಗಿ ಒಂದೇ ಆಗಿರದೆ ಅಲ್ಲಲ್ಲಿ ಕವಲೊಡೆದಿದೆ. ಹೀಗಿದ್ದರೂ ಭೂಮಿಯ ಮೇಲಿರುವಷ್ಟು ರೀತಿನೀತಿಗಳು ನೀರಿನ ಪ್ರಾಣಿಗಳಲ್ಲಿ ಇಲ್ಲ. ನೀರಿಗಿಂತಲೂ ಅಧಿಕ ವಾಗಿ ನೆಲದಮೇಲಿನ ವಾತಾವರಣ ಬದಲಾಗುತ್ತಿರುತ್ತದೆ. ಭೂಮಿಯ ಮೇಲಿರು ವಂತೆ ನೀರಿನಲ್ಲಿ ಶಾಖದ ವೈಪರೀತ್ಯವಿಲ್ಲ. ನೆಲದ ಮೇಲಿರುವಂತೆ ನೀರಿನಲ್ಲಿ ಮರಳು ಕಾಡು, ಮಂಜಿನ ಕಾಡುಗಳಿಲ್ಲ. ಭೂಮಿಯ ಮೇಲಿನ ಪ್ರಾಣಿಗಳಾದರೋ ವಿವಿಧ ರೀತಿಯ ಸನ್ನಿವೇಶಗಳಿಗೆ ಹೊಂದಿಕೊಳ್ಳಬೇಕಾಗುತ್ತದೆ. ನೀರಿನೊಳಗೆ ಸ್ಥಳ ವಿಶಾಲ ವಾಗಿರುವುದರಿಂದ, ನೀರಿನ ಪ್ರಾಣಿಗಳು ಗುಂಪಾಗಿ ಜೀವಿಸಬೇಕಾಗಿಲ್ಲ, ಸ್ಥಳಕ್ಕಾಗಿ ಕಾದಬೇಕಾಗಿಲ್ಲ. ನೀರಿನಲ್ಲಿ ಆಹಾರಕ್ಕೆ ಕೊರತೆಯಿಲ್ಲದಿರುವುದರಿಂದ, ಪ್ರಾಣಿಗಳು ಆಹಾರಕ್ಕಾಗಿ ಒಂದರೊಡನೊಂದು ಹೋರಾಡಬೇಕಾಗಿಲ್ಲ. ನೀರೆ ಪ್ರಾಣಿಗಳ ಚಲನೆ ಯಲ್ಲಿ ಹೆಚ್ಚು ಪಾತ್ರವಹಿಸುವುದರಿಂದ ಗಟ್ಟಿಮುಟ್ಟಾದ ಕಾಲುಗಳ ಅವಶ್ಯಕತೆಯಿಲ್ಲ. ನೀರಿನೊಳಗಿನ ಮಸಕು ಬೆಳಕಿನಲ್ಲಿಯೂ, ಕತ್ತಲೆಯಲ್ಲಿಯೂ ತೀಕ್ಷ್ಣವಾದ ಕಣ್ಣುಗಳ ಅವಶ್ಯಕತೆ ಇಲ್ಲ. ಆದುದರಿಂದಲೇ ನೀರಿನ ಪ್ರಾಣಿಗಳಲ್ಲಿ ಬಲವಾದ ಚಲನಾಂಗಗಳೂ, ತೀಕ್ಷ್ಣವಾದ ಕಣ್ಣುಗಳೂ ಬೆಳೆದಿಲ್ಲ. ಶಬ್ದದ ಅಲೆಗಳು ಗಾಳಿಯಲ್ಲಿ ಚಲಿಸುವಂತೆ ನೀರಿನಲ್ಲಿ ಹೆಚ್ಚು ದೂರ ಪ್ರಯಾಣಮಾಡಲಾರವು. ಇದರಿಂದ ಚುರುಕಾದ ಕಿವಿಗಳ ಉಪಯೋಗವೂ ಇಲ್ಲ, ಅವು ಕಾಣಿಸಿಕೊಂಡೂ ಇಲ್ಲ. ನೀರು ತನ್ನ ಅಲುಗಾಟದಿಂದ ನೀರಿನ ಪ್ರಾಣಿಗಳ ಮೊಟ್ಟೆಗಳನ್ನು ತೂಗಿ, ಬಿಸಲಿನ ಬೇಗೆಯಿಂದ ರಕ್ಷಿಸುವುದರಿಂದ

ನೀರಿನ ಪ್ರಾಣಿಗಳ ಮೊಟ್ಟೆಗಳು ನೆಲದ ಮೇಲಿನ ಪ್ರಾಣಿಗಳ ಮೊಟ್ಟೆಗಳಂತೆ ಚಿಪ್ಪಿನಿಂದ ರಕ್ಷಿಸಲ್ಪಟ್ಟಿಲ್ಲ. ಪುರುಷಾಣು (Sperm)ವೇ ತತ್ತಿಯನ್ನು ಸೇರಿ ಗರ್ಭದಾನವಾಗಲು ನೀರೇ ಅನುವಾಗುವುದರಿಂದ ನೀರಿನ ಪ್ರಾಣಿಗಳಲ್ಲಿ ದೇಹದ ಒಳಗೇ ಗರ್ಭದಾನ ವಾಗುವುದಿಲ್ಲ. ನೀರಿನಲ್ಲಿ ಮರಿಗಳಿಗೆ ಬೆಳವಣಿಗೆಯಲ್ಲಿ ಹೆಚ್ಚು ಕಷ್ಟಗಳು ಎದುರಾಗದಿರುವುದರಿಂದ ಮರಿಗಳು ಕೆಲವು ನೆಲದ ಪ್ರಾಣಿಗಳಂತೆ ತಾಯಿಯ ಗರ್ಭದಲ್ಲಿಯೇ ಬೆಳೆಯುವುದಿಲ್ಲ; ಮತ್ತು ನೀರಿನ ಪ್ರಾಣಿಗಳಲ್ಲಿ ತಾಯಿತಂದೆಗಳು ಮಕ್ಕಳುಮರಿಗಳನ್ನು ರಕ್ಷಿಸುವುದಿಲ್ಲ. ಮೊಟ್ಟೆಯಿಡುತ್ತಲೇ ಹೆಣ್ಣು ಪ್ರಾಣಿಯ ಕೆಲಸ ಮುಗಿಯಿತು. ಅವನ್ನು ಅವುಗಳ ವಿಧಿಗೊಡ್ಡಿ ತಮ್ಮ ದಾರಿಯನ್ನು ತಾವು ಹಿಡಿಯುತ್ತವೆ. ಹೀಗೆ ತಂದೆತಾಯಿಗಳು ಮಕ್ಕಳುಮರಿಗಳನ್ನು ಸಾಕುವ, ಪಾಲಿಸುವ, ಸಂಸಾರವಾಸ ನೀರಿನ ಪ್ರಾಣಿಗಳಲ್ಲಿಲ್ಲ.

ನೀರಿನ ಪ್ರಾಣಿಗಳು ಬಹಳ ನಿರ್ದಿಷ್ಟವಾದ ಹಾದಿಯಲ್ಲಿ ವಿಕಾಸಗೊಂಡು ನಡೆದಿವೆ. ನೆಲದ ಮೇಲೆ ಪ್ರಾಣಿಗಳಿಗೆ ಕಷ್ಟಗಳು ಎದುರಾದಂತೆ ನೀರಿನಲ್ಲಿ ಎದುರಾಗಿಲ್ಲ. ಪ್ರಾಣಿಗಳು ನೀರನ್ನು ಬಿಟ್ಟು ನೆಲದ ಮೇಲಕ್ಕೆ ಬರುವವರೆಗೂ, ಪ್ರಾಣಿಗಳ ವಿಕಾಸದಲ್ಲಿ ಹೆಚ್ಚು ಪರಿಣಾಮಕಾರಿಯಾದ ಹೊಗಳುವಂತಹ ಮಾರ್ಪಾಡುಗಳೇನೂ ಕಾಣಿಸಿಕೊಂಡಿಲ್ಲ. ಪ್ರಾಣಿಗಳು ನೀರನ್ನು ತ್ಯಜಿಸಿ, ನೆಲವನ್ನು ಆಶ್ರಯಿಸಿ, ನೆಲದ ಮೇಲೆ ಎದುರಾದ ಕಷ್ಟನಷ್ಟಗಳನ್ನನುಭವಿಸದೆ, ಎಡರುತೊಡರುಗಳನ್ನು ದಾಟಿ ಬಹಳ ದೂರ ಸಾಗಿವೆ ; ಹಲವಾರು ದಾರಿಗಳಲ್ಲಿ ಹೊರಟಿವೆ. ಹೀಗೆ ಹೊರಟ ಪ್ರಾಣಿಗಳನ್ನು ಇಂದು ಎಣಿಸಿದರೆ ರೀತಿಯಲ್ಲಿ, ನೀತಿಯಲ್ಲಿ, ಸಂಖ್ಯೆಯಲ್ಲಿ ಅಪಾರ. ಹೀಗೆ ಸನ್ನಿವೇಶದ ಪರಿಣಾಮಕ್ಕೆ ಸಿಕ್ಕು, ನುಚ್ಚುನೂರಾಗಿ, ಅನುಭವದಿಂದ ಸುಲಭವಾಗಿ ಸಾಗುತ್ತ ಬಂದ ಈ ಪ್ರಾಣಿಗಳಲ್ಲಿ ಅನುಭವವೂ, ಪರಾಪರಗಳನ್ನು ಯೋಚಿಸಿ ನಿಷ್ಕರ್ಷಿಸಬಲ್ಲ ತಿಳಿವೂ ವಿಕಾಸಹೊಂದಿ ಜೊತೆಯಲ್ಲಿಯೇ ಸಾಗಿವೆ.

ಎಚ್. ಬಿ. ದೇವರಾಜ ಸರ್ಕಾರ್

ಗಾಥಾಸಪ್ತಶತಿಯಿಂದ

೧

ತೆರಳುವನೆನುವರು ನಾಳೆ ಮುಂಜಾನೆಯೊ
ಳಿನಿಯನು, ಕಲ್ಲೆದೆಯುವನು
ಎಂದೆಂದು ಬೆಳಗೇ ಆಗದೊಲೋ ತಾಯೆ
ಬೇಡುವೆ ಬೆಳೆಯಮ್ಮ ನಿಶಿಯೆ.

೨

ಆಕೆಯ ಮನೆಮುಂದೆ ನೀ ಹಾಯ್ದು ಹೋದಂದು
ಚಂಚಲೆ ನಿನ್ನನೆ ನೆನೆದು ;
ಪಂಜರದ ಹಕ್ಕಿವೊಲಿಣುಕಿಣುಕಿ ನೋಡಿದಳು
ಬೇಲಿಯ ಕಂಡಿಕಂಡಿಯೊಳು.

೩

ರಾತ್ರಿಯೊಳರ್ಧವ ಕ್ಷಣದೊಲು ಕಾತರೆ
ಕಳೆದಳು ನೀ ಬಹೆಯೆಂದು
ಸಂತಾಪ ಪರವಶೆಗುಳಿದರ್ಧ ; ವರ್ಷದೊ
ಲಾದುದು ನೀ ಬಾರದಂದು.

೪

ಬೇರೊಂದು ಹೆಣ್ಣನು ಬಯಸುವಂತಿನಿಯನು
ಕರುಣಿಸು ದೇವನೆ ಮತಿಯ ;
ಗುಣದೋಷದಂತರವೇನೆಂದು ತಿಳಿವನು
ಅಂತಾದರೋಪನು ತಾನು.

ಎಸ್. ವಿ. ಪರಮೇಶ್ವರಭಟ್ಟ.

ಪುಟ